ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ನವೆಂಬರ್ 8 ಶುಕ್ರವಾರ 2024

₹4

ಸಂಪುಟ: 45 | ಸಂಚಿಕೆ: 201 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, *website: www.mysurumithra.com*

ಮ್ಯಾನ್ಯುಯಲ್ ಸ್ಕ್ಯಾವೆಂಜರ್ ಸಮೀಕ್ಷೆ ಸದುಪಯೋಗಪಡಿಸಿಕೊಳ್ಳಲು ಮನವಿ

ಮೈಸೂರು, ನ.7(ಜಿಎ)–ರಾಜ್ಯದಲ್ಲಿ ನಡೆಯುತ್ತಿರುವ ಮ್ಯಾನ್ಯುಯಲ್ ಸ್ಕ್ಯಾವೆಂಜರ್ ಸಮೀಕ್ಷೆ ಸದುಪಯೋಗಪಡಿಸಿಕೊಳ್ಳುವಂತೆ ಅಖಿಲ ಕರ್ನಾಟಕ ಅರುಂಧತಿಯಾರ್ ಮಹಾಸಭಾ ಆಗ್ರಹಿಸಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ರಾಜ್ಯಾಧ್ಯಕ್ಷ ಆರ್.ಕೃಷ್ಣ ಮಾತನಾಡಿ, ಮೈಸೂರು, ಮಂಡ್ಯ, ಹಾಸನ, ಕೊಡಗು, ಚಾಮರಾಜನಗರ ಜಿಲ್ಲೆಗಳಲ್ಲಿ ಆರಂಭವಾಗಿರುವ ಮ್ಯಾನ್ಯುಯಲ್ ಸ್ಕ್ಯಾವೆಂಜರ್ ಸಮೀಕ್ಷೆ ವೇಳೆ ಸಮುದಾಯಕ್ಕಾಗಿ ದುಡಿಯುತ್ತಿರುವ ಜನಪ್ರತಿನಿಧಿಗಳು, ಸಂಘಟನೆಯ ಮುಖಂಡರನ್ನೂ ಬಳಸಿಕೊಳ್ಳಬೇಕು ಎಂದರು.

ಈ ಹಿಂದೆ ನಡೆಸಿದ ಸಮೀಕ್ಷೆಯನ್ನು ಗುರುತಿಸಿ ಮ್ಯಾನ್ಯುಯಲ್ ಸ್ಕ್ಯಾವೆಂಜರ್ ಕುಟುಂಬಗಳಿಗೆ ಸಾಲದ ಬದಲು ಸರ್ಕಾರಿ ಕೆಲಸ ಕೊಡಿಸಿಕೊಡಬೇಕು. ಕನಿಷ್ಟ ಎರಡು ಎಕರೆ ಜಮೀನು ನೀಡಬೇಕು, ಮನೆ ಕಟ್ಟಿಸಿಕೊಡಬೇಕು, ಅವರ ಮಕ್ಕಳ ವಿದ್ಯಾಭ್ಯಾಸಕ್ಕೆ ತಕ್ಕಂತೆ ಆರ್ಥಿಕ ನೆರವು ನೀಡಿ, ಸರ್ಕಾರಿ ಉದ್ಯೋಗಗಳಲ್ಲಿ ನೇರ ನೇಮಕಾತಿ ಮಾಡಿಕೊಳ್ಳಬೇಕು, ಕುಟುಂಬದ ಹಿರಿಯ ನಾಗರಿಕರಿಗೆ ಕನಿಷ್ಠ 15 ಸಾವಿರ ರೂ. ಮಾಸಾಶನ ಮಂಜೂರು ಮಾಡಬೇಕೆಂದು ಆಗ್ರಹಿಸಿದರು.

ಸಮೀಕ್ಷೆ ವೇಳೆ ಸಂಬಂಧಿತ ಅಧಿಕಾರಿಗಳು ಮಾನವೀಯತೆಯಿಂದ ವರ್ತಿಸಬೇಕು, ಸರ್ಕಾರದ ಪುನರ್ವಸತಿ ಯೋಜನೆಗಳನ್ನು ಗೌಪ್ಯವಾಗಿರಿಸುವ ಧೋರಣೆ ಕೈಬಿಟ್ಟು ಸವಲತ್ತು ದೊರಕಿಸಿಕೊಡಬೇಕು. ಇಲ್ಲದಿದ್ದರೆ ಹೋರಾಟ ನಡೆಸಲಾಗುವುದು ಎಂದರು. ಸುದ್ದಿಗೋಷ್ಠಿಯಲ್ಲಿ ಪದಾಧಿಕಾರಿಗಳಾದ ಆರ್.ಸುಮಲತ, ವಿಜಯ್, ಕೆ.ನಾಗಮಣಿ, ಕೆ.ಸುರೇಶ್, ಶ್ರೀನಿವಾಸ್ ಮತ್ತಿತರರು ಉಪಸ್ಥಿತರಿದ್ದರು.

ನ.10, 'ಕಣಿವೆಯ ಹಾಡು' ನಾಟಕ ಪ್ರದರ್ಶನ



ಮೈಸೂರು, ನ. 7– ರಂಗಾಸಕ್ತರಿಗಾಗಿ ನಟನವು ವಾರಾಂತ್ಯ ರಂಗ ಪ್ರದರ್ಶನಗಳನ್ನು ನಡೆಸುತ್ತಿದ್ದು, ನ.10ರಂದು ಸಂಜೆ 6.30ಕ್ಕೆ ರಾಮಕೃಷ್ಣನಗರದಲ್ಲಿರುವ ನಟನ ರಂಗಶಾಲೆಯಲ್ಲಿ ನಟನ ಪಯಣ ರೆಪರ್ಟರಿ ತಂಡದಿಂದ 'ಕಣಿವೆಯ ಹಾಡು' ನಾಟಕವು ಪ್ರದರ್ಶನಗೊಳ್ಳಲಿದೆ.

ನಾಟಕದ ರಚನೆ ಅತೋಲ್ ಫ್ಯೂಗಾರ್ಡ್ ಅವರದ್ದು. ಡಾ.ಮೀರಾ ಮೂರ್ತಿ ಅವರು ಈ ನಾಟಕವನ್ನು ಕನ್ನಡಕ್ಕೆ ಅನುವಾದಿಸಿದ್ದು, ಅನುಷ್ ಶೆಟ್ಟಿ ಮತ್ತು ಮುನ್ನ ಮೈಸೂರು ಅವರು ನಾಟಕಕ್ಕೆ ಸಂಗೀತ ಒದಗಿಸಿದ್ದಾರೆ. ನಟನದ ಶ್ರೀ ಮೇಘ ಸಮೀರ ಮತ್ತು ದಿಶಾ ರಮೇಶ್ ಅವರು ಅಭಿನಯಿಸುತ್ತಿದ್ದು ನಾಡಿನ ಹೆಸರಾಂತ ರಂಗತಜ್ಞ ಡಾ. ಶ್ರೀಪಾದ ಭಟ್ ಅವರು ನಾಟಕದ ವಿನ್ಯಾಸ ಮತ್ತು ನಿರ್ದೇಶನ ಮಾಡಿದ್ದಾರೆ. ಹೆಚ್ಚಿನ ಮಾಹಿತಿಗೆ ಮೊ. ನಂ.:7259537777, 9480468327, 9845595505ನ್ನು ಸಂಪರ್ಕಿಸಬಹುದು.

ನ.10ರಂದು ಹೃದ್ರೋಗ ತಡೆ ಕುರಿತು ಅರಿವಿನ ವಾಕಥಾನ್

ಮೈಸೂರು, ನ.7(ಜಿಎ)–ಕಾರ್ಡಿಯಾಲಜಿ ಸೊಸೈಟಿ ಆಫ್ ಇಂಡಿಯಾದ ಮೈಸೂರು ಶಾಖೆಯ 25ನೇ ವಾರ್ಷಿಕೋತ್ಸವದ ಅಂಗವಾಗಿ ನ.10ರಂದು ಬೆಳಗ್ಗೆ 8 ಗಂಟೆಗೆ ಜೆ.ಕೆ.ಮೈದಾನದಿಂದ ಹೃದ್ರೋಗ ತಡೆ ಕುರಿತಂತೆ ಅರಿವಿನ ವಾಕಥಾನ್ ಹಮ್ಮಿಕೊಳ್ಳಲಾಗಿದೆ

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಕಾರ್ಯದರ್ಶಿ ಡಾ. ಶ್ರೀನಿಧಿ ಹೆಗಡೆ ಈ ವಿಷಯ ತಿಳಿಸಿ, ಮಳೆ ಮತ್ತು ದಸರಾ ಕಾರಣದಿಂದಾಗಿ ಈ ಬಾರಿ ವಿಳಂಬವಾಗಿ ವಿಶ್ವ ಹೃದಯ ದಿನದ ಅಂಗವಾಗಿ ಈ ಕಾರ್ಯಕ್ರಮ ಆಯೋಜಿಸಿದ್ದು, ಸುಮಾರು ಎರಡು ಕಿಮೀ ಅಂತರದ್ದಾಗಿದೆ. ಈ ಬಾರಿಯ 'ನಿಮ್ಮ ಹೃದಯಕ್ಕೆ ಕೆಲಸ ಕೊಡಿ' ಧ್ಯೇಯ ವಾಕ್ಯದೊಂದಿಗೆ ನಡೆಯಲಿದೆ ಎಂದರು.

ಬದಲಾದ ಜೀವನಶೈಲಿ, ವಾಯು ಮಾಲಿನ್ಯ, ಆನುವಂಶಿಕ ಕಾರಣಗಳಿಂದಲೂ ಹೃದ್ರೋಗ ಬರಬಹುದಾಗಿದೆ. ಹೀಗಾಗಿ ಕೈಗೊಳ್ಳಬೇಕಾದ ಮುನ್ನೆಚ್ಚರಿಕೆ ಕ್ರಮ ಕುರಿತು ಈ ವೇಳೆ ಅರಿವು ಮೂಡಿಸಲಾಗುವುದು ಎಂದು ಅವರು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಉಪಾಧ್ಯಕ್ಷೆ ಡಾ.ಎಸ್.ಹೇಮಾ ಉಪಸ್ಥಿತರಿದ್ದರು.

ನ.10, ಅಂತರಶಾಲಾ ಚಿತ್ರಕಲಾ ಸ್ಪರ್ಧೆ

ಮೈಸೂರು, ನ.7(ಜಿಎ)–ನಕ್ಷ ಬಿಲ್ಡರ್ಸ್ ಸಂಸ್ಥೆ ವತಿಯಿಂದ ನ.10ರಂದು ಬೆಳಗ್ಗೆ 10 ಗಂಟೆಗೆ ನಗರದ ಮಹರ್ಷಿ ಪಬ್ಲಿಕ್ ಶಾಲೆಯಲ್ಲಿ ಅಂತರ ಶಾಲಾ ಚಿತ್ರಕಲಾ ಸ್ಪರ್ಧೆ ಏರ್ಪಡಿಸಲಾಗಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಸಂಸ್ಥೆಯ ನಿರ್ದೇಶಕ ವಿನಯ್ ಶಂಕರ್ ಈ ವಿಷಯ ತಿಳಿಸಿ, ಒಂದನೇ ತರಗತಿಯಿಂದ ನಾಲ್ಕನೇ ತರಗತಿಯವರಿಗೆ 'ನನ್ನ ಕನಸಿನ ಮನೆ', ಐದರಿಂದ ಏಳನೇ ತರಗತಿಯವರಿಗೆ 'ವರ್ಣ ರಂಜಿತ ನಗರಗಳು', ಎಂಟರಿಂದ ಹತ್ತನೇ ತರಗತಿಯವರಿಗೆ 'ಭವಿಷ್ಯದ ನಿರ್ಮಾಣ' ವಿಷಯ ಕುರಿತು ವರ್ಣಚಿತ್ರ ರಚನೆಗೆ ಸ್ಪರ್ಧೆ ನಡೆಯಲಿದ್ದು, ಬೆಳಗ್ಗೆ 8.30ಕ್ಕೆ ನೋಂದಣಿ ಆರಂಭವಾಗಲಿದೆ. ಹೆಚ್ಚಿನ ಮಾಹಿತಿಗಾಗಿ ಮೊ.ಸಂ.: 7411526622 ಅನ್ನು ಸಂಪರ್ಕಿಸಿ ಎಂದರು. ಸುದ್ದಿಗೋಷ್ಠಿಯಲ್ಲಿ ಸಿಇಓ ಆದಿತ್ಯ, ಸೌರಭ್ ಉಪಸ್ಥಿತರಿದ್ದರು.

ಕನ್ನಡ ಬಾರದ ಸರ್ಕಾರಿ ನೌಕರರಿಗೆ, ಜನರಿಗೆ ಅಂಚೆ ಮೂಲಕ ಕನ್ನಡ ಶಿಕ್ಷಣ

ಮೈಸೂರು,ನ.7–ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ ಮತ್ತು ಮೈಸೂರಿನ ಭಾರತೀಯ ಭಾಷೆಗಳ ಕೇಂದ್ರ ಸಂಸ್ಥೆ ಸಹಯೋಗದೊಂದಿಗೆ ಕರ್ನಾಟಕದಲ್ಲಿರುವ ಕನ್ನಡ ಬಾರದ ಎಲ್ಲಾ ಸರ್ಕಾರಿ ನೌಕರರಿಗಾಗಿ ಹನ್ನೆರಡು ತಿಂಗಳು ಅಂಚೆ ಮೂಲಕ ಕನ್ನಡ ಶಿಕ್ಷಣ ಯೋಜನೆಯನ್ನು ನಡೆಸುತ್ತಿದ್ದು, ಕರ್ನಾಟಕದಲ್ಲಿರುವ ಎಲ್ಲಾ ನಗರಸಭೆ, ಕ.ವಿ.ಪ್ರ.ನಿ.ನಿ., ಕೆ.ಎಸ್.ಆರ್.ಟಿ.ಸಿ., ವಿಶ್ವವಿದ್ಯಾಲಯಗಳು, ಶಾಲಾ ಕಾಲೇಜುಗಳು ಮತ್ತಿತರ ಸರ್ಕಾರಿ ಅನುದಾನ ಪಡೆಯುವ ಸಂಸ್ಥೆಗಳ ನೌಕರರು ಮತ್ತು ಎಲ್ಲಾ ರಾಷ್ಟ್ರೀಕೃತ ಬ್ಯಾಂಕುಗಳ ನೌಕರರು ಶುಲ್ಕ ರಹಿತವಾಗಿ ನೋಂದಾಯಿಸಿಕೊಳ್ಳಬಹುದು.

ಕರ್ನಾಟಕದ ಸರ್ಕಾರಿ ನೌಕರರು ಸಂಪರ್ಕ ಶಿಬಿರ ಹಾಗೂ ಪರೀಕ್ಷೆಗಳಿಗೆ ಹಾಜರಾಗುವವರ ಕಚೇರಿ ಗೈರು ಹಾಜರಿಯನ್ನು ಅನ್ಯಕಾರ್ಯ ನಿಮಿತ್ತ ಎಂದು ಪರಿಗಣಿಸಲಾಗುವುದು. ಅಂಚೆ ಮೂಲಕ ಕನ್ನಡ ಶಿಕ್ಷಣ ಯೋಜನೆಗೆ ನೋಂದಾಯಿಸಿಕೊಂಡು ಉತ್ತೀರ್ಣರಾದವರಿಗೆ ಕರ್ನಾಟಕ ಲೋಕಸೇವಾ ಆಯೋಗದ ಕನ್ನಡ ಪರೀಕ್ಷೆಯಿಂದ ವಿನಾಯಿತಿ ನೀಡಲಾಗುತ್ತದೆ. ಈ ಯೋಜನೆಯನ್ನು ಇದೀಗ ಸಾರ್ವಜನಿಕರಿಗೂ ವಿಸ್ತರಿಸಲಾಗಿದ್ದು, ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರುವ ಹಾಗೂ 18 ರಿಂದ 50 ವಯಸ್ಸಿನ ಒಳಗಿರುವವರು ಸಾರ್ವಜನಿಕರು ಅರ್ಜಿ ಸಲ್ಲಿಸಬಹುದಾಗಿದೆ.

ಆಸಕ್ತರು ಅರ್ಜಿ ನಮೂನೆ ಮತ್ತು ತರಬೇತಿ ವಿವರಗಳನ್ನು ಮಾನಸಗಂಗೋತ್ರಿಯ ಭಾರತೀಯ ಭಾಷೆಗಳ ಕೇಂದ್ರ ಸಂಸ್ಥೆಯ ಅಂಚೆ ಮೂಲಕ ಕನ್ನಡ ಶಿಕ್ಷಣ ಯೋಜನೆ, ಪ್ರಭಾರಿ ಅಧಿಕಾರಿ ಅವರ ದೂ.ಸಂ.:0821–2345128 ಅಥವಾ 5 ರೂಪಾಯಿಯ ಅಂಚೆ ಚೀಟಿಯನ್ನು ಸ್ವ–ವಿಳಾಸದ ಲಕೋಟೆಯನ್ನು ಕಳುಹಿಸಿ ಪಡೆದುಕೊಳ್ಳಬಹುದಾಗಿದ್ದು, ಭರ್ತಿ ಮಾಡಿದ ಅರ್ಜಿಗಳನ್ನು ನ.30ರೊಳಗೆ ಅರ್ಜಿ ಜೊತೆಯಲ್ಲಿ ರೂ.250 ಡಿಮ್ಯಾಂಡ್ ಡ್ರಾಫ್ಟ್‌ನ್ನು ಕಳುಹಿಸಿ ಕೊಡಬೇಕು. ನೋಂದಣಿಯಾದವರಿಗೆ ಇಪ್ಪತ್ತು ಪಾಠಾವಳಿಗಳನ್ನು ಕಳುಹಿಸಲಾಗುವುದು. ತರಬೇತಿ ಮತ್ತು ಸಂಪರ್ಕ ಶಿಬಿರದ ಅಂತ್ಯದಲ್ಲಿ ಪರೀಕ್ಷೆಗಳನ್ನು ಪರೀಕ್ಷೆಗಳನ್ನು ನಡೆಸಲಾಗುವುದು.

ಇಂದು ಹಲವೆಡೆ ವಿದ್ಯುತ್ ವ್ಯತ್ಯಯ

ಮೈಸೂರು: ನ.8ರಂದು ಬೆಳಗ್ಗೆ 10ರಿಂದ ಸಂಜೆ 6ರವರೆಗೆ ಆಯರಹಳ್ಳಿ ವಿದ್ಯುತ್ ವಿತರಣಾ ಕೇಂದ್ರದಲ್ಲಿ ಕ.ವಿ.ಪ್ರ.ನಿ.ನಿ. ವತಿಯಿಂದ 3ನೇ ತ್ರೈಮಾಸಿಕ ಅವಧಿಯ ನಿರ್ವಹಣಾ ಕಾಮಗಾರಿ ಹಮ್ಮಿಕೊಳ್ಳಲಾಗಿದ್ದು, ಚಿಕ್ಕೇಗೌಡನಹುಂಡಿ, ದೇವಲಾಪುರ, ರಾಯನಹುಂಡಿ, ಆಯರಹಳ್ಳಿ, ಮರಿಗೌಡನಹುಂಡಿ, ಕುಂಬ್ರಹಳ್ಳಿ, ಕುಂಬ್ರಹಳ್ಳಿ ಮಠ, ಸೋಮೇಶ್ವರಪುರ, ಬಸಹಳ್ಳಿಹುಂಡಿ, ಕಿರಾಳು, ಹದಿನಾರು, ಹದಿನಾರು ಮೋಳೆ, ಮೂಡಹಳ್ಳಿ, ಮಲ್ಲರಾಜಹುಂಡಿ, ಭರಣಿ ಕುಡಿಯುವ ನೀರಿನ ಸ್ಥಾವರ ಹಾಗೂ ಸುತ್ತಮುತ್ತ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ.

ಉಚಿತ ಹೃದ್ರೋಗ ತಪಾಸಣೆ ಶಿಬಿರ

ಮೈಸೂರು, ನ.7– ಮೈಸೂರಿನ ರಾಮಕೃಷ್ಣನಗರದ ಸುಯೋಗ್ ಆಸ್ಪತ್ರೆಯಲ್ಲಿ ನ.11ರಿಂದ 16ರವರೆಗೆ ಉಚಿತ ಹೃದ್ರೋಗ ತಪಾಸಣಾ ಶಿಬಿರವನ್ನು ಆಯೋಜಿಸಲಾಗಿದೆ. ಶಿಬಿರದಲ್ಲಿ ಉಚಿತ ಸಮಾಲೋಚನೆ ಇದ್ದು, ವೈದ್ಯರು ಸೂಚಿಸುವ ಇ.ಸಿ.ಜಿ., ಲಿಪಿಡ್ ಪ್ರೊಫೈಲ್, ಆರ್.ಬಿ.ಎಸ್., ಎಕೋ ಸ್ಕ್ರೀನಿಂಗ್, ಟಿ.ಎಂ.ಟಿ ಪರೀಕ್ಷೆಗಳಿಗೆ ವಿಶೇಷ ಪ್ಯಾಕೇಜ್ ಲಭ್ಯವಿರುತ್ತದೆ. ಹೃದಯದ ಸಮಸ್ಯೆಗಳಿರುವವರು ಕೂಡಲೇ ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳತಕ್ಕದ್ದು. ಮಾಹಿತಿಗೆ 0821–2533600, 9986399862 ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ಸರ್ಕಾರಿ ಕಚೇರಿ, ಆವರಣಗಳಲ್ಲಿ ಧೂಮಪಾನ, ತಂಬಾಕು ಸೇವನೆ ನಿಷೇಧ



ಬೆಂಗಳೂರು: ಸರ್ಕಾರಿ ಕಚೇರಿಗಳಲ್ಲಿ ಹಾಗೂ ಕಚೇರಿ ಆವರಣಗಳಲ್ಲಿ ಧೂಮಪಾನ ಇತರೆ ತಂಬಾಕು ಉತ್ಪನ್ನಗಳ ಸೇವನೆ ನಿಷೇಧಿಸಿ, ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ.


ಧೂಮಪಾನ ಹಾಗೂ ತಂಬಾಕಿನ ಇತರೆ ಉತ್ಪನ್ನಗಳ ಸೇವನೆಯು ಆರೋಗ್ಯಕ್ಕೆ ಮಾರಕವಾಗಿದ್ದು, ಸಾರ್ವಜನಿಕ ಪ್ರದೇಶಗಳಲ್ಲಿ ಇಂತಹ ಉತ್ಪನ್ನಗಳ ಸೇವನೆಯನ್ನು ಸಂಪೂರ್ಣವಾಗಿ ನಿಷೇಧಿಸಿ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ. ಕರ್ನಾಟಕ ರಾಜ್ಯ ನಾಗರಿಕ ಸೇವಾ (ನಡತೆ) ನಿಯಮಗಳು, 2021ರ ನಿಯಮ–31ರಲ್ಲಿ ಸಾರ್ವಜನಿಕ ಸ್ಥಳದಲ್ಲಿ ಯಾವುದೇ ಮಾದಕ ಪಾನೀಯ ಅಥವಾ ಮಾದಕ ವಸ್ತುವನ್ನು ಸೇವಿಸುವುದನ್ನು ಕೂಡ ನಿಷೇಧಿಸಲಾಗಿದೆ. ಶಾಸನಾತ್ಮಕ ಎಚ್ಚರಿಕೆಗಳ ಹೊರತಾಗಿಯೂ ಸರ್ಕಾರಿ ಕಚೇರಿಗಳಲ್ಲಿ ಹಾಗೂ ಕಚೇರಿಯ ಆವರಣದಲ್ಲಿ ತಂಬಾಕು ಉತ್ಪನ್ನಗಳ ಸೇವನೆ ಆಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ. ಈ ಹಿನ್ನೆಲೆಯಲ್ಲಿ ಸಿಬ್ಬಂದಿಗಳ ಆರೋಗ್ಯದ ಹಿತದೃಷ್ಟಿಯಿಂದ ಹಾಗೂ ಪರೋಕ್ಷ ಧೂಮಪಾನದಿಂದ ಸಾರ್ವಜನಿಕರನ್ನು ಹಾಗೂ ಸರ್ಕಾರಿ ಸಿಬ್ಬಂದಿಗಳನ್ನು ರಕ್ಷಿಸುವ ಉದ್ದೇಶದಿಂದ ಈ ಕ್ರಮ ಕೈಗೊಳ್ಳಲಾಗಿದೆ. ಅದರಂತೆ ಯಾವುದೇ ಸರ್ಕಾರಿ ನೌಕರನು ಸರ್ಕಾರಿ ಕಚೇರಿಗಳಲ್ಲಿ ಹಾಗೂ ಕಚೇರಿ ಆವರಣದಲ್ಲಿ ಧೂಮಪಾನ ಸೇರಿದಂತೆ ಯಾವುದೇ ತಂಬಾಕು ಉತ್ಪನ್ನಗಳ ಸೇವನೆ ಮಾಡುವುದನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದೆ. ಈ ಸಂಬಂಧ ಎಚ್ಚರಿಕೆ ಫಲಕವನ್ನು ಕಚೇರಿ ಸೂಕ್ತ ಸ್ಥಳಗಳಲ್ಲಿ ಪ್ರದರ್ಶಿಸತಕ್ಕದ್ದು. ಈ ಸೂಚನೆಗಳನ್ನು ಉಲ್ಲಂಘಿಸಿ ಯಾವುದೇ ಸರ್ಕಾರಿ ನೌಕರ ಕಚೇರಿಯಲ್ಲಿ ಅಥವಾ ಕಚೇರಿಯ ಆವರಣದಲ್ಲಿ ಧೂಮಪಾನ ಮಾಡುವುದು ಮತ್ತು ಯಾವುದೇ ತಂಬಾಕು ಉತ್ಪನ್ನಗಳನ್ನು (ಗುಟ್ಕಾ, ಪಾನ್ ಮಸಾಲ, ಹೊಗೆಸೊಪ್ಪು, ಇತ್ಯಾದಿ) ಸೇವಿಸುವುದು ಕಂಡುಬಂದಲ್ಲಿ ಅಂತಹ ನೌಕರರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳತಕ್ಕದ್ದು ಎಂದು ಆದೇಶದಲ್ಲಿ ಉಲ್ಲೇಖಿಸಲಾಗಿದೆ.

ಪತ್ರಿಕಾ ವಿತರಕರಿಂದ ಪೌರಕಾರ್ಮಿಕರಿಗೆ ಸನ್ಮಾನ...




ಮೈಸೂರಿನ ವಿವಿ ಮೊಹಲ್ಲಾದ (ಒಂಟಿಕೊಪ್ಪಲ್) ಪತ್ರಿಕಾ ವಿತರಣಾ ಕೇಂದ್ರದಲ್ಲಿ ದಸರಾ, ದೀಪಾವಳಿ ಹಾಗೂ ಕನ್ನಡ ರಾಜ್ಯೋತ್ಸವದ ಅಂಗವಾಗಿ ವಿತರಣಾ ಕೇಂದ್ರದ ಹತ್ತಿರ ವರ್ಷದ 365 ದಿನವೂ ನಿರಂತರವಾಗಿ ಸ್ವಚ್ಛತಾ ಕಾರ್ಯ ನಿರ್ವಹಿಸುತ್ತಿರುವ ಪೌರಕಾರ್ಮಿಕರಿಗೆ (ಒಂಟಿಕೊಪ್ಪಲ್) ಪತ್ರಿಕಾ ವಿತರಣಾ ಕೇಂದ್ರದ ಎಲ್ಲಾ ವಿತರಕರು, ಆತ್ಮೀಯರ ವತಿಯಿಂದ ನೆನಪಿನ ಕಾಣಿಕೆ ಹಾಗೂ ಸಿಹಿ ನೀಡಿ, ಗೌರವಿಸಲಾಯಿತು.

ಡಾ.ವಿಷ್ಣು, ಅಂಬಿ ಅಭಿನಯದ ಚಿತ್ರಗಳ ಸಂಗೀತ ಸಂಜೆ



ಮೈಸೂರು, ನ.7(ಜಿಎ)–ಮೈಸೂರಿನ ನಿನಾದ್ ಮ್ಯೂಸಿಕಲ್ ಟ್ರಸ್ಟ್ ವತಿಯಿಂದ ನ.9ರಂದು ಸಂಜೆ 5 ಗಂಟೆಗೆ ನಗರದ ಜಗನ್ಮೋಹನ ಅರಮನೆ ಸಭಾಂಗಣದಲ್ಲಿ ಡಾ.ವಿಷ್ಣುವರ್ಧನ್, ಅಂಬರೀಶ್ ಸ್ಮರಣಾರ್ಥ ಇವರು ನಟಿಸಿರುವ ಚಿತ್ರಗಳ ಗೀತೆಗಳ ಸಂಗೀತ ಸಂಜೆ ಆಯೋಜಿಸಲಾಗಿದೆ. ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಟ್ರಸ್ಟ್ ಅಧ್ಯಕ್ಷ ಎ.ಎಸ್.ಪ್ರಸನ್ನಕುಮಾರ್ ಈ ವಿಷಯ ತಿಳಿಸಿ, ಸಂಸ್ಥೆಯ 30ಕ್ಕೂ ಹೆಚ್ಚು ವಿದ್ಯಾರ್ಥಿಗಳು ಹಾಡುಗಳನ್ನು ಪ್ರಸ್ತುತಪಡಿಸಲಿದ್ದಾರೆ. ಸುದ್ದಿಗೋಷ್ಠಿಯಲ್ಲಿ ಡಾ.ಸುಭಾಷ್, ರೂಪಶ್ರೀ, ಸಿ.ಜಿ.ಮೂರ್ತಿರಾವ್, ಸೋಮಶೇಖರ್ ಉಪಸ್ಥಿತರಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

8.11.2024 ಶುಕ್ರವಾರ, ಮಳೆ ನಕ್ಷತ್ರ: ವಿಶಾಖ, 06.11.2024 ರಿಂದ 18.11.2024 ಕ್ರೋಧಿನಾಮ ಸಂವತ್ಸರ, ದಕ್ಷಿಣಾಯನ, ಶರದ್ ಋತು, ಕಾರ್ತಿಕ ಮಾಸ, ಶುಕ್ಲ ಪಕ್ಷ, ತಿಥಿ: ಸಪ್ತಮಿ, ನಕ್ಷತ್ರ: ಉಷಾ, ರಾಹುಕಾಲ: ಬೆಳಗ್ಗೆ 10.30 ರಿಂದ 12 ರವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಸಂಧಿವಾತಕ್ಕೆ ಯೋಗ ಮತ್ತು ಆಕ್ಯೂಪಂಕ್ಚರ್ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 9 ರಿಂದ.

■ **ಕೆ. ಪುಟ್ಟಸ್ವಾಮಿ ಪ್ರಥಮ ದರ್ಜೆ ಕಾಲೇಜು :** ಕೃತಕ ಬುದ್ಧಿಮತ್ತೆಯ ಮೂಲಕ ಜಗತ್ತನ್ನು ಮರುರೂಪಿಸುವುದು ಕುರಿತು ವಿಚಾರ ಸಂಕಿರಣ, ಉದ್ಘಾಟನೆ : ಮೈಸೂರು ವಿವಿ ಕುಲಸಚಿವರಾದ ಶ್ರೀಮತಿ ವಿ.ಆರ್. ಶೈಲಜಾ, ಅಧ್ಯಕ್ಷತೆ : ವಿದ್ಯಾವರ್ಧಕ ಸಂಘದ ಅಧ್ಯಕ್ಷ ಗುಂಡಪ್ಪಗೌಡ, ಪ್ರಾಸ್ತಾವಿಕ ಭಾಷಣ : ಡಾ. ಡಿ.ಎಸ್. ಗುರು, ಮುಖ್ಯ ಅತಿಥಿಗಳು : ಸಂಘದ ಕಾರ್ಯದರ್ಶಿ ಪಿ. ವಿಶ್ವನಾಥ್, ಗೌರವ ಅತಿಥಿಗಳು : ಖಜಾಂಚಿ ಶ್ರೀಶೈಲ ರಾಮಣ್ಣನವರ್, ಪ್ರಿನ್ಸಿಪಾಲ್ ಡಾ. ಎಂ. ಶಿವಲಿಂಗೇಗೌಡ, ಸ್ಥಳ: ಸೆಮಿನಾರ್ ಹಾಲ್, ಬೆಳಗ್ಗೆ 9 ರಿಂದ.

■ **ನವಕರ್ನಾಟಕ ಪಬ್ಲಿಕೇಷನ್ಸ್ ಪ್ರೈವೇಟ್ ಲಿಮಿಟೆಡ್ :** ಕನ್ನಡ ರಾಜ್ಯೋತ್ಸವದ ಪ್ರಯುಕ್ತ ವಿಶೇಷ ರಿಯಾಯಿತಿ ಮಾರಾಟ, ಸ್ಥಳ: ನವಕರ್ನಾಟಕ ಪಬ್ಲಿಕೇಷನ್ಸ್ ಪ್ರೈವೇಟ್ ಲಿಮಿಟೆಡ್, ರಾಮಸ್ವಾಮಿ ವೃತ್ತ, ಬೆಳಗ್ಗೆ 9.30 ರಿಂದ.

■ **ರಾಮ್‌ಸನ್ಸ್ ಪ್ರತಿಷ್ಠಾನ :** ಬೊಂಬೆ ಮನೆ, ದಸರೆಯ ಬೊಂಬೆ ಪ್ರದರ್ಶನದ 20ನೇ ಅವತರಣಿಕೆ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, 91, ಆಮ್ರಪಾಲಿ ಸೀರೆ ಮಳಿಗೆಯ ಮೇಲೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10 ರಿಂದ.

■ **ಜಗದ್ಗುರು ಶ್ರೀ ವೀರಸಿಂಹಾಸನ ಮಹಾ ಸಂಸ್ಥಾನ ಮಠ (ಶ್ರೀ ಸುತ್ತೂರು ಕ್ಷೇತ್ರ, ಮೈಸೂರು ಜಿಲ್ಲೆ) :** ಆದಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ಕರ್ತೃ ಗದ್ದುಗೆ, ಶ್ರೀ ಮಹದೇಶ್ವರ ಸನ್ನಿಧಿ, ಶ್ರೀ ವೀರಭದ್ರೇಶ್ವರ ಮತ್ತು ಶ್ರೀ ಸೋಮೇಶ್ವರ ದೇವಸ್ಥಾನಗಳು, ಕಾರ್ತಿಕ ಮಾಸದ ವಿಶೇಷ ಪೂಜಾ ಕಾರ್ಯಕ್ರಮಗಳು, ಸ್ಥಳ: ಶ್ರೀ ಸುತ್ತೂರು ಶ್ರೀ ಕ್ಷೇತ್ರ, ಮೈಸೂರು ಜಿಲ್ಲೆ, ಬೆಳಗ್ಗೆಯಿಂದ.

■ **ಶ್ರೀ ಮಲೆ ಮಹದೇಶ್ವರಸ್ವಾಮಿ ದೇವಸ್ಥಾನ ಟ್ರಸ್ಟ್ :** 47ನೇ ವರ್ಷದ ಕಾರ್ತಿಕ ಮಾಸದ ಶ್ರೀ ಮಲೆ ಮಹದೇಶ್ವರಸ್ವಾಮಿ ಪೂಜಾ ಮಹೋತ್ಸವ, 26ನೇ ವರ್ಷದ ಮಹಾಕುಂಭಾಭಿಷೇಕ, 10ನೇ ವರ್ಷದ ಹಾಲರವಿ ಸೇವೆ, ಶ್ರೀ ಸ್ವಾಮಿಗೆ ಬೆಣ್ಣೆ ಅಲಂಕಾರ, ವಿಶೇಷ ಹೂವಿನ ಅಲಂಕಾರ ಪೂಜೆ, ಬೆಳಗ್ಗೆ 10ಕ್ಕೆ ಉಚಿತ ಆರೋಗ್ಯ ತಪಾಸಣಾ ಮತ್ತು ಔಷಧಿ ವಿತರಣಾ ಶಿಬಿರ, ಮಧ್ಯಾಹ್ನ 1ಕ್ಕೆ ಮಹಾ ಅನ್ನಸಂತರ್ಪಣೆ, ಮಧ್ಯಾಹ್ನ 12ಕ್ಕೆ ಭಜನಾ ಮಂಡಳಿಯಿಂದ ಭಜನೆ, ಮಧ್ಯಾಹ್ನ 1ಕ್ಕೆ ಶಂಕರ ಜಯಂತಿ ಭಜನಾ ಮಂಡಳಿಯಿಂದ ಭಜನೆ, ಮಧ್ಯಾಹ್ನ 2ಕ್ಕೆ ಶ್ರೀ ವರಲಕ್ಷ್ಮಿ ಭಜನಾ ಮಂಡಳಿಯಿಂದ ಭಜನೆ, ಸಂಜೆ 6ಕ್ಕೆ ಶ್ರೀ ಶಾಂಭವಿ ಸಂಗೀತ ಶಾಲೆ ಮಕ್ಕಳಿಂದ ಹಾಡುಗಾರಿಕೆ, ಸಂಜೆ 7.30ಕ್ಕೆ ಸ್ವರಾಲಯ ಭಜನಾ ಮಂಡಳಿಯಿಂದ ಭಜನೆ, ಸ್ಥಳ: ದೇವಸ್ಥಾನದ ಪ್ರಾಂಗಣ, ಗರಡಿಕೇರಿ, ಲಷ್ಕರ್ ಮೊಹಲ್ಲಾ.

■ **ನ್ಯಾಷನಲ್ ಆಂಟಿ ಡುಪ್ಲಿಕೇಷನ್ ಬ್ಯೂರೋ, ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗ, ಕರ್ನಾಟಕ ಮುಕ್ತ ವಿಶ್ವವಿದ್ಯಾನಿಲಯ :** ಆರ್ಟ್ ಅಂಡ್ ಮೈಂಡ್ ಫೆಸ್ಟ್ 2ಕೆ24 ಸಮಾರೋಪ ಸಮಾರಂಭ, ಉಪಸ್ಥಿತರು : ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಡಾ. ಎಂ. ರಾಮನಾಥನ್ ನಾಯ್ಡು, ಕರಾಮುವಿವಿ ಕುಲಸಚಿವ ಡಾ. ಹೆಚ್. ವಿಶ್ವನಾಥ್, ಡಾ. ಗೋವಿಂದರಾಜ್ ಶೆಟ್ಟಿ, ಮಾನವ ಹಕ್ಕುಗಳು ಮತ್ತು ಭ್ರಷ್ಟಚಾರ ವಿರೋಧಿ ವೇದಿಕೆ ರಾಜ್ಯ ಉಪಾಧ್ಯಕ್ಷ ಆರ್.ಪಿ. ಪ್ರವೀಣ್ ಕುಮಾರ್, ಡಾ. ಕೃತಿಕಾ ದೇವಿ, ಡಾ. ಸುಗಂಧಿ ಉಡುಪ, ಅಧ್ಯಕ್ಷತೆ : ನ್ಯಾಷನಲ್ ಆಂಟಿ ಡುಪ್ಲಿಕೇಷನ್ ಬ್ಯೂರೋ ರಾಷ್ಟ್ರೀಯ ಉಪಾಧ್ಯಕ್ಷ ಡಾ. ಸಿ.ವಿ. ಶ್ರೀನಾಥ್ ಶೆಟ್ಟಿ, ಸ್ಥಳ: ಕಾವೇರಿ ಸಭಾಂಗಣ, ಕರಾಮುವಿವಿ, ಬೆಳಗ್ಗೆ 10ಕ್ಕೆ.

■ **ಸುಯೋಗ್ ಆಸ್ಪತ್ರೆ :** ಚರ್ಮರೋಗ ಸಮಸ್ಯೆಗಳಿಗೆ ಉಚಿತ ತಪಾಸಣಾ ಶಿಬಿರ, ಸ್ಥಳ: ಸುಯೋಗ್ ಆಸ್ಪತ್ರೆ ಆವರಣ, ರಾಮಕೃಷ್ಣನಗರ, ಬೆಳಗ್ಗೆ 10 ರಿಂದ

■ **ಟೆರೇಷಿಯನ್ ಕಾಲೇಜು ಸಮಾಜಶಾಸ್ತ್ರ ಅಧ್ಯಯನ ವಿಭಾಗ, ಅಲ್ಯೂಮ್ನಿ ಅಸೋಸಿಯೇಷನ್, ಸಮಾಜ ಶಾಸ್ತ್ರ ಅಧ್ಯಯನ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ :** ಕಾಲೇಜುಗಳು ಮತ್ತು ವಿಶ್ವವಿದ್ಯಾನಿಲಯದ ಸಮಾಜ ವಿಜ್ಞಾನ ಉಪನ್ಯಾಸಕರಿಗೆ ಡಿಜಿಟಲ್ ಕೌಶಲ್ಯ ಅಭಿವೃದ್ಧಿ ಕುರಿತು ಕಾರ್ಯಾಗಾರ, ಉದ್ಘಾಟನೆ : ಟೆರೇಷಿಯನ್ ಕಾಲೇಜು ನಿರ್ದೇಶಕ ಡಾ. ಜುವಾನಿತಾ, ಮುಖ್ಯ ಅತಿಥಿಗಳು : ಕಾಲೇಜು ಪ್ರಿನ್ಸಿಪಾಲ್ ಡಾ. ಸಿ. ಜಯಂತಿ, ಅಧ್ಯಕ್ಷತೆ : ಪ್ರೊ. ಹೆಚ್.ಎಂ. ವಸಂತಮ್ಮ, ಸ್ಥಳ: ಅವೆ ಮರಿಯಾ ಸಭಾಂಗಣ, ಟೆರೇಷಿಯನ್ ಕಾಲೇಜು ಆವರಣ, ಬೆಳಗ್ಗೆ 10ಕ್ಕೆ.

■ **ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆ, ಎಂಎಂಕೆ ಮತ್ತು ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಮಹಿಳಾ ಮಹಾ ವಿದ್ಯಾಲಯ :** ಸುವರ್ಣ ಕರ್ನಾಟಕ 50: ಸಂಭ್ರಮಾಚರಣೆ, ಐತಿಹಾಸಿಕ ದಾಖಲೆಗಳ, ಛಾಯಾಚಿತ್ರಗಳ ಪ್ರದರ್ಶನ, ಸ್ಥಳ: ಎಂಎಂಕೆ ಮತ್ತು ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಮಹಿಳಾ ಮಹಾ ವಿದ್ಯಾಲಯ, ಕೃಷ್ಣಮೂರ್ತಿಪುರಂ, ಬೆಳಗ್ಗೆ 10.30 ರಿಂದ.

■ **ಎಂಎಂಕೆ ಮತ್ತು ಎಸ್‌ಡಿಎಂ ಮಹಿಳಾ ಮಹಾವಿದ್ಯಾಲಯ :** ಕನ್ನಡ ರಾಜ್ಯೋತ್ಸವ ಸಮಾರಂಭ, ಮುಖ್ಯ ಅತಿಥಿಗಳು : ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ನಿರ್ದೇಶಕರಾದ ಡಾ.ಎನ್.ಕೆ. ಲೋಲಾಕ್ಷಿ, ಅಧ್ಯಕ್ಷತೆ: ಪ್ರಿನ್ಸಿಪಾಲ್‌ರಾದ ಪ್ರೊ. ಎನ್. ಭಾರತಿ, ಪ್ರೊ. ನಯನಕುಮಾರಿ, ಪ್ರೊ. ಕೆ.ಎಸ್. ಸುಕೃತ, ಡಾ. ವಿನೋದ, ಸ್ಥಳ: ಕಾಲೇಜು ಸಭಾಂಗಣ, ಬೆಳಗ್ಗೆ 10.30ಕ್ಕೆ.

■ **ಕಾಲೇಜು ಶಿಕ್ಷಣ ಇಲಾಖೆ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು :** ಕನ್ನಡ ರಾಜ್ಯೋತ್ಸವದ ಅಂಗವಾಗಿ ಕನ್ನಡ ಹಬ್ಬ–2024 ಮೈಸೂರು ವಿಶ್ವವಿದ್ಯಾನಿಲಯ ಮಟ್ಟದ ಕವಿಗೋಷ್ಠಿ, ಭಾವಗೀತೆ ಮತ್ತು ಜನಪದ ಗೀತೆ ಗಾಯನ ಸ್ಪರ್ಧೆ, ಉದ್ಘಾಟನೆ : ಶಾಸಕ ಟಿ.ಎಸ್. ಶ್ರೀವತ್ಸ, ಮುಖ್ಯ ಅತಿಥಿಗಳು : ಪತ್ರಕರ್ತ ಕೆ. ನರಸಿಂಹಮೂರ್ತಿ, ಅಧ್ಯಕ್ಷತೆ : ಕಾಲೇಜು ಪ್ರಾಂಶುಪಾಲ ಡಾ. ಎನ್. ರಾಗಿಣಿ, ಸನ್ಮಾನ : ಕನ್ನಡ ಗ್ರಂಥ ಸಂಗ್ರಹಕಾರ ಸೈಯದ್ ಇಸಾಕ್, ಕವಿ ಸಿ. ಚೌಡಯ್ಯ, ಸ್ಥಳ: ಕಾಲೇಜು ಸಭಾಂಗಣ, ಕುವೆಂಪುನಗರ, ಬೆಳಗ್ಗೆ 10.30ಕ್ಕೆ.

■ **ಕಾಲೇಜು ಶಿಕ್ಷಣ ಇಲಾಖೆ, ಮಹಾರಾಣಿ ಮಹಿಳಾ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜು :** ಕನ್ನಡ ರಾಜ್ಯೋತ್ಸವ ಪ್ರಯುಕ್ತ – ಕನ್ನಡ ಹಬ್ಬ, ಅಧ್ಯಕ್ಷತೆ : ಕಾಲೇಜು ಪ್ರಿನ್ಸಿಪಾಲ್ ಪ್ರೊ ಸೋಮಣ್ಣ ಮುಖ್ಯ ಅತಿಥಿಗಳು : ಶಾಸಕ ಕೆ.ಹರೀಶ್‌ಗೌಡ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್. ಮಲ್ಲಿಕಾರ್ಜುನಸ್ವಾಮಿ, ಉಪಸ್ಥಿತರು : ಡಾ. ಎನ್. ನಾಗೇಂದ್ರ, ಪ್ರೊ. ಹೆಚ್.ಎಸ್. ಧನಲಕ್ಷ್ಮಿ, ಪ್ರೊ. ಎನ್. ವನಿತಾ, ಬಸವರಾಜು, ಕು. ಎನ್. ಲಿಖಿತ, ಕು. ಸಿಂಧುರಾಣಿ, ಸ್ಥಳ: ಕಾಲೇಜು ಆವರಣ, ಬೆಳಗ್ಗೆ 10.30ಕ್ಕೆ.

■ **ಅರಸು ಮಹಿಳಾ ಜಾಗೃತಿ ಸಭಾ ಟ್ರಸ್ಟ್ :** 3ನೇ ವಾರ್ಷಿಕೋತ್ಸವದ ಅಂಗವಾಗಿ ಮಹಿಳಾ ಸಾಧಕರಿಗೆ ಪ್ರಶಸ್ತಿ ಪ್ರದಾನ ಸಮಾರಂಭ, ಉದ್ಘಾಟನೆ : ಜಯಚಾಮರಾಜೇಂದ್ರ ಒಡೆಯರ್ ಅವರ ಸುಪುತ್ರಿ ಕಾಮಾಕ್ಷಿದೇವಿ ಒಡೆಯರ್, ಅಧ್ಯಕ್ಷತೆ : ಮೈಸೂರು ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಡಾ. ಬಿ.ಜೆ. ವಿಜಯಕುಮಾರ್, ಉಪನ್ಯಾಸ : ಚುಟುಕು ಯುಗಾಚಾರ್ಯ ಡಾ. ಎಂ.ಜಿ.ಆರ್. ಅರಸ್ ಅವರಿಂದ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ವಿಶ್ರಾಂತ ಪ್ರಾಧ್ಯಾಪಕರಾದ ಡಾ. ಎಂ.ಸುಶೀಲಾ ಅರಸ್ ಅವರು ಮಹಾರಾಣಿ ಲಕ್ಷ್ಮಮ್ಮಣ್ಣಿ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ, ಸಾಧಕ ಮಹಿಳೆಯರಿಗೆ ಕರ್ನಾಟಕ ಅರಸು ಮಹಾ ಮಂಡಳಿ ಅಧ್ಯಕ್ಷ ಬಿ.ಎಸ್. ಶ್ರೀಧರರಾಜೇ ಅರಸ್ ಅವರಿಂದ ಪ್ರಶಸ್ತಿ ಪ್ರದಾನ, ಉಪಸ್ಥಿತರು : ಬೆಂಗಳೂರಿನ ಜಿ.ಟಿ. ಇನ್ಸ್‌ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಅಂಡ್ ಸ್ಟಡೀಸ್ ಕಾಲೇಜಿನ ಸಹ ಪ್ರಾಧ್ಯಾಪಕ ಸತ್ಯಪ್ರಕಾಶ್, ಸ್ಥಳ: ರೋಟರಿ ಸಭಾಂಗಣ, ಜೆಎಲ್‌ಬಿ ರಸ್ತೆ, ಬೆಳಗ್ಗೆ 11ಕ್ಕೆ.

■ **ಜೆಎಸ್‌ಎಸ್ ನರ್ಸಿಂಗ್ ಕಾಲೇಜು :** ಎಂ.ಎಸ್ಸಿ ನರ್ಸಿಂಗ್‌ನ ಪ್ರಥಮ ವರ್ಷದ ವಿದ್ಯಾರ್ಥಿಗಳ ಪ್ರವೇಶ ಕಾರ್ಯಕ್ರಮ, ಮುಖ್ಯ ಅತಿಥಿಗಳು : ಎಂ.ಎಸ್. ರಾಮಯ್ಯ ಕಾಲೇಜ್ ಆಫ್ ನರ್ಸಿಂಗ್ ಪ್ರಾಚಾರ್ಯ ಡಾ. ಸೋನಾಲಿ ಜಾಧವ ತಾರಾಚಂದ್, ವಿಶೇಷ ಆಹ್ವಾನಿತರು : ಶ್ರೀಮತಿ ಜೆನೆಟ್ ಮಾತಾಯಸ್, ಅಧ್ಯಕ್ಷತೆ : ವೈದ್ಯಕೀಯ ಶಿಕ್ಷಣ ವಿಭಾಗದ ನಿರ್ದೇಶಕ ಆರ್. ಮಹೇಶ್, ಸ್ಥಳ: ಜೆಎಸ್‌ಎಸ್ ನರ್ಸಿಂಗ್ ಕಾಲೇಜು, ಬೆಳಗ್ಗೆ 11ಕ್ಕೆ

■ **ರಂಗವಲ್ಲಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶನಾಲಯ, ಬೆಂಗಳೂರು ಮತ್ತು ವಿಜಯ ವಿಠ್ಠಲ ಶಿಕ್ಷಣ ಸಂಸ್ಥೆಗಳು :** ಸಂಜೆ 6ಕ್ಕೆ ರಂಗ ಹಬ್ಬ 'ರಂಗವಲ್ಲಿ ರಂಗ ಸಂಭ್ರಮ–2024', ಸಂಜೆ 5.30ಕ್ಕೆ ಮೈಸೂರು ಪೊಲೀಸ್ ಬ್ಯಾಂಡ್‌ನಿಂದ ಮಾಸ್ ಬ್ಯಾಂಡ್, ಸಂಜೆ 7ಕ್ಕೆ ಬೆಂಗಳೂರಿನ ಸಂಚಯ ತಂಡದಿಂದ ನಾಟ್ಯದೇವ ಚರಿತೆ ನಾಟಕ ಪ್ರದರ್ಶನ, ಮೂಲ : ಮೂಲಿಎರೆ, ಕನ್ನಡಕ್ಕೆ ರೂಪಾಂತರ: ಕೃಷ್ಣ ಹೆಬ್ಬಾಲೆ ಮತ್ತು ಹೇಮಂತ್ ಕುಮಾರ್, ನಿರ್ದೇಶನ : ಪೃಥ್ವಿ ವೇಣುಗೋಪಾಲ್, ಸ್ಥಳ: ಕಿರು ರಂಗಮಂದಿರ.

■ **ಭಾರತ ಸರ್ಕಾರದ ಪ್ರವಾಸೋದ್ಯಮ ಮತ್ತು ಸಂಸ್ಕೃತಿ ಸಚಿವಾಲಯ :** ಮೈಸೂರು ಸಂಗೀತ ಸುಗಂಧ–2024, ಬೆಳಗ್ಗೆ 10.30 ರಿಂದ ಮೈಸೂರು ವಿಜಯ ಸೂರ್ಯ ಅವರಿಂದ ಮಂಗಳ ವಾದ್ಯ ನಾಗಸ್ವರಂ, ಬೆಳಗ್ಗೆ 10.45ಕ್ಕೆ ಶ್ರೀ ಸತ್ಯಸಾಯಿ ಮಾನವ ಶ್ರೇಷ್ಠತೆ ವಿಶ್ವವಿದ್ಯಾನಿಲಯ, ನವನಿಹಾಲ್ ವಿದ್ಯಾರ್ಥಿಗಳಿಂದ ನಾದೋಪಸಾನ –ಶಾಸ್ತ್ರೀಯ ಸಂಗೀತ, ಬೆಳಗ್ಗೆ 11.30ಕ್ಕೆ ಎನ್.ಆರ್. ಪ್ರಶಾಂತ್ ತಂಡದಿಂದ ಸಮೂಹ ಗಾಯನ, ಮ. 2.30ಕ್ಕೆ ಬಳ್ಳಾರಿ ಎಂ. ರಾಘವೇಂದ್ರ ಅವರಿಂದ ಮೈಸೂರು ವಾಸುದೇವಾಚಾರ್ಯರ ಸಂಯೋಜನೆ ಕುರಿತು ಉಪನ್ಯಾಸ ಪ್ರಾತ್ಯಕ್ಷಿಕೆ, ಮ. 3.15 ರಿಂದ ಟಿ.ಎಸ್. ಸತ್ಯವತಿ ಅವರಿಂದ ಕರ್ನಾಟಕ ಶಾಸ್ತ್ರೀಯ ಸಂಗೀತ, ಸಂಜೆ 4.15 ರಿಂದ ಟಿ.ಆರ್. ಶ್ರೀನಾಥ್ ಮತ್ತು ತಂಡದಿಂದ ಕರ್ನಾಟಕ ವಾದ್ಯ ಕೊಳಲು ಮೇಳ, ಸಂಜೆ 5.15 ರಿಂದ ಆರ್. ಪದ್ಮನಾಭ ಅವರಿಂದ ಕರ್ನಾಟಕ ಶಾಸ್ತ್ರೀಯ ಸಂಗೀತ, ಸಂಜೆ 6.15 ರಿಂದ ಮಲ್ಲಾಡಿ ಸಹೋದರರು, ಎಂ. ಶ್ರೀರಾಮ ಪ್ರಸಾದ್ ಮತ್ತು ಎಂ. ರವಿಕುಮಾರ್ ವಿಜಯವಾಡ ಅವರಿಂದ ಕರ್ನಾಟಕ ಶಾಸ್ತ್ರೀಯ ಸಂಗೀತ, ಸಂಜೆ 7.15 ರಿಂದ ಮೈಸೂರು ನಾಗರಾಜ್ ಮತ್ತು ಮೈಸೂರು ಮಂಜುನಾಥ್ ಅವರಿಂದ ಕರ್ನಾಟಕ ವಾದ್ಯ ವಯೋಲಿನ್ ದ್ವಂದ್ವ ಗಾಯನ, ರಾತ್ರಿ 8.15 ರಿಂದ ಸುಧಾ ರಘುನಾಥನ್ ಅವರಿಂದ ಕರ್ನಾಟಕ ಶಾಸ್ತ್ರೀಯ ಸಂಗೀತ, ಸ್ಥಳ: ಕರ್ನಾಟಕ ರಾಜ್ಯ ಮುಕ್ತ ವಿವಿ ಘಟಿಕೋತ್ಸವ ಸಭಾಂಗಣ.

■ **ಅನಂತಗೀತ ವಿದ್ಯಾಲಯ :** ವಾರ್ಷಿಕೋತ್ಸವ, ಮುಖ್ಯ ಅತಿಥಿಗಳು : ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಕೆ. ದೀಪಕ್, ಸ್ಥಳ: ಕಲಾಮಂದಿರ, ಸಂಜೆ 4ಕ್ಕೆ.

■ **ನಾಲ್ವಡಿ ಸೋಶಿಯಲ್, ಕಲ್ಚರಲ್ ಅಂಡ್ ಎಜುಕೇಷನಲ್ ಟ್ರಸ್ಟ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು :** ರಂಗ ತರಬೇತಿ ಶಿಬಿರ, ಉದ್ಘಾಟನೆ : ರಂಗಾಯಣ ನಿರ್ದೇಶಕ ಸತೀಶ್ ತಿಪಟೂರು, ಅಧ್ಯಕ್ಷತೆ : ಹಿರಿಯ ರಂಗ ನಿರ್ದೇಶಕ ಹೆಚ್. ಜನಾರ್ದನ್, ಮುಖ್ಯ ಅತಿಥಿಗಳು : ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್. ಮಲ್ಲಿಕಾರ್ಜುನಸ್ವಾಮಿ, ಸಹಾಯಕ ನಿರ್ದೇಶಕ ಡಾ. ಎಂ.ಡಿ. ಸುದರ್ಶನ್, ಬಿ.ಎಂ. ರಾಮಚಂದ್ರ, ದಿನೇಶ್ ಚಮ್ಮಾಳಿಗೆ, ಸ್ಥಳ: ಕಲಾಮಂದಿರದ ಆವರಣದ ರಂಗ ತಾಲೀಮು ಕೊಠಡಿ, ಸಂಜೆ 4ಕ್ಕೆ.

■ **ಇನ್ಸ್‌ಟಿಟ್ಯೂಷನ್ ಆಫ್ ಇಂಜಿನಿಯರ್ಸ್, ಇಸ್ರೇ :** ಫ್ಯಾನ್ ಇಂಜಿನಿಯರಿಂಗ್ ಫಂಡಮೆಂಟಲ್ಸ್ ಕುರಿತು ವಿಜ್ಞಾನಿ ಎ.ಎಸ್. ಪಾಟೀಲ್ ಅವರಿಂದ ಉಪನ್ಯಾಸ, ಅಧ್ಯಕ್ಷತೆ : ಇನ್ಸ್‌ಟಿಟ್ಯೂಷನ್ ಆಫ್ ಇಂಜಿನಿಯರ್ಸ್ ಅಧ್ಯಕ್ಷ ಡಾ. ಆರ್. ದೀಪು, ಸ್ಥಳ: ಎಸ್.ಪಿ. ಭಟ್ ಹಾಲ್, ಇನ್ಸ್‌ಟಿಟ್ಯೂಷನ್ ಆಫ್ ಇಂಜಿನಿಯರ್ಸ್ ಸಭಾಂಗಣ, ಜೆಎಲ್‌ಬಿ ರಸ್ತೆ, ಸಂಜೆ 6ಕ್ಕೆ.

■ **ಮೈಸೂರು ವಕೀಲರ ಸಂಘ :** ಶ್ರೀ ಮಹರ್ಷಿ ವಾಲ್ಮೀಕಿಯವರ ಜಯಂತ್ಯೋತ್ಸವ, ಸಾನ್ನಿಧ್ಯ : ಶ್ರೀ ವಾಲ್ಮೀಕಿ ಪ್ರಸನ್ನಾನಂದ ಸ್ವಾಮೀಜಿ, ಉದ್ಘಾಟನೆ : ನ್ಯಾಯಮೂರ್ತಿ ಸಿ.ಜಿ. ಪಂಡಿತ್, ಮುಖ್ಯ ಅತಿಥಿಗಳು : ನಿವೃತ್ತ ಜಿಲ್ಲಾ ನ್ಯಾಯಾಧೀಶ ಪಾಟೀಲ ನಾಗಲಿಂಗನಗೌಡ, ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶ ರವೀಂದ್ರ ಹೆಗಡೆ, ಅಧ್ಯಕ್ಷತೆ : ಸಂಘದ ಅಧ್ಯಕ್ಷ ಎಸ್. ಲೋಕೇಶ್, ಉಪಸ್ಥಿತರು : ಸಂಘದ ಕಾರ್ಯದರ್ಶಿ ಎ.ಜಿ. ಸುಧೀರ್, ಉಪಾಧ್ಯಕ್ಷ ಎಂ.ವಿ. ಚಂದ್ರಶೇಖರ್, ಸ್ಥಳ: ಜಿಲ್ಲಾ ನ್ಯಾಯಾಲಯದ ಆವರಣ, ಚಾಮರಾಜ ಮೊಹಲ್ಲಾ, ಸಂಜೆ 7ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಬಣ್ಣದ ಬಾನಾಡಿಗಳು– ಬಾನುಲಿ ಸರಣಿ, ರಚನೆ : ಡಾ. ಕಲೀಂವುಲ್ಲಾ, ಪ್ರಸ್ತುತಿ: ಜಿ. ಶಾಂತಕುಮಾರ್, 6.40 ಮತ್ತು ಸಂಜೆ 5.45 ಕರಾಮುವಿವಿ ಮುಕ್ತವಾಣಿ–ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಅಧ್ಯಯನ ಅವಕಾಶಗಳನ್ನು ಕುರಿತ ಪ್ರಾಯೋಜಿತ ಬಾನುಲಿ ಸರಣಿ. ಭಾಗವಹಿಸುತ್ತಾರೆ: ಡಾ.ಶೆಲ್ವಪಿಳ್ಳೈ ಅಯ್ಯಂಗಾರ್, ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ಪ್ರಾಯೋಜಕರು : ಕರ್ನಾಟಕ ರಾಜ್ಯ ಮುಕ್ತ ವಿಶ್ವ ವಿದ್ಯಾನಿಲಯ, ಮೈಸೂರು. ಪ್ರಸ್ತುತಿ: ಎನ್. ಕೇಶವಮೂರ್ತಿ, 6.50 ರೈತರಿಗೆ ಸಲಹೆ, 7.15 KABHI-ಕರ್ನಾಟಕ, ಮೆದುಳು ಆರೋಗ್ಯ ಕುರಿತ ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು : ನಿಮ್ಹಾನ್ಸ್ ಸಂಸ್ಥೆ, ಬೆಂಗಳೂರು, 8.30 ಕನ್ನಡ ಚಿತ್ರಗೀತೆಗಳು, 9.00 ನಮ್ಮ ಆರೋಗ್ಯ, 9.30 ಗಾಂಧಿ ಸ್ಮೃತಿ, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ: ಕೆ.ಎಸ್. ಗೋಪಾಲಕೃಷ್ಣನ್–ಕೊಳಲು ವಾದನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ 'ಸಂಗೀತ ಸಂಭ್ರಮ ನಾದಲಯ ಸಂಗಮ', ಪ್ರಸ್ತುತಿ : ಹೆಚ್. ಎಲ್. ಶಿವಶಂಕರಸ್ವಾಮಿ.

ಮಧ್ಯಾಹ್ನ: 12.30ದೇವರನಾಮ, 12.45 ಕಾದಂಬರಿ ವಿಹಾರ –ಅ.ನ.ಕೃ ಅವರ 'ಉದಯರಾಗ' ಕಾದಂಬರಿಯ ಬಾನುಲಿ ಓದಿನ ಕುರಿತು ಶ್ರೋತೃಗಳ ಅಭಿಪ್ರಾಯ ಆಧರಿಸಿದ ಕಾರ್ಯಕ್ರಮದ ಎರಡನೇ ಭಾಗ, 1.00 ಸಕ್ಕರೆ ನಾಡಿನ ಅಕ್ಕರೆಯ ಲೇಖಕರು, ಲೇಖಕರು ಹಾಗೂ ಪ್ರಸ್ತುತಿ: ಶಭಾನ ಮತ್ತು ಕೀರ್ತಿ. ಎಸ್. ಬೈಂದೂರು, ಪರಿಕಲ್ಪನೆ : ಅಬ್ದುಲ್ ರಶೀದ್, 1.20 ಭಾವಗೀತೆಗಳು, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 2.40 ದಾರಿ ದೀಪ–ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು: FEBA India, 2.55 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ : ಜಿ.ಕೆ. ರವೀಂದ್ರಕುಮಾರ್, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ : ಗಾಯತ್ರಿ ವೆಂಕಟ ರಾಘವನ್ – ಹಾಡುಗಾರಿಕೆ, 4.00 ಮಹಿಳಾರಂಗ – ಜೀವನ್ಮುಖಿ–ಮಹಿಳೆ ಮತ್ತು ಕ್ರೀಡೆ, ಭಾಗವಹಿಸುವವರು– ಮಹಿಳಾ ಕ್ರೀಡಾಪಟು, ಪ್ರಸ್ತುತಿ: ಕೀರ್ತನ, 4.30 ವೃತ್ತಿ ಮಾರ್ಗದರ್ಶನ 'ಕಂಪ್ಯೂಟರ್ ಸೈನ್ಸ್ ವಿಷಯದಲ್ಲಿ ಇರುವ ಅಧ್ಯಯನ ಮತ್ತು ವೃತ್ತಿಪರ ಅವಕಾಶಗಳು' ಕುರಿತು ಮೈಸೂರಿನ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ ಕಂಪ್ಯೂಟರ್ ಸೈನ್ಸ್ ವಿಭಾಗದ ಮುಖ್ಯಸ್ಥರಾದ ಡಾ. ಭವ್ಯಾ ಡಿ.ಎನ್. ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ : ಬೇದ್ರೆ ಮಂಜುನಾಥ್, 6.50 ಕೃಷಿರಂಗ : ಕೃಷಿ ಉತ್ಪನ್ನಗಳ ಮಾರಾಟ ಹಾಗೂ ರಫ್ತು ಈ ಕುರಿತು ಲಘು ಉದ್ಯೋಗ ಭಾರತಿ ಕರ್ನಾಟಕ ಶಾಖೆಯ ಕಾರ್ಯದರ್ಶಿ ಸಿ.ಎನ್. ಭೋಜರಾಜ್ ಅವರೊಂದಿಗೆ ಸಂದರ್ಶನ. ಸಂದರ್ಶಕರು : ಎನ್. ಕೇಶವಮೂರ್ತಿ, 7.45 ಕನ್ನಡದಲ್ಲಿ ಭಾಷಣ–ಹೆಸರಾಯಿತು ಕರ್ನಾಟಕ ಉಸಿರಾಗಲಿ ಕನ್ನಡ ಮಾತನಾಡುತ್ತಾರೆ–ಬಾಳೆಲೆ. ಜೆ. ಸೋಮಣ್ಣ, 8.00 ಕನ್ನಡ ಭಾರತಿ : ಕಥಾ ವಿಹಾರ –ಮಧುರಾಣಿ ಅವರಿಂದ ಸಣ್ಣಕಥೆ, ಕಾವ್ಯಧಾರೆ–ಕೆ.ಎಂ.ವಸುಂಧರಾ ಅವರಿಂದ ಸ್ವರಚಿತ ಕವನಗಳ ವಾಚನ, 8.30 ಹಿಂದಿ ಚಿತ್ರಗೀತೆಗಳು, 9.30 ಕರ್ನಾಟಕ ಶಾಸ್ತ್ರೀಯ ಸಂಗೀತ : ಟಿ.ಹೆಚ್.ಸುಬ್ರಹ್ಮಣ್ಯಂ–ವೈಯೋಲಿನ್ ವಾದನ, 10.00 ಜನಪದ ಸಂಗೀತ, 10.30 ಸವಿನೆನಪು

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ನವೆಂಬರ್ 8 ಶುಕ್ರವಾರ 2024

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 45 | ಸಂಚಿಕೆ: 201 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ನ್ಯಾ.ಪಿ.ಎನ್.ದೇಸಾಯಿ ವರದಿ ಬಂದ ನಂತರ

50:50 ಅನುಪಾತದ ನಿವೇಶನ ರದ್ದು

ಮುಡಾ ಸಾಮಾನ್ಯ ಸಭೆಯಲ್ಲಿ ಒಕ್ಕೊರಲ ನಿರ್ಣಯ



ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಸಾಮಾನ್ಯ ಸಭೆ ಮುಡಾ ಅಧ್ಯಕ್ಷರೂ ಆದ ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತರೆಡ್ಡಿ ಅಧ್ಯಕ್ಷತೆಯಲ್ಲಿ ನಡೆಯಿತು. ಶಾಸಕರಾದ ಜಿ.ಟಿ.ದೇವೇಗೌಡ, ಕೆ.ಹರೀಶ್‌ಗೌಡ, ದರ್ಶನ್ ಧ್ರುವನಾರಾಯಣ, ಎ.ಬಿ.ರಮೇಶ್‌ಬಾಬು ಬಂಡಿಸಿದ್ದೇಗೌಡ, ಸಿ.ಎನ್.ಮಂಜೇಗೌಡ, ಕೆ.ವಿವೇಕಾನಂದ, ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್, ನಗರಪಾಲಿಕೆ ಆಯುಕ್ತ ಆಶಾದ್ ಉರ್ ರೆಹಮಾನ್ ಷರೀಫ್, ಮುಡಾ ಆಯುಕ್ತ ರಘುನಂದನ್ ಇನ್ನಿತರರು ಉಪಸ್ಥಿತರಿದ್ದರು.

ಮೈಸೂರು, ನ.7(ಎಂಟಿವೈ)– ರಾಜ್ಯ ರಾಜಕಾರಣದಲ್ಲಿ ದೊಡ್ಡ ಸಂಚಲನ ಉಂಟು ಮಾಡಿರುವ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ(ಮುಡಾ)ದಲ್ಲಿ ಹಂಚಿಕೆಯಾಗಿರುವ 50:50 ಅನುಪಾತದಡಿ ನಿವೇಶನಗಳನ್ನು ಹಿಂಪಡೆಯುವ ಸಂಬಂಧ ಗುರುವಾರ ನಡೆದ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಸಾಮಾನ್ಯ ಸಭೆಯಲ್ಲಿ ಸರ್ವಾನುಮತದಿಂದ ಮಹತ್ವದ ನಿರ್ಣಯ ಕೈಗೊಳ್ಳಲಾಗಿದ್ದು, ಇದೀಗ ನಿವೇಶನ ಪಡೆದವರೂ ಸೇರಿದಂತೆ ಅನೇಕರಿಗೆ ಶಾಕ್ ನೀಡಿದಂತಾಗಿದೆ.

ಮುಡಾದಲ್ಲಿ ಸಿಎಂ ಸಿದ್ದರಾಮಯ್ಯ ಪತ್ನಿ ಶ್ರೀಮತಿ ಪಾರ್ವತಿ ಅವರು ಪಡೆದ 14 ನಿವೇಶನ ಹಾಗೂ 50:50 ಅನುಪಾತದಲ್ಲಿ ನಿವೇಶನ ಹಂಚಿಕೆ ಪ್ರಕರಣ ರಾಜಕೀಯ ವಲಯದಲ್ಲಿ ಭಾರಿ ಪ್ರಮಾಣದಲ್ಲಿ ಸದ್ದು ಮಾಡುವುದರೊಂದಿಗೆ ಲೋಕಾಯುಕ್ತ, ಇಡಿ ತನಿಖಾ ಸಂಸ್ಥೆಗಳು ತನಿಖೆ ಆರಂಭಿಸಿ ರಾಷ್ಟ್ರದ ಗಮನ ಸೆಳೆದಿದೆ. ಈ ನಿಟ್ಟಿನಲ್ಲಿ ಭಾರಿ ವಿವಾದ ಹಾಗೂ ಚರ್ಚೆಗೆ ಗ್ರಾಸವಾಗಿರುವ ಸಂದರ್ಭದಲ್ಲಿಯೇ ನಡೆದ ಸಾಮಾನ್ಯ ಸಭೆ ಎಲ್ಲರಲ್ಲಿ ಕುತೂಹಲ ಕೆರಳಿಸಿತ್ತು. ಮುಡಾ ಅಧ್ಯಕ್ಷರಾಗಿರುವ ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತ ರೆಡ್ಡಿ ಅವರ ಅಧ್ಯಕ್ಷತೆಯಲ್ಲಿ ನಡೆದ ಸುದೀರ್ಘ ಸಭೆಯಲ್ಲಿ ಮೈಸೂರಿನ ಜನಪ್ರತಿನಿಧಿಗಳು ನ್ಯಾ.ಪಿ.ಎನ್.ದೇಸಾಯಿ ಆಯೋಗ ವರದಿ ಬಳಿಕ ಪರಿಶೀಲಿಸಿ, 50:50 ಅನುಪಾತದ ನಿವೇಶನ ಹಿಂಪಡೆಯಲು ಸರ್ವಾನುಮತದ ಒಪ್ಪಿಗೆ ವ್ಯಕ್ತವಾಗಿದ್ದು, ಇದೀಗ ನಿವೇಶನ ಪಡೆದ ರಾಜಕಾರಣಿಗಳು, ಪ್ರಭಾವಿಗಳಲ್ಲಿ ನಡುಕ ಉಂಟಾಗಿದೆ. ತೀವ್ರ ವಿವಾದಕ್ಕೆ ಎಡೆಮಾಡಿಕೊಟ್ಟಿರುವ ಮುಡಾ ನಿವೇಶನ ಹಂಚಿಕೆ ಪ್ರಕರಣದಲ್ಲಿ ಅವ್ಯವಹಾರ ನಡೆಸಿರುವುದರಿಂದ ವಿಪಕ್ಷ ಹಾಗೂ ಸಾರ್ವಜನಿಕ ವಲಯದಿಂದ ರಾಜಕಾರಣಿಗಳು ಹಾಗೂ ಪ್ರಭಾವಿಗಳಿಗೆ 50:50ರ ಅನುಪಾತದಲ್ಲಿ ಹಂಚಿಕೆಯಾಗಿರುವ ನಿವೇಶನ ಹಿಂಪಡೆಯಬೇಕೆಂಬ ಆಗ್ರಹ ಕೇಳಿ ಬಂದಿತ್ತು. ಅಲ್ಲದೆ, ■ 6ನೇ ಪುಟಕ್ಕೆ



ಮುಡಾ ಅಕ್ರಮ ನಿವೇಶನ ಹಂಚಿಕೆ ಪ್ರಕರಣ


ಶೀಘ್ರದಲ್ಲೇ ಸಿಬಿಐ ಪ್ರವೇಶಿಸುವ ಸಾಧ್ಯತೆ

'ತಾವೇ ಮುಚ್ಚಿದ್ದ ಲೋಕಾಯುಕ್ತ ಎದುರಿಗೆ ಸಿದ್ದರಾಮಯ್ಯ ಹಾಜರಾಗಿದ್ದು ನಾಚಿಕೆ ಸಂಗತಿ': ಎಂಎಲ್‌ಸಿ ಎ.ಹೆಚ್.ವಿಶ್ವನಾಥ್

- ವಿಚಾರಣಾಧೀನ ಸಂಸ್ಥೆಗಳು ಉತ್ತಮವಾಗಿ ತನಿಖೆ ನಡೆಸುತ್ತಿವೆ
- ಸಿದ್ದರಾಮಯ್ಯ ಸೈಟ್ ಕೊಡುತ್ತಾರೆಂಬ ಮೈಸೂರಿಗರ ನಿರೀಕ್ಷೆ ಸುಳ್ಳಾಗಿದೆ

ಮೈಸೂರು, ನ.7(ಎಂಟಿವೈ)– ಮುಡಾ ನಿವೇಶನ ಹಗರಣಕ್ಕೆ ಸಂಬಂಧಿಸಿದಂತೆ ಈಗಾಗಲೇ ಲೋಕಾಯುಕ್ತ ಇಡಿ ತನಿಖೆ ಆರಂಭಿಸಿದ್ದು, ಶೀಘ್ರದಲ್ಲೇ ಸಿಬಿಐ ಪ್ರವೇಶಿಸುವ ಸಾಧ್ಯತೆ ಇದೆ ಎಂದು ವಿಧಾನಪರಿಷತ್ ಸದಸ್ಯ ಅಡಗೂರು ಹೆಚ್.ವಿಶ್ವನಾಥ್ ಸ್ಫೋಟಕ ಹೇಳಿಕೆ ನೀಡಿದ್ದಾರೆ.

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ(ಮುಡಾ)ದ ಸಭೆ ಬಳಿಕ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಈ ಹಿಂದೆ ಸಿದ್ದರಾಮಯ್ಯ ಮುಖ್ಯಮಂತ್ರಿಯಾಗಿದ್ದಾಗ ಅರ್ಕಾವತಿ ಬಡಾವಣೆಯ ಪ್ರಕರಣ ಮುಚ್ಚಿಹಾಕಲು ಲೋಕಾಯುಕ್ತ ಮುಚ್ಚಿಸಿದರು. ನಂತರ ಬಿಜೆಪಿ ಸರ್ಕಾರದ ಅವಧಿಯಲ್ಲಿ ಬಸವರಾಜ ಬೊಮ್ಮಾಯಿ ಮುಖ್ಯಮಂತ್ರಿಯಾಗಿದ್ದ ವೇಳೆ ಲೋಕಾಯುಕ್ತವನ್ನು ಮತ್ತೆ ತೆರೆದರು. ತಾವೇ ಮುಚ್ಚಿದ ಲೋಕಾಯುಕ್ತದ ಎದುರಿಗೆ ಸಿದ್ದರಾಮಯ್ಯ ವಿಚಾರಣೆಗೆ ಹಾಜರಾಗಿದ್ದು ನಾಚಿಕೆ ಸಂಗತಿ ಎಂದರು. ಮೈಸೂರಿನವರೇ ಆದ ಸಿದ್ದರಾಮಯ್ಯ ಮುಖ್ಯಮಂತ್ರಿಯಾಗಿದ್ದಕ್ಕೆ ಅನೇಕರು ನಿವೇಶನ ಸಿಗುತ್ತದೆ ಎಂದು ನಿರೀಕ್ಷೆಯಲ್ಲಿದ್ದರು. ಮೈಸೂರಿನವರೇ ಆದ ಮುಖ್ಯಮಂತ್ರಿಗಳು ಮೈಸೂರಿನ ಜನರಿಗೆ ಸೈಟ್ ಕೊಡಲು ಆಗಿಲ್ಲ. ಈಗ ಸೈಟ್ ಸಿಗದೇ ಇರುವುದರಿಂದ 'ಏನ್ಲಾ ಮುಖ್ಯಮಂತ್ರಿ ತನ್ನ ಹೆಂಡತಿ ಹೆಸರಿಗೆ 14 ಸೈಟ್ ಬರೆಸಿಕೊಂಡಿದ್ದಾರೆ' ಎಂದು ಹೇಳಿಕೊಂಡು ತಿರುಗಾಡುವ ಪರಿಸ್ಥಿತಿ ನಿರ್ಮಾಣವಾಗಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು. ಮುಡಾದಲ್ಲಿ ನಡೆದಿರುವ ಅವ್ಯವಹಾರಕ್ಕೆ ಸಂಬಂಧಿಸಿದಂತೆ ಈಗಾಗಲೇ ನ್ಯಾ. ಪಿ.ಎನ್.ದೇಸಾಯಿ ಆಯೋಗ, ಲೋಕಾಯುಕ್ತ, ಇಡಿ ತನಿಖೆ ಮಾಡುತ್ತಿವೆ. ವಿಚಾರಣಾಧೀನ ಸಂಸ್ಥೆಗಳು ಉತ್ತಮವಾಗಿ ತನಿಖೆ ನಡೆಸುತ್ತಿದ್ದು, ಮುಡಾ ಪ್ರಕರಣದಲ್ಲಿ ನ್ಯಾಯ ಸಿಗುವ ಭರವಸೆ ಇದೆ. ಈಗಾಗಲೇ ಪ್ರಕರಣ ಸಂಬಂಧ ಇಡಿ ದಾಖಲೆ ಪರಿಶೀಲಿಸುತ್ತಿದೆ. ಶೀಘ್ರದಲ್ಲಿಯೇ ಸಿಬಿಐ ಮುಡಾ ಪ್ರಕರಣಕ್ಕೆ ಪ್ರವೇಶಿಸುವ ಎಲ್ಲಾ ಲಕ್ಷಣ ಗೋಚರಿಸುತ್ತಿದೆ ಎಂದು ದೃಢ ವಿಶ್ವಾಸ ವ್ಯಕ್ತಪಡಿಸಿದರು. ಮುಡಾ ಪ್ರಕರಣಕ್ಕೆ ಸಂಬಂಧಿಸಿದಂತೆ ಈಗಾಗಲೇ ಎಲ್ಲವೂ ತನಿಖಾ ಆಯೋಗದ ಮುಂದೆ ಬಂದು ನಿಂತಿದೆ. ಮುಡಾ ವಿಚಾರದಲ್ಲಿ ತಪ್ಪಿತಸ್ಥರು ಯಾರೇ ಇದ್ದರೂ ಅವರ ವಿರುದ್ಧ ■ 6ನೇ ಪುಟಕ್ಕೆ



ವಿಧಾನಪರಿಷತ್ ಸದಸ್ಯ ಅಡಗೂರು ಹೆಚ್.ವಿಶ್ವನಾಥ್

ವ್ಯವಸ್ಥೆಯನ್ನೇ ಹಾಳು ಮಾಡಿದ ಪೊಲೀಸರು

"ಲೋಕಾಯುಕ್ತ ವಿಚಾರಣೆಗೆ ಹಾಜರಾಗಲು ಬಂದ ವೇಳೆ ಆಪಾದಿತ ಮುಖ್ಯಮಂತ್ರಿಗೆ ಗಾರ್ಡ್ ಆಫ್ ಹಾನರ್ ನೀಡುವ ಮೂಲಕ ಪೊಲೀಸರು ವ್ಯವಸ್ಥೆಯನ್ನೇ ಹಾಳು ಮಾಡಿದ್ದಾರೆ. ಗಾರ್ಡ್ ಆಫ್ ಹಾನರ್ ಕೊಟ್ಟ ಪೊಲೀಸರಿಗೆ ಏನು ಅನ್ನಬೇಕು. ಶಿಷ್ಟಾಚಾರ ಉಲ್ಲಂಘನೆಯಾಗಿದೆ ಎಂದು ಕಿಡಿಕಾರಿದರು.



ಕೆಬಿಜಿಯವರ **ಭೂಮಂತ್ರ...**

ಡೊನಾಲ್ಡ್ ಟ್ರಂಪ್ ಅವರಿಗೆ ಜಯದ ಸಂಭ್ರಮ

ಅಮೆರಿಕ ಅಧ್ಯಕ್ಷರಾಗಿ ಡೊನಾಲ್ ಟ್ರಂಪ್ ಪುನರಾಯ್ಕೆ: ಭಾರತಕ್ಕೆ ಶುಭ ಸೂಚನೆ

■ ಪುಟ–4

ರೋಹಿಣಿ ಸಿಂಧೂರಿ ವಿರುದ್ಧ ಸುಪ್ರೀಂಕೋರ್ಟ್ ಮೆಟ್ಟಿಲೇರಿದ್ದ ಡಿ.ರೂಪಾಗೆ ಹಿನ್ನಡೆ



ರೋಹಿಣಿ ಡಿ.ರೂಪಾ

ನವದೆಹಲಿ: ಐಎಎಸ್ ಅಧಿಕಾರಿ ರೋಹಿಣಿ ಸಿಂಧೂರಿ ಸಲ್ಲಿಸಿರುವ ಮಾನನಷ್ಟ ಮೊಕದ್ದಮೆ ರದ್ದು ಕೋರಿ ಸುಪ್ರೀಂಕೋರ್ಟ್‌ಗೆ ಮೇಲ್ಮನವಿ ಅರ್ಜಿ ಸಲ್ಲಿಸಿದ್ದ ಐಪಿಎಸ್ ಅಧಿಕಾರಿ ಡಿ.ರೂಪಾ ಮೌದ್ಗಿಲ್ ತಮ್ಮ ಅರ್ಜಿ ವಾಪಸ್ ಪಡೆದಿದ್ದಾರೆ. ■ 7ನೇ ಪುಟಕ್ಕೆ

ಅಧಿಕಾರಿಗಳ ಸಹಕಾರವಿಲ್ಲದೆ ಪಹಣಿಯನ್ನು ವಕ್ಫ್ ಬೋರ್ಡ್ ಆಸ್ತಿಯಾಗಿ ಬದಲಿಸಲು ಹೇಗೆ ಸಾಧ್ಯ?


- ಸಂಸದರೂ ಆದ ಜೆಪಿಸಿ ಸದಸ್ಯ ಜಗದಾಂಬಿಕ ಪಾಲ್ ಪ್ರಶ್ನೆ
- 500ರಿಂದ ಒಂದು ಸಾವಿರ ವರ್ಷಗಳಷ್ಟು ಹಳೆಯ ದಾಖಲೆ ಇರುವ ಮಠಗಳ ಜಮೀನನ್ನು ವಕ್ಫ್ ಆಸ್ತಿ ಎಂದು ಘೋಷಿಸುತ್ತಿದ್ದಾರೆ

ಬೆಂಗಳೂರು, ನ.7(ಕೆಎಂಶಿ)–ರೈತರ, ಮಠ, ಮಂದಿರಗಳ ಜಮೀನುಗಳ ಪಹಣಿಯನ್ನು ಅಧಿಕಾರಿಗಳ ಸಹಕಾರವಿಲ್ಲದೆ ವಕ್ಫ್ ಬೋರ್ಡ್ ಆಸ್ತಿಯಾಗಿ ಬದಲಿಸಲು ಹೇಗೆ ಸಾಧ್ಯ ಎಂದು ವಕ್ಫ್ (ತಿದ್ದುಪಡಿ) ವಿಧೇಯಕ ಕುರಿತ ಜಂಟಿ ಸಂಸದೀಯ ಸಮಿತಿ (ಜೆಪಿಸಿ) ಅಧ್ಯಕ್ಷ ಜಗದಾಂಬಿಕಾ ಪಾಲ್ ಪ್ರಶ್ನಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕರ್ನಾಟಕದ ಹುಬ್ಬಳ್ಳಿಯಲ್ಲಿ ರೈತರ ಜಮೀನು, ದೇವಾಲಯಗಳ ಆಸ್ತಿ, 500ರಿಂದ ಒಂದು ಸಾವಿರ ವರ್ಷಗಳಷ್ಟು ಹಳೆಯ ದಾಖಲೆ ಇರುವ ಮಠಗಳ ಜಮೀನನ್ನು ವಕ್ಫ್ ಆಸ್ತಿ ಎಂದು ಘೋಷಿಸುತ್ತಿದ್ದಾರೆ, ಅಲ್ಲದೆ, ಪಹಣಿ, ಆಸ್ತಿ ಹಕ್ಕಿನಲ್ಲೂ ಬದಲಾವಣೆ ಮಾಡಲಾಗುತ್ತಿದೆ, ಇದು ಹೇಗೆ ಸಾಧ್ಯ ಎಂದರು.

ಎಲ್ಲ ಕಂದಾಯ ದಾಖಲೆಗಳಿದ್ದರೂ ಈ ರೀತಿ ಅಚಾತುರ್ಯ ಆಗುತ್ತಿದೆ. ಇಲ್ಲಿನ ರಾಜ್ಯ ಸರ್ಕಾರ ನೋಟಿಸ್ ವಾಪಸ್ ಪಡೆಯುವುದಾಗಿ ತಿಳಿಸಿದೆ. ಸದ್ಯಕ್ಕೆ ರೈತರನ್ನು ಒಕ್ಕಲೆಬ್ಬಿಸದೆ ಇರಲು ಸರ್ಕಾರ ಕಂದಾಯ ಇಲಾಖೆ ಅಧಿಕಾರಿಗಳಿಗೆ ಸೂಚಿಸಿರಬಹುದು. ಇದರಿಂದ ಸಮಸ್ಯೆ ಪರಿಹಾರವಾಗಲಿದೆಯೇ ಎಂದರು. ಹುಬ್ಬಳ್ಳಿ, ಬೀದರ್, ಕಲಬುರಗಿ, ಶಿವಮೊಗ್ಗ ಮೊದಲಾದ ಜಿಲ್ಲೆಗಳಲ್ಲಿ ಇಂತಹ ಸಮಸ್ಯೆಗಳಿವೆ. ಪುರಾತನ ಮಠ, ದೇವಾಲಯಗಳ 15 ಸಾವಿರ ಎಕರೆ, ಒಂದು ಸಾವಿರ ಎಕರೆಯನ್ನು ವಕ್ಫ್ ಆಸ್ತಿ ಎಂದು ತಿಳಿಸಲಾಗುತ್ತಿದೆ. 1920, 1930ರಿಂದ ವ್ಯವಸಾಯ ಮಾಡುತ್ತಿರುವ ರೈತರ ಜಮೀನು ವಕ್ಫ್ ಆಸ್ತಿ ಆಗಲು ಹೇಗೆ ಸಾಧ್ಯ?

ಇದೊಂದು ಗಂಭೀರ, ದೊಡ್ಡ ಸಮಸ್ಯೆಯಾಗಿದೆ, 70ಕ್ಕೂ ಹೆಚ್ಚು ಮನವಿಗಳನ್ನು ಈಗಾಗಲೇ ಸ್ವೀಕರಿಸಿದ್ದೇವೆ, ಶಾಸಕರೂ ಮನವಿ ಕೊಟ್ಟಿದ್ದಾರೆ, ಸಾವಿರಾರು ರೈತರು ಇದರಿಂದ ತೊಂದರೆಗೆ ಒಳಗಾಗಲಿದ್ದಾರೆ, ಕರ್ನಾಟಕದಲ್ಲಿ ಆಗಿರುವ ಸಮಸ್ಯೆಗಳ ಕುರಿತು ಜೆಪಿಸಿ ಸದಸ್ಯ ಹಾಗೂ ಸಂಸದ ತೇಜಸ್ವಿ ಸೂರ್ಯ ಅವರೂ ಮಾಹಿತಿ ನೀಡಿದ್ದಾರೆ. ಯಾವುದೇ ದಾಖಲಾತಿ ಇಲ್ಲದೆ ವಕ್ಫ್ ಆಸ್ತಿ ■ 7ನೇ ಪುಟಕ್ಕೆ



ರೈತರೊಂದಿಗೆ ಸಂಸದರೂ ಆದ ಜೆಪಿಸಿ ಸದಸ್ಯ ಜಗದಾಂಭಿಕ ಪಾಲ್ ಮಾತನಾಡಿದರು.

ಕೆಐಎಡಿಬಿ ಬಹುಕೋಟಿ ಹಗರಣದ ಸುಳಿಯಲ್ಲಿ ರಾಜ್ಯ ಸರ್ಕಾರ

ಸಿಎಂ ಸಿದ್ದರಾಮಯ್ಯ, ಸಚಿವ ಎಂ.ಬಿ.ಪಾಟೀಲ್ ವಿರುದ್ಧ ಪ್ರಧಾನಿ ಮೋದಿ, ಇಡಿಗೆ ದೂರು

ಬೆಂಗಳೂರು, ನ.7– ರಾಜ್ಯ ರಾಜಕೀಯದಲ್ಲಿ ಕೋಲಾಹಲ ಎಬ್ಬಿಸಿರುವ ಮುಡಾ ನಿವೇಶನ ಅಕ್ರಮ, ವಾಲ್ಮೀಕಿ ನಿಗಮದ ಕರ್ಮಕಾಂಡದ ಬೆನ್ನಲ್ಲೇ ಸಿದ್ದರಾಮಯ್ಯ ಸರ್ಕಾರಕ್ಕೆ ಕೆಐಎಡಿಬಿ ಬಹುಕೋಟಿ ಹಗರಣವೂ ಸಂಕಷ್ಟ ತಂದೊಡ್ಡಿದೆ. ಕುತೂಹಲಕಾರಿ ಬೆಳವಣಿಗೆಯಲ್ಲಿ ದೇವನಹಳ್ಳಿ ಕೆಐಎಡಿಬಿ ಭೂಸ್ವಾಧೀನ ಅವ್ಯವಹಾರ ಆರೋಪ ಕುರಿತಂತೆ ಸಿಎಂ ಸಿದ್ದರಾಮಯ್ಯ, ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ್ ಹಾಗೂ ಕೆ.ಎ.ಎಸ್ ಅಧಿಕಾರಿ ಬಾಳಪ್ಪ ಹಂದಿಗುಂದ ವಿರುದ್ಧ ಜಾರಿ ನಿರ್ದೇಶನಾಲಯ (ED)ದ ನಿರ್ದೇಶಕರಿಗೆ ದೂರು ಸಲ್ಲಿಕೆಯಾಗಿದೆ.

'ಸಿಟಿಜನ್ ರೈಟ್ಸ್ ಫೌಂಡೇಶನ್' ಈ ದೂರನ್ನು ಸಲ್ಲಿಸಿದ್ದು, ಪ್ರಧಾನಿ ನರೇಂದ್ರ ಮೋದಿ, ಗೃಹ ಸಚಿವ ಅಮಿತ್ ಷಾ, ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರ ನಿರ್ದೇಶನ ಕೋರಿ ಕೇಂದ್ರ ಸರ್ಕಾರಕ್ಕೂ ದೂರು ಸಲ್ಲಿಕೆಯಾಗಿದೆ. ಕೈಗಾರಿಕೋದ್ಯಮಗಳನ್ನು ಉತ್ತೇಜಿಸಲು, ಉದ್ಯಮ ಸಂಸ್ಥೆಗಳಿಗೆ ಮೂಲಸೌಕರ್ಯ ಕಲ್ಪಿಸುವ ಸಂಬಂಧ ಸ್ಥಾಪಿಸಲಾಗಿರುವ ರಾಜ್ಯ ಸರ್ಕಾರದ ಅಧೀನದ ಕರ್ನಾಟಕ ಕೈಗಾರಿಕಾ ಪ್ರದೇಶಗಳ ಅಭಿವೃದ್ಧಿ ಮಂಡಳಿ (ಕೆಐಎಡಿಬಿ) ಇದೀಗ ಹಗರಣಗಳ ಕೂಪವಾಗಿದ್ದು, ಒಂದೊಂದೇ ಕರ್ಮಕಾಂಡಗಳು ಬೆಳಕಿಗೆ ಬರುತ್ತಿವೆ. ಅದರಲ್ಲೂ ಸರ್ಕಾರಿ ಜಮೀನಿಗೆ ನಕಲಿ ಮಾಲೀಕರನ್ನು ಸೃಷ್ಟಿಸಿ ಪರಿಹಾರದ ಮೊತ್ತವನ್ನು ಪಾವತಿಸಿರುವ ಆರೋಪ ಕೇಳಿಬಂದಿದೆ. ಈ ಹಗರಣದಲ್ಲಿ ಕೆಐಎಡಿಬಿ ಭೂಸ್ವಾಧೀನಾಧಿಕಾರಿಯಾಗಿರುವ ಕೆಎಎಸ್ ಅಧಿಕಾರಿ ಬಾಳಪ್ಪ ಹಂದಿಗುಂದ ಅವರು ಅಧಿಕಾರ ದುರುಪಯೋಗಪಡಿಸಿದ್ದಾರೆ ಎಂದು 'ಸಿಟಿಜನ್ ರೈಟ್ಸ್ ಫೌಂಡೇಶನ್' ಅಧ್ಯಕ್ಷ ಕೆ.ಎ.ಪಾಲ್ ಅವರು ಈ ದೂರು ಸಲ್ಲಿಸಿದ್ದಾರೆ.

ಕೆಐಎಡಿಬಿ ಮೂಲಕ ಬೆಂಗಳೂರು ಗ್ರಾಮಾಂತರ ಜಿಲ್ಲೆ ದೇವನಹಳ್ಳಿ ಸಮೀಪ ನೂರಾರು ಎಕರೆ ಜಮೀನನ್ನು ಕೈಗಾರಿಕಾ ಉದ್ದೇಶಗಳಿಗಾಗಿ ■ 7ನೇ ಪುಟಕ್ಕೆ

ಪ್ರಧಾನಿ ಮೋದಿ, ಅಮಿತ್ ಷಾ ನನ್ನನ್ನು ಮುಗಿಸಲು ಮುಂದಾಗಿದ್ದಾರೆ

ಮುಖ್ಯಮಂತ್ರಿ ಸಿದ್ದರಾಮಯ್ಯ ಗಂಭೀರ ಆರೋಪ

ಬೆಂಗಳೂರು, ನ.7(ಕೆಎಂಶಿ)– ಪ್ರಧಾನಿ ನರೇಂದ್ರ ಮೋದಿ, ಕೇಂದ್ರ ಗೃಹ ಸಚಿವ ಅಮಿತ್ ಷಾ ನನ್ನನ್ನು ಮುಗಿಸಲು ಮುಂದಾಗಿದ್ದಾರೆ ಎಂದು ಸಿಎಂ ಸಿದ್ದರಾಮಯ್ಯ ಗುರುತರ ಆರೋಪ ಮಾಡಿದ್ದಾರೆ.

ರಾಜ್ಯದಲ್ಲಿ ನಡೆಯುತ್ತಿರುವ ವಿಧಾನ ಸಭಾ ಕ್ಷೇತ್ರಗಳ ಉಪಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳ ಪರ ಪ್ರಚಾರ ಸಂದರ್ಭದಲ್ಲಿ, ನನ್ನ ಮೇಲೆ ಇಲ್ಲಸಲ್ಲದ, ಸುಳ್ಳು ಕೇಸ್ ಹಾಕಿಸಿ ಷಡ್ಯಂತ್ರ ನಡೆಸುತ್ತಿದ್ದಾರೆ. ನಾನು ನಿರಂತರವಾಗಿ ಈ ಇಬ್ಬರು ನಾಯಕರ ನೀತಿ ಮತ್ತು ಸುಳ್ಳುಗಳನ್ನು ಹಾಗೂ ರಾಜ್ಯಕ್ಕೆ ಅವರು ಮಾಡುತ್ತಿರುವ ಅನ್ಯಾಯವನ್ನು ಟೀಕಿಸಿದ್ದಕ್ಕೆ ನನಗೆ ಇಂತಹ ಪ್ರತಿಫಲ ದೊರೆತಿದೆ.

ನಾನು ಇವರುಗಳ ಯಾವ ಷಡ್ಯಂತ್ರಕ್ಕೂ ಜಗ್ಗುವುದೂ ಇಲ್ಲ, ಬಗ್ಗುವುದೂ ಇಲ್ಲ, ನಮ್ಮ ಸರ್ಕಾರ ಇನ್ನೂ ಮೂರೂವರೆ ವರ್ಷಗಳ ಕಾಲ ಆಡಳಿತ ನಡೆಸಿ ಮತ್ತೆ ನಾವೇ ಅಧಿಕಾರಕ್ಕೆ ಬರುತ್ತೇವೆ. ಮಹಾರಾಷ್ಟ್ರದಲ್ಲಿ ತಮ್ಮ ಕಿಚಡಿ ಸರ್ಕಾರವನ್ನು ಮತ್ತೆ ಅಧಿಕಾರಕ್ಕೆ ತರಲು ಕರ್ನಾಟಕ ಸರ್ಕಾರದ ಮೇಲೆ ಇಲ್ಲಸಲ್ಲದ ಆರೋಪ ಮಾಡುತ್ತಿದ್ದಾರೆ. ಬಿಜೆಪಿ ಮಹಾರಾಷ್ಟ್ರದ ಜನರನ್ನು ಸರಣಿ ಸುಳ್ಳುಗಳ ಮೂಲಕ ವಂಚಿಸುತ್ತಿದೆ ಎಂದ ಅವರು, 'ವಾದಾ ದಿಯಾ: ಪೂರಾ ಕಿಯಾ' ಎಂದು ಅವರ ಸುಳ್ಳು ಜಾಹೀರಾತಿಗೆ ಕಿಡಿಕಾರಿದರು.

ಕರ್ನಾಟಕದಲ್ಲಿ ಮಹಿಳೆಯರಿಗೆ ಉಚಿತ ಬಸ್ ಪಾಸ್ ಭರವಸೆ ನೀಡಿತ್ತು. ಅದು ಈಡೇರಿಸಲಾಗಿದೆ. ಆದರೆ ಈ ಯೋಜನೆಯನ್ನೇ ಇನ್ನೂ ಆರಂಭಿಸದೆ ವಂಚಿಸಿದೆ ಎಂಬ ಅರ್ಥದಲ್ಲಿ ಪರಮ ಸುಳ್ಳಿನ ಜಾಹೀರಾತುಗಳನ್ನು ಬಿಜೆಪಿ ಪುಟಗಟ್ಟಲೆ ನೀಡುತ್ತಿದೆ ಬಿಜೆಪಿಯವರಿಗೆ ಸುಳ್ಳೇ ಮನೆ ದೇವರು, ರಾಜ್ಯದಲ್ಲಿ ಶಕ್ತಿ ಯೋಜನೆ ಸೇರಿದಂತೆ ಐದಕ್ಕೆ ಐದೂ ಗ್ಯಾರಂಟಿಗಳು ಯಶಸ್ವಿಯಾಗಿ ನಡೆದುಕೊಂಡು ಹೋಗುತ್ತಿವೆ.

ಗೃಹಲಕ್ಷ್ಮಿ ಯೋಜನೆಯ ಮುಂದಿನ ಕಂತಿನ ಹಣ ಒಂದೆರಡು ದಿನಗಳಲ್ಲೇ ಬಿಡುಗಡೆಯಾಗಲಿದೆ, ಆದರೆ, ಬಿಜೆಪಿಯವರು ಸುಳ್ಳುಗಳನ್ನು ಹರಡಿಸುತ್ತಾ, ಅದಕ್ಕಾಗಿ ಕೋಟಿ ಕೋಟಿ ರೂ. ವೆಚ್ಚ ಮಾಡುತ್ತಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ವಿದೇಶದಲ್ಲಿರುವ ಕಪ್ಪು ಹಣ ತಂದು ಎಲ್ಲರ ಖಾತೆಗೆ 15 ಲಕ್ಷ ರೂ. ಕೊಡ್ತೀವಿ ಅಂತ ಹೇಳಿದ್ದರಲ್ಲಾ ಮೋದಿಯವರೇ ಕೊಟ್ಟಿರೇನ್ರೀ? ವರ್ಷಕ್ಕೆ 2 ಕೋಟಿ ಉದ್ಯೋಗ ಸೃಷ್ಟಿ ಮಾಡ್ತೀನಿ ಅಂದ್ರಲ್ಲಾ ಮೋದಿಯವರೇ, ಉದ್ಯೋಗ ಸೃಷ್ಟಿ ಮಾಡಿದ್ರಾ. ಎಲ್ರೀ ಸ್ವಾಮಿ ನಿಮ್ಮ ಅಚ್ಛೆ ದಿನ್, ರೈತರ ಆದಾಯ ದುಪ್ಪಟ್ಟು ಮಾಡ್ತೀನಿ ಅಂದ್ರಲ್ಲಾ ಮೋದಿಯವರೇ ಮಾಡಿದ್ರಾ, ಮೋದಿ ಪ್ರಧಾನಿ ಆಗುವ ಮೊದಲು ದೇಶದ ಸಾಲ ಇದ್ದದ್ದು 54 ಲಕ್ಷ ಕೋಟಿ ರೂ. ಮಾತ್ರ, ಈಗ ದೇಶದ ಸಾಲ 185 ಲಕ್ಷ ಕೋಟಿ ರೂ.ಗೆ ಏರಿಸಿದ್ದೀರಿ, ಇದೇನಾ ಸ್ವಾಮಿ ನಿಮ್ಮ ಅಚ್ಛೆ ದಿನ್ ಎಂದು ವ್ಯಂಗ್ಯವಾಡಿದರು.

ಸ್ವಾತಂತ್ರ್ಯ ಹೋರಾಟದಲ್ಲೂ ಭಾಗ ವಹಿಸದೆ ಸುಮ್ಮನಿದ್ದ ಬಿಜೆಪಿ ಪರಿವಾರದ ಕೊಡುಗೆ ಈ ದೇಶಕ್ಕೆ ಸೊನ್ನೆ. ಇಂದಿರಾ ಗಾಂಧಿಯವರು 20 ಅಂಶಗಳ ಕಾರ್ಯಕ್ರಮ ಮೂಲಕ ದೇಶಕ್ಕೆ ಆಹಾರ ಭದ್ರತೆ ಒದಗಿಸಿ, ಬಡತನ ನಿರ್ಮೂಲನೆಗೆ ಕಾರ್ಯಕ್ರಮಗಳನ್ನು ರೂಪಿಸಿ ಜಾರಿಗೆ ತಂದರು, ಬಿಜೆಪಿಯವರ ಕೊಡುಗೆ ಏನು ಎಂದು ಪ್ರಶ್ನಿಸಿದರು. ದೇವರಾಜ ಅರಸು ಬಳಿಕ ಐದು ವರ್ಷ ಅವಧಿಗೆ ಮುಖ್ಯಮಂತ್ರಿಯಾಗಿ ಪೂರ್ಣಗೊಳಿಸಿದವನು ನಾನು. ಮತ್ತೆ ಮುಖ್ಯಮಂತ್ರಿ ಆದೆ, ರಾಜ್ಯದ ಜನರಿಗೆ ನಾವು, ನಮ್ಮ ಸರ್ಕಾರ ಕೊಟ್ಟ ಹತ್ತು ಹಲವು ಭಾಗ್ಯಗಳು ಮತ್ತು ನುಡಿದಂತೆ ನಡೆದ ನಮ್ಮ ಜನಪರವಾದ ಬದ್ಧತೆ ಇದಕ್ಕೆ ಕಾರಣ.

ಬಿಜೆಪಿ 2018ರಲ್ಲಿ ಕೊಟ್ಟಿದ್ದ ಭರವಸೆಗಳಲ್ಲಿ ಶೇ.10 ರಷ್ಟನ್ನೂ ಈಡೇರಿಸಲಿಲ್ಲ, ಚುನಾವಣೆ ವೇಳೆ ರೈತರ ಸಾಲ ಮನ್ನಾ ಮಾಡುವುದಾಗಿ ಭರವಸೆ ನೀಡಿದರು, ಗೆದ್ದ ಬಳಿಕ ಸಾಲ ಮನ್ನಾ ಮಾಡಿ ಅಂದ್ರೆ ಸಾಲ ಮನ್ನಾ ಮಾಡೋಕೆ ದುಡ್ಡು ಪ್ರಿಂಟ್ ಹಾಕೋ ಮಿಷನ್ ಇದೆಯಾ ಎಂದು ಯಡಿಯೂರಪ್ಪ ಪ್ರಶ್ನಿಸಿದ್ದರು. ಸಾಲ ಮನ್ನಾ ಮಾಡದ ಕೇಂದ್ರ ಸರ್ಕಾರ, ಅತ್ಯಂತ ಶ್ರೀಮಂತರ ಕಾರ್ಪೋರೇಟ್ ಕಂಪನಿಗಳ 16 ಲಕ್ಷ ಕೋಟಿ ರೂ. ಸಾಲ ಮನ್ನಾ ಮಾಡಿದರು, ಇದೇ ಹಣದಲ್ಲಿ ರೈತರ ಸಾಲ ಮನ್ನಾ ಮಾಡಬಹುದಿತ್ತಲ್ಲ ಎಂದರು.

ಅಚ್ಛೇ ದಿನ್ ಆಯೆಗಾ ಅಂದ್ರಲ್ಲಾ ಮೋದಿ, ಬಂತಾ ಅಚ್ಛೇ ದಿನ್, ಯಾರ ಮನೆ ಬಾಗಿಲಿಗಾದರೂ ಅಚ್ಛೆ ದಿನ್ ಬಂದಿದೆಯಾ, ಯಾರಿಗಾದರೂ ಕಾಣಿಸಿದೆಯಾ ಎಂದು ವಾಗ್ದಾಳಿ ಮಾಡಿದರು.



ಕಾಂಗ್ರೆಸ್ ಅಭ್ಯರ್ಥಿಗಳ ಪರ ಪ್ರಚಾರ ಸಂದರ್ಭದಲ್ಲಿ ಸಿಎಂ ಸಿದ್ದರಾಮಯ್ಯ ಮಾತನಾಡಿದರು.

ನಕ್ಕರೆ ಅದೇ ಸ್ವರ್ಗ

ಮೇಷ್ಟ್ರು : ನಿಜವಾದ ಕನ್ನಡಿಗರು ಎಂದರೆ ಯಾರು?
ಗುಂಡ : ಯಾರು ಇಂಗ್ಲಿಷ್‌ನಲ್ಲಿ ಫೇಲ್ ಆಗ್ತಾರೋ ಅವರೇ ನಿಜವಾದ ಕನ್ನಡಿಗರು ಸರ್!

ಮೈಸೂರು ಮಿತ್ರ
ಶುಕ್ರವಾರ, 8 ನವೆಂಬರ್ 2024
ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತ ವಾಹಿನಿ.........

ಯಾವುದೇ ಸಂಬಂಧದಲ್ಲಿ ಅರ್ಥವಾಗುವ ಮುಂಚೆ ಹತ್ತಿರವಾಗಬಾರದು. ಹತ್ತಿರವಾದ ಮೇಲೆ ಅಪಾರ್ಥ ಮಾಡಿಕೊಳ್ಳಬಾರದು.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ತಿನ್ನಲು, ಉಣ್ಣಲು ಇದ್ದರೆ ಯಾವತ್ತೂ ನೆಂಟರು.

ನಿಮ್ಮ ಪತ್ರಗಳು

ಟ್ರಂಪ್ ಗೆಲುವು, ಕಮಲಾ ಹ್ಯಾರಿಸ್‌ಗೆ ಹಿನ್ನಡೆ

ಮಾನ್ಯರೆ,

ನ.5ರಂದು ನಡೆದ ಅಮೆರಿಕಾ ಅಧ್ಯಕ್ಷೀಯ ಚುನಾವಣೆಯಲ್ಲಿ ಟ್ರಂಪ್ ಜಯಭೇರಿ ಬಾರಿಸಿದ್ದಾರೆ ಎಂದು ವರದಿಯಾಗಿದೆ. ಆದರೆ ಚುನಾವಣೆಯಲ್ಲಿ ಜನರು ನೇರವಾಗಿ ಅಭ್ಯರ್ಥಿಗಳಿಗೆ ಮತ ಹಾಕದೆ, ಅವರ ಬೆಂಬಲಿತ ಪ್ರತಿನಿಧಿಗಳಿಗೆ ಮತ ಹಾಕಿ, ಪ್ರಜಾಪ್ರತಿನಿಧಿಗಳನ್ನು ಆಯ್ಕೆ ಮಾಡಿದ್ದಾರೆ. ಇಂತಹ 538 ಪ್ರತಿನಿಧಿಗಳನ್ನು ಆಯ್ಕೆ ಮಾಡಿದ್ದಾರೆ. ಡಿಸೆಂಬರ್ 3ನೇ ವಾರದಲ್ಲಿ ಈ 538 ಜನಪ್ರತಿನಿಧಿಗಳಿಂದ ನಡೆಯುವ ಮತದಾನದಲ್ಲಿ ಯಾರು 270ಕ್ಕೂ ಹೆಚ್ಚು ಸದಸ್ಯರ ಮತ ಪಡೆಯುತ್ತಾರೋ ಅವರು ಅಮೆರಿಕಾ ಅಧ್ಯಕ್ಷ, ಉಪಾಧ್ಯಕ್ಷರಾಗಿ ಜನವರಿ 20 ರಂದು ಅಧಿಕಾರ ಸ್ವೀಕರಿಸಲಿದ್ದಾರೆ. 538 ಜನಪ್ರತಿನಿಧಿಗಳು, ಟ್ರಂಪ್ ಬೆಂಬಲಿಗ ಅಥವಾ ಕಮಲಾ ಹ್ಯಾರಿಸ್ ಅವರ ಬೆಂಬಲಿಗರೇ ಆಗಿದ್ದರೂ ಮತದಾನ ಮಾಡುವಾಗ ಅವರು ಯಾರನ್ನೂ ಬೇಕಾದರೂ ಬೆಂಬಲಿಸಿ ಮತ ನೀಡಬಹುದಂತೆ! ಎಂದರೆ ನಮ್ಮ ಗ್ರಾಮ ಪಂಚಾಯಿತಿ ಚುನಾವಣೆ ರೀತಿ!

ಕಮಲಾ ಹ್ಯಾರಿಸ್ ಗೆಲ್ಲಬಹುದು ಎಂದು ನಿರೀಕ್ಷೆ ಇತ್ತು. ಆದರೆ ಅದು ಸುಳ್ಳಾಗಿದೆ. ಭಾರತದಲ್ಲಿ ಪ್ರಧಾನಿ ಮೋದಿಯವರು ಟ್ರಂಪ್ ಮಿತ್ರರಾಗಿದ್ದು ಬಿಜೆಪಿ ಪ್ರಾಬಲ್ಯವಿರುವ ಉತ್ತರ ಭಾರತದಲ್ಲಿ ಟ್ರಂಪ್ ಗೆಲುವಿಗೆ ದೇವಸ್ಥಾನಗಳಲ್ಲಿ ಜನರು ಹೋಮ, ಹವನ ನಡೆಸಿದರು. ಅದೇ ರೀತಿ ಕಾಂಗ್ರೆಸ್ ಪ್ರಾಬಲ್ಯವಿರುವ ದಕ್ಷಿಣ ಭಾರತದ ಕೆಲವೆಡೆ ಕಮಲಾ ಹ್ಯಾರಿಸ್ ಗೆಲುವಿಗೆ ಹೋಮ, ಹವನ ನಡೆಸಿದರು! ಕಮಲಾಹ್ಯಾರಿಸ್ ಅವರು ಭಾರತೀಯ ಸಂಜಾತೆ ಎಂದು ಹೇಳಲಾಗುತ್ತಿದ್ದರೂ (ತಾಯಿ ಮದ್ರಾಸ್ ಮೂಲದವರು) ತಂದೆ ಜಮೈಕಾ ಮೂಲದವರಾಗಿದ್ದು, ಕಮಲಾ ಅವರು ಪ್ರಚಾರದ ವೇಳೆ ತಮ್ಮ ಆಫ್ರಿಕಾ ಮೂಲದ ಬಗ್ಗೆ ಹೇಳಿಕೊಂಡಷ್ಟು, ತಮ್ಮ ಭಾರತೀಯ ಮೂಲದ ಬಗ್ಗೆ ಪ್ರಸ್ತಾಪ ಮಾಡಿಲ್ಲದಿರುವುದು ಗಮನಾರ್ಹ. ಇವರ ಪರವಾಗಿಯೇ ಚುನಾವಣೆ ಪ್ರಚಾರಕ್ಕಾಗಿ ಕಳೆದ ತಿಂಗಳು ರಾಹುಲ್ ಗಾಂಧಿ ಹಾಗೂ ಕರ್ನಾಟಕದ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಕೂಡ ಹೋಗಿದ್ದರೆಂದು ವರದಿಯಾಗಿತ್ತು. ಇವರು ಭಾರತೀಯ ಮೂಲದವರೆಂದು ನಾವು ಹೆಮ್ಮೆ ಪಟ್ಟುಕೊಳ್ಳುತ್ತೇವೆ. ಆದರೆ ಇದೇ ಕಮಲಾ ಹ್ಯಾರಿಸ್ ಅವರು ಜೋಬೈಡನ್ ಅವರ ಸರ್ಕಾರದಲ್ಲಿ ಉಪಾಧ್ಯಕ್ಷರಾಗಿದ್ದಾಗ ಭಾರತಕ್ಕೆ ಅಧಿಕೃತ ಭೇಟಿ ನೀಡುವಂತೆ ಭಾರತ ಸರ್ಕಾರ ಮನವಿ ಮಾಡಿದ್ದರೂ ಭಾರತಕ್ಕೆ ಭೇಟಿ ನೀಡಲಿಲ್ಲ ಎನ್ನುವುದು ಗಮನಾರ್ಹ. ಭಾರತ ಮೂಲದವರೆಂದು ನಾವು ಬೆಂಬಲಿಸಬಹುದು. ಆದರೆ ಅಲ್ಲಿನ ಅನಿವಾಸಿ ಭಾರತೀಯರು ಬೆಂಬಲಿಸಬೇಕಲ್ಲ?

–ಮುಳ್ಳೂರು ಪ್ರಕಾಶ್, ಕನಕದಾಸನಗರ, ಮೈಸೂರು.

ಮತ್ತಷ್ಟು ಬೆಲೆ ಕುಸಿಯುವ ಸಾಧ್ಯತೆ

ಮಾನ್ಯರೆ,

ಶ್ರೀಲಂಕಾದೊಂದಿಗಿನ ಮುಕ್ತ ವ್ಯಾಪಾರ ಒಪ್ಪಂದದ ಪ್ರಕಾರ ಭಾರತಕ್ಕೆ ಈ ವರ್ಷ 2,000 ಟನ್ ಕಾಳುಮೆಣಸನ್ನು ಸುಂಕ ರಹಿತ ಆಮದು ಮಾಡಿಕೊಳ್ಳಲು ಅವಕಾಶವಿದೆ. ಆಮದು ಮಾಡಿಕೊಳ್ಳಲಾದ ಕಾಳುಮೆಣಸನ್ನು ಮಾರುಕಟ್ಟೆಯಲ್ಲಿ ತ್ವರಿತವಾಗಿ ಮಾರಾಟ ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ. ಕೇಂದ್ರ ಸರಕಾರ ಕಾಳುಮೆಣಸನ್ನು ಅಗತ್ಯ ಮಾರಾಟ ವಸ್ತುಗಳ ವರ್ಗಕ್ಕೆ ಸೇರಿಸಿದ್ದರಿಂದ ಕಾಳುಮೆಣಸಿನ ಬೆಲೆ ಮತ್ತಷ್ಟು ಕುಸಿಯಲಿದೆ ಎಂದು ರೈತರು, ವ್ಯಾಪಾರಿಗಳು ಅಭಿಪ್ರಾಯಪಟ್ಟಿದ್ದಾರೆ. ಕಾಳುಮೆಣಸಿನ ಬೆಲೆ ಕುಸಿತ ಹೆಚ್ಚಿನ ರೈತರಿಗೆ ಆರ್ಥಿಕ ಅಸ್ಥಿರತೆ ಉಂಟು ಮಾಡಲಿದೆ.

–ಚೇತನ್ ಎನ್.ಆರ್., ನಗರ್ಲೆ, ನಂಜನಗೂಡು.

ಬೋರ್ಡ್ ಪರೀಕ್ಷೆ ರದ್ದತಿ ಸ್ವಾಗತಾರ್ಹ

ಮಾನ್ಯರೆ,

ರಾಜ್ಯ ಸರಕಾರ ಹಾಗೂ ಖಾಸಗಿ ಶಾಲೆಗಳ ಪ್ರತಿಷ್ಠೆಯ ಕಾರಣದಿಂದ ರಾಜ್ಯ ಪಠ್ಯಕ್ರಮದ 5,8,9 ಹಾಗೂ 11ನೇ ತರಗತಿಗಳ ರಾಜ್ಯ ಬೋರ್ಡ್ ಪರೀಕ್ಷೆಗಳ ವಿರುದ್ಧ ಸುಪ್ರೀಂ ಕೋರ್ಟ್ ಈ ಅಕ್ಟೋಬರ್‌ನಲ್ಲಿ ರಾಜ್ಯ ಸರಕಾರವನ್ನು ತರಾಟೆಗೆ ತೆಗೆದುಕೊಂಡ ಕಾರಣದಿಂದ ಈ ವರ್ಷ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಬೋರ್ಡ್ ಪರೀಕ್ಷೆಗಳನ್ನು ರದ್ದುಗೊಳಿಸಿ, ಹಿಂದಿನ ಪರೀಕ್ಷಾ ಕ್ರಮಗಳನ್ನೇ ಅನುಸರಿಸುವುದಾಗಿ ಶಿಕ್ಷಣ ಸಚಿವರು, ಇಲಾಖೆ ಪ್ರಕಟಿಸಿರುವುದು ಪೋಷಕರಲ್ಲಿ, ಶಾಲಾ ವಿದ್ಯಾರ್ಥಿಗಳಲ್ಲಿ ಸಂತಸ ಮೂಡಿಸಿದೆ.

ಶಿಕ್ಷಣ ಸಚಿವರ ಶಿಕ್ಷಣ ಇಲಾಖೆಯ, ಅತಿಯಾದ ಹಸ್ತಕ್ಷೇಪ, ಮೂಗು ತೂರಿಸುವಿಕೆಯಿಂದ ಹೊಸ ಸುಧಾರಣೆಗಳು ವಾದ–ವಿವಾದಕ್ಕೆ ಗುರಿಯಾಗಿ ಪೋಷಕರಲ್ಲಿ ಶಾಲಾ ವಿದ್ಯಾರ್ಥಿಗಳಲ್ಲಿ ಅಸಮಾಧಾನ, ಸಂದೇಹ ಸೃಷ್ಟಿಸಿದ್ದವು. ಹಿರಿಯ ಅನುಭವಿ ಶಿಕ್ಷಕರ, ಶಿಕ್ಷಣ ತಜ್ಞರ ಸಲಹೆ ಪಡೆಯದೆ, ಅಧಿಕಾರಿಗಳ ಮಾತುಗಳನ್ನು ನಂಬಿ ಅತಿ ಉತ್ಸಾಹದಿಂದ ಜಾರಿಗೆ ತಂದ ಹಲವು ಶಿಕ್ಷಣ ಯೋಜನೆಗಳ ವಾದ – ವಿವಾದಕ್ಕೆ ಶಿಕ್ಷಣ ಸಚಿವರು ಗುರಿಯಾಗಿದ್ದು ಎಂತಹ ಶೈಕ್ಷಣಿಕ ವಿಪರ್ಯಾಸ!

ಹಾಗೆಯೇ ಶಿಕ್ಷಣ ಸಚಿವರು ಈ ಅಕ್ಟೋಬರ್‌ನಲ್ಲಿ ಪ್ರಕಟಿಸಿರುವ 10ನೇ ತರಗತಿ ಹಾಗೂ ಪಿಯುಸಿ ಪಬ್ಲಿಕ್ ಪರೀಕ್ಷೆಗಳ ಹೊಸ ಸುಧಾರಣೆಗಳು ಯಶಸ್ವಿಯಾಗಲಿ. ರಾಜ್ಯದ ಸರಕಾರಿ ಶಾಲೆಗಳಲ್ಲಿ ಗಣಿತ, ವಿಜ್ಞಾನ, ಇಂಗ್ಲೀಷ್ ಕಲಿಕೆಗೆ ಖಾಸಗಿ ಮಂದಿಯ ನೆರವು, ತಂತ್ರಜ್ಞಾನದ ನೆರವು, ಶಿಕ್ಷಕರಿಗೆ ತರಬೇತಿ ಕ್ರಮಗಳು ಅಭಿನಂದನಾರ್ಹ ಸಂಗತಿ. ಈ ಅಕ್ಟೋಬರ್‌ನಲ್ಲಿ 10ನೇ ತರಗತಿಯ ಮಧ್ಯವಾರ್ಷಿಕ ಪ್ರಶ್ನೆಪತ್ರಿಕೆಗಳು ಸೋರಿಕೆಯಾಗಿದ್ದರಿಂದ ವಿದ್ಯಾರ್ಥಿಗಳಲ್ಲಿ ಬೇಸರ ಮೂಡಿಸಿತ್ತು.

ನಗರ ಪ್ರದೇಶಗಳಲ್ಲಿ ಕನ್ನಡ ಶಾಲೆಗಳ ಬೀಗದ ಬಗ್ಗೆ ಶಿಕ್ಷಣ ಸಚಿವರು, ಇಲಾಖೆ, ಗಂಭೀರವಾಗಿ ಚಿಂತಿಸಲಿ. ಸರಕಾರಿ ಶಾಲೆಗಳಲ್ಲಿ ಇಂಗ್ಲೀಷ್ ಮಾಧ್ಯಮವನ್ನು ಹೆಚ್ಚಿಸುವ ಆತುರದಲ್ಲಿ ಕನ್ನಡ ಶಾಲೆಗಳ ಕತ್ತು ಹಿಸುಕುವ, ಕೊಲೆ ಮಾಡುವ ಕ್ರಮಗಳು ಕಡಿಮೆಯಾಗಲಿ !

–ಮಂಜುಳಾ ರಾಮಶೇಷ, ರಾಘವೇಂದ್ರ ಬ್ಲಾಕ್, ಶ್ರೀನಗರ, ಬೆಂಗಳೂರು


ಮಹಿಳೆಯ ಒಳ ಉಡುಪಿನ ಜಾಹೀರಾತು ಇಲ್ಲೇಕೆ?



ಮಾನ್ಯರೆ,

ಹೇಳಿ ಕೇಳಿ, ಮೈಸೂರಿನ ಸೂರ್ಯ ಬೇಕರಿ ವೃತ್ತ, ಸದಾ ಜನ ಜಂಗುಳಿಯಿಂದ ಕೂಡಿದ ಪ್ರದೇಶ. ಇಲ್ಲಿ "ಟ್ರಾಫಿಕ್ ನಿಯಮ ಪಾಲಿಸುವವನೇ ಕೋಣ, ಪಾಲಿಸದವನೇ ಜಾಣ" ಎನ್ನುವ ಕೊಂಕು ಮಾತಿದೆ. ಇಂತಹ ಪ್ರಮುಖ ವೃತ್ತದಲ್ಲಿ "ಜಾಕಿ" ಕಂಪನಿಯವರು, ಮಹಿಳೆಯ ಒಳ ಉಡುಪಿನ ಜಾಹೀರಾತು ಅಳವಡಿಸಿರುವ ಕ್ರಮ, ಸಾರ್ವಜನಿಕ ಉಪದ್ರವವೇ ಸರಿ. ಇಲ್ಲಿ ಇದರ ಇರುವಿಕೆ, ಅಸಲಿಗೆ ಅನಗತ್ಯ ವೃಥಾ ವಾಹನ ಅಪಘಾತಗಳಿಗೆ ಕಾರಣವಾಗಬಹುದು. ಇದನ್ನು ಮನಗಂಡು ಬಡಾವಣೆಗೆ ಸಂಬಂಧಿಸಿದ ಟ್ರಾಫಿಕ್ ಪೊಲೀಸರು ಮತ್ತು ಸ್ಥಳೀಯ ನಗರಪಾಲಿಕೆ ಜಂಟಿಯಾಗಿ ಸೇರಿ, ಕೂಡಲೇ ಈ ಜಾಹೀರಾತು ಹೋರ್ಡಿಂಗ್ ಅನ್ನು ತೆರವುಗೊಳಿಸಿ, ಸಾಮಾಜಿಕ ಕಳಕಳಿ ಮೆರೆಯಲಿ.

–ನಾಗಮಂಗಲ ನರಸಿಂಹಮೂರ್ತಿ, ಮೈಸೂರು.



ಕೆಬಿಜಿಯವರ

ಭೂಮಂತ್ರ... ಭೂಮಂತ್ರ... ಭೂಮಂತ್ರ...

ಡೊನಾಲ್ಡ್ ಟ್ರಂಪ್ ಅವರಿಗೆ ಜಯದ ಸಂಭ್ರಮ

ಅಮೆರಿಕ ಅಧ್ಯಕ್ಷರಾಗಿ ಡೊನಾಲ್ಡ್ ಟ್ರಂಪ್ ಪುನರಾಯ್ಕೆ: ಭಾರತಕ್ಕೆ ಶುಭ ಸೂಚನೆ



2019ರಲ್ಲಿ ಹೋಸ್ಟನ್‌ನಲ್ಲಿ ನಡೆದ ಕಾರ್ಯಕ್ರಮದಲ್ಲಿ ಟ್ರಂಪ್ ಮತ್ತು ನರೇಂದ್ರ ಮೋದಿ

ಮೊನ್ನೆ ನಡೆದ ಅಮೆರಿಕ ಅಧ್ಯಕ್ಷೀಯ ಚುನಾವಣೆಯ ಬಗ್ಗೆ ಎರಡು ಮಾತು. 2024ರ ಅಮೆರಿಕ ಅಧ್ಯಕ್ಷೀಯ ಚುನಾವಣೆಯಲ್ಲಿ ಡೊನಾಲ್ಡ್ ಟ್ರಂಪ್ ಗೆಲುವು ಸಾಧಿಸಿದ್ದಾರೆ. ಇದು ಇತ್ತೀಚಿನ ಅಮೆರಿಕಾದ ಇತಿಹಾಸದಲ್ಲೇ ಅತ್ಯಂತ ದೊಡ್ಡ ರಾಜಕೀಯ ಚುನಾವಣಾ ಹೋರಾಟವಾಗಿತ್ತು. ಕಮಲ ಮುದುಡಿ ಹೋಗಿದ್ದಾಳೆ. ಬರಾಕ್ ಒಬಾಮಾ ಅಧ್ಯಕ್ಷರಾಗುವ ಮೊದಲು ಮತ್ತು ನಂತರ ಅಮೆರಿಕದ ಕೆಲವು ಭಾಗಗಳಿಗೆ ಭೇಟಿ ನೀಡಿದ್ದರಿಂದ, ನಾನು ಗ್ರಹಿಸಿದಂತೆ ಅಮೆರಿಕದ ಒಳಿತಿಗಾಗಿ ನಾನು ಯಾವಾಗಲೂ ಡೊನಾಲ್ಡ್ ಟ್ರಂಪ್ ಪರವಾಗಿದ್ದೇನೆ.

ಇದು ವೈಯಕ್ತಿಕವಾಗಿ ನನಗೆ ಮುಖ್ಯವಲ್ಲದಿರಬಹುದು. ಆದರೆ ನನ್ನ ದೇಶಕ್ಕೆ ಟ್ರಂಪ್ ಮುಖ್ಯ ಎಂದು ನನಗೆ ಖಾತ್ರಿಯಿದೆ. ಹೀಗಾಗಿ ಟ್ರಂಪ್ ಗೆಲುವು ನನಗೆ ಮುಖ್ಯವಾಗಿದೆ. **ಅಮೆರಿಕ ಫಸ್ಟ್** ಎಂಬುದು ಟ್ರಂಪ್ ಅವರ ಸ್ಪಷ್ಟ ಕರೆಯಾಗಿದ್ದರೆ, ನನ್ನ ದುರ್ಬಲ ಕರೆಯು **'ಇಂಡಿಯಾ ಫಸ್ಟ್'** ಆಗಿದೆ. ಎಲ್ಲಕ್ಕಿಂತ ಹೆಚ್ಚಾಗಿ, ಟ್ರಂಪ್ ಅವರ ಗೆಲುವು ನಮ್ಮ ಪ್ರಧಾನಿ ನರೇಂದ್ರ ಮೋದಿಯವರ ಕೈಗಳನ್ನು ಮತ್ತಷ್ಟು ಬಲಪಡಿಸುತ್ತದೆ.

ಇನ್ನು ಮುಂದೆ ಯುದ್ಧ, ಗಡಿ ಉಲ್ಲಂಘನೆ, ಭಯೋತ್ಪಾದನೆ ಅಥವಾ ಅಕ್ರಮ ವಲಸೆಯನ್ನು ಈಗಿರುವಷ್ಟು ಸುಲಭವಾಗಿ ಮಾಡಲು ಯಾರಿಗೂ ಧೈರ್ಯ ಬರಲಾರದು. **ಜಮ್ಮು ಮತ್ತು ಕಾಶ್ಮೀರದಲ್ಲಿ ಮೊನ್ನೆ ನಡೆದ ರಾಜ್ಯ ಚುನಾವಣೆಯ ನಂತರ ಪಾಕಿಸ್ತಾನ ಉತ್ತೇಜಿಸಿದ ಭಯೋತ್ಪಾದನೆ ಹಠಾತ್ ಹೆಚ್ಚಾಗಿದೆ. ಅದು ಈಗ ಟ್ರಂಪ್ ಅಮೆರಿಕ ಅಧ್ಯಕ್ಷರಾದ ಮೇಲೆ ಕೊನೆಗೊಳ್ಳುತ್ತದೆ ಅಥವಾ ವಿರಳವಾಗಿರುತ್ತದೆ ಎಂಬ ಭಾವನೆ ನನಗೆ ಬರುತ್ತದೆ.**

ನರೇಂದ್ರ ಮೋದಿ 2019ರಲ್ಲಿ ಎರಡನೇ ಬಾರಿಗೆ ಗೆದ್ದಾಗ ಡೊನಾಲ್ಡ್ ಟ್ರಂಪ್ ಅಮೆರಿಕದ ಅಧ್ಯಕ್ಷರಾಗಿದ್ದರು. ಸೆಪ್ಟೆಂಬರ್ 2019ರಲ್ಲಿ ಅಮೆರಿಕ–ಭಾರತೀಯರು ಟೆಕ್ಸಾಸ್‌ನ ಹೋಸ್ಟನ್‌ನಲ್ಲಿ ನಡೆಸಿದ **"ಹೌಡಿ ಮೋದಿ"** ಕಾರ್ಯಕ್ರಮದಲ್ಲಿ ಪ್ರಧಾನಿ ನರೇಂದ್ರ ಮೋದಿಯವರಿಗೆ ಅಭೂತಪೂರ್ವ ಉತ್ಸಾಹ ಭರಿತ ಸ್ವಾಗತವನ್ನು ನೀಡಿದ ರೀತಿಯನ್ನು ಟಿವಿಯಲ್ಲಿ ನೋಡಿದ್ದು ನನಗೆ ನೆನಪಿದೆ. ನರೇಂದ್ರ ಮೋದಿ ಅವರ ಅಪ್ರತಿಮ ವ್ಯಕ್ತಿತ್ವಕ್ಕೆ ಇದು ಸಾಮಾನ್ಯ ಗೌರವವಲ್ಲ. ಬಹುಶಃ ಅಮೆರಿಕಾದಲ್ಲಿ ಮೊದಲ ಬಾರಿಗೆ, ಅಮೆರಿಕದ ಅಧ್ಯಕ್ಷರಾಗಿದ್ದ ಡೊನಾಲ್ಡ್ ಟ್ರಂಪ್ ಅವರು ಅಧಿಕೃತವಲ್ಲದ ಈ ಕಾರ್ಯಕ್ರಮದಲ್ಲಿ ಭಾಗವಹಿಸಿ ವಿಶ್ವದ ಬೇರೆ ದೇಶದ ಮುಖ್ಯಸ್ಥರು ಹೊಟ್ಟೆಕಿಚ್ಚು ಪಡುವಂತೆ ಮಾಡಿದರು.

ಆ ಸಮಯದಲ್ಲಿ, ಟಿವಿಯಲ್ಲಿ ಕಾರ್ಯಕ್ರಮವನ್ನು ನೋಡಿದಾಗ, ಮೋದಿ ಅವರು ಶುದ್ಧ ಇಂಗ್ಲಿಷ್‌ನಲ್ಲಿ ಸ್ವಾಗತ ಭಾಷಣ ಮಾಡುವುದನ್ನು ಕೇಳಿ ಆಶ್ಚರ್ಯವಾಯಿತು. ನಂತರ ಟ್ರಂಪ್ ಅವರು ಮೋದಿ ಮತ್ತು ಅವರ ದೇಶದ ಬಗ್ಗೆ ಸಂಪೂರ್ಣ ಪ್ರೀತಿಯಿಂದ ಪ್ರತಿಕ್ರಿಯಿಸುವುದನ್ನು ಕೇಳಿ ನಾನು ಮಂತ್ರಮುಗ್ಧನಾದೆ.

> **ಈಗ ಟ್ರಂಪ್ ಗೆದ್ದಿದ್ದಾರೆ. ಮೋದಿ ಅವರು 2019ರಲ್ಲಿ ಅಮೆರಿಕದಲ್ಲಿ ಪಡೆದ ಈ ಗೌರವವನ್ನು 2024ರಲ್ಲಿ ಭಾರತಕ್ಕೆ ಆಹ್ವಾನಿಸುವ ಮೂಲಕ ಟ್ರಂಪ್‌ಗೆ ಹಿಂದಿರುಗಿಸುವ ಸಮಯ ಬಂದಿದೆ. ಇಂತಹ ಸಂದರ್ಭದಲ್ಲಿ ಮೋದಿ ಅಮೆರಿಕಾದ ಭಾರತೀಯರನ್ನು ನಿರಾಶೆಗೊಳಿಸುವುದಿಲ್ಲ ಎಂದು ಭಾವಿಸುತ್ತೇನೆ.**

ಅಮೆರಿಕ ಮತ್ತು ಭಾರತೀಯ ಸಂವಿಧಾನಗಳು ಮೂರು ಸುಂದರ ಪದಗಳಾದ 'ವಿ ದಿ ಪೀಪಲ್' (We the People) ಅನ್ನು ಬಳಸಿರುವುದು ತುಂಬಾ ಮೆಚ್ಚತಕ್ಕದ್ದು ಎಂದು ಟ್ರಂಪ್ ಹೇಳಿದ್ದರು.

'ತೀವ್ರಗಾಮಿ ಇಸ್ಲಾಮಿಕ್ ಭಯೋತ್ಪಾದನೆ'ಯನ್ನು ಜಾಗತಿಕವಾಗಿ ಕೊನೆಗೊಳಿಸಬೇಕು ಎಂದು ಟ್ರಂಪ್ ಹೇಳಿದಾಗ ಮೋದಿಯವರ ಕಿವಿಗಳಿಗೆ ಮತ್ತು ಪ್ರತಿಯೊಬ್ಬ ರಾಷ್ಟ್ರೀಯತಾವಾದಿ ಭಾರತೀಯರ ಕಿವಿಗಳಿಗೆ ಅದು ಮಧುರ ಸಂಗೀತದಂತೆ ಕೇಳಿಸಿತು. ಪ್ರೇಕ್ಷಕರು ಎದ್ದು ನಿಂತು ಕೆಲವು ನಿಮಿಷ ಚಪ್ಪಾಳೆ ತಟ್ಟಿದರು.

ಈಗ ಟ್ರಂಪ್ ಗೆದ್ದಿದ್ದಾರೆ. ಮೋದಿ ಅವರು 2019ರಲ್ಲಿ ಅಮೆರಿಕದಲ್ಲಿ ಪಡೆದ ಈ ಗೌರವವನ್ನು 2024–2025ರಲ್ಲಿ ಟ್ರಂಪ್‌ರನ್ನು ಭಾರತಕ್ಕೆ ಆಹ್ವಾನಿಸುವ ಮೂಲಕ ಅವರಿಗೆ ಹಿಂದಿರುಗಿಸುವ ಸಮಯ ಬಂದಿದೆ. ಈ ವಿಷಯದಲ್ಲಿ ಮೋದಿ ಅವರು ಅಮೆರಿಕಾದ ಭಾರತೀಯರನ್ನು ನಿರಾಸೆಗೊಳಿಸುವುದಿಲ್ಲ ಎಂದು ಭಾವಿಸುತ್ತೇನೆ.

2024ರ ಜುಲೈ 19 ರಂದು ನಾನು **'ವೇಟಿಂಗ್ ಫಾರ್ ಡೊನಾಲ್ಡ್ ಟ್ರಂಪ್'** ಎಂಬ ಶೀರ್ಷಿಕೆಯಡಿ ಲೇಖನವನ್ನು ಇಂಗ್ಲೀಷ್‌ನಲ್ಲಿ ಬರೆದಿದ್ದೆ. ಅಲ್ಲಿ ನಾನು ಎರಡು ರೀತಿಯ ರಾಜಕಾರಣಿಗಳ ಬಗ್ಗೆ ಮಾತನಾಡಿದ್ದೇನೆ–**ದೇಶಭಕ್ತ ರಾಜಕಾರಣಿಗಳು ಮತ್ತು ಅಧಿಕಾರದಾಹಿ ರಾಜಕಾರಣಿಗಳು**. ಮೋದಿ ಮತ್ತು ಟ್ರಂಪ್ ದೇಶಭಕ್ತ ರಾಜಕಾರಣಿಗಳ ವರ್ಗಕ್ಕೆ ಸೇರಿದವರು. ನಮ್ಮ ದೇಶದಲ್ಲಿ ಅನೇಕರು ಅಧಿಕಾರದಾಹಿ ರಾಜಕಾರಣಿಗಳಾಗಿರುವುದು ದುರಂತ.

ತಮ್ಮ 2020ರ **'ಸ್ಟೇಟ್ ಆಫ್ ದಿ ಯೂನಿಯನ್'** ಭಾಷಣದಲ್ಲಿ ಟ್ರಂಪ್ ಅವರು ಮೋದಿಯವರ ಬಗ್ಗೆ ಮಾತನಾಡುತ್ತಾ **"ಮೋದಿ ಅವರ ನಾಯಕತ್ವದಲ್ಲಿ ಭಾರತ ಅದೃಷ್ಟವಂತ ದೇಶವಾಗಿದೆ. ಮತ್ತು ಭಾರತದ ಭವಿಷ್ಯವು 'ಪ್ರಕಾಶಮಾನವಾಗಿದೆ' ಎಂದು ಹೇಳಿದರು.** ಮುಂದುವರಿದು, 'ಸಮಾಜವಾದವು ರಾಷ್ಟ್ರವನ್ನು ನಾಶಪಡಿಸುತ್ತದೆ. ಆದರೆ ಯಾವಾಗಲೂ ನೆನಪಿಡಿ, ಸ್ವಾತಂತ್ರ್ಯವು ಆತ್ಮಗಳನ್ನು ಒಗ್ಗೂಡಿಸುತ್ತದೆ' ಎಂದು ಅವರು ಹೇಳಿದ್ದರು. ಇತ್ತೀಚೆಗೆ ನಿಧನರಾದ ರತನ್ ಟಾಟಾ ಕೂಡ ನೆಹರೂ ಅವರ ಸಮಾಜವಾದದ ಬಗ್ಗೆ ಅದೇ ಅಭಿಪ್ರಾಯವನ್ನು ಹೊಂದಿದ್ದರು. ಮತ್ತು ಭಾರತ ರತ್ನ ಸಿ.ರಾಜಗೋಪಾಲಾಚಾರಿ ಅವರ ಅಭಿಪ್ರಾಯವೂ ಅದೇ ಆಗಿತ್ತು.

ಮೋದಿಯವರು 2014ರಲ್ಲಿ ಪ್ರಧಾನಿಯಾದಾಗ, ಸ್ವಾತಂತ್ರ್ಯ ಪೂರ್ವ ವರ್ಷಗಳಲ್ಲಿ ಜನಿಸಿದ ಮತ್ತು 60 ವರ್ಷಗಳ ಕಾಲ ಕಾಂಗ್ರೆಸ್ ಆಡಳಿತವನ್ನು ನೋಡಿದ ನಾನು ಮತ್ತು ಅನೇಕರು **ಹೊಸ ಭಾರತೀಯ ಯುಗವು ಪ್ರಾರಂಭವಾಗಿದೆ; ನಮಗಾದ ಐತಿಹಾಸಿಕ ಅನ್ಯಾಯ ಮತ್ತು ತಪ್ಪುಗಳನ್ನು ಸರಿಪಡಿಸುವ ಅವಕಾಶ ಬಂದಿದೆ ಎಂದು ಭಾವಿಸಿದ್ದೆವು**. ದುರದೃಷ್ಟವಶಾತ್, ಮೋದಿಯವರಿಂದ ಆ ದಿಸೆಯಲ್ಲಿ ಸಾಕಷ್ಟು ಕೆಲಸ ಮಾಡಲಾಗಲಿಲ್ಲ. ಇಲ್ಲಿವರೆಗೆ ಏನು ಮಾಡಲಾಗಿದೆಯೋ ಅದು ತುಂಬಾ ಕಡಿಮೆ ಎಂದು ತೋರುತ್ತದೆ.

ಮೋದಿಯವರ 11 ವರ್ಷಗಳ ಅಧಿಕಾರಾವಧಿಯನ್ನು ನೋಡಿದಾಗ, ನೆಹರೂ ಅವರಂತೆ, ಮೋದಿ ಅವರು ಕೂಡ ಮಾಡಲು ಇನ್ನೂ ಕೆಲಸಗಳಿವೆ ಎಂದು ಅಸಮಾಧಾನ ವ್ಯಕ್ತಪಡಿಸಬೇಕಾಗುತ್ತೋ ಏನೋ? ನೋಡೋಣ. ಇನ್ನು ನಾಲ್ಕು ವರ್ಷ ಅವರಿಗೆ ಅಧಿಕಾರವಿದೆ.

(ಮೂಲ ಇಂಗ್ಲಿಷ್ ಲೇಖನದ ಕನ್ನಡ ಅನುವಾದ)

email: voice@starofmysore.com

ಪುಸ್ತಕಗಳು ಮನಸ್ಸಿನೊಂದಿಗೆ ಸಂಪರ್ಕ ಸಾಧಿಸುತ್ತದೆ

ಮುಕ್ತ ವಿವಿ ಸಹಾಯಕ ಆಂಗ್ಲ ಪ್ರಾಧ್ಯಾಪಕ ಡಾ.ಜಿ.ನಟರಾಜ್ ಅಭಿಮತ



ಮೈಸೂರಿನ ಎಸ್.ಬಿ.ಆರ್.ಆರ್. ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಆಯೋಜಿಸಿದ್ದ ಅನ್‌ಪ್ಯಾಕಿಂಗ್ ದ ಪೇಜಸ್: ಅನ್ ಓರಲ್ ಪ್ರಸೆಂಟೇಷನ್ ಎಂಬ ಸ್ಪರ್ಧಾ ಕಾರ್ಯಕ್ರಮದಲ್ಲಿ ಡಾ.ನಟರಾಜ್ ಅವರನ್ನು ಅಭಿನಂದಿಸಲಾಯಿತು.

ಮೈಸೂರು,ನ.7–ಮೈಸೂರಿನ ಎಸ್.ಬಿ.ಆರ್.ಆರ್. ಮಹಾಜನ ಪ್ರಥಮ ದರ್ಜೆ ಕಾಲೇಜಿನ ಗ್ರಂಥಾಲಯ ವಿಭಾಗ ಹಾಗೂ ಐಕ್ಯೂಎಸಿ ಸಹಯೋಗದೊಂದಿಗೆ ಅನ್‌ಪ್ಯಾಕಿಂಗ್ ದ ಪೇಜಸ್: ಅನ್ ಓರಲ್ ಪ್ರಸೆಂಟೇಷನ್ ಎಂಬ ಸ್ಪರ್ಧಾ ಕಾರ್ಯಕ್ರಮವನ್ನು ವಿದ್ಯಾರ್ಥಿಗಳಿಗಾಗಿ ಆಯೋಜಿಸಲಾಗಿತ್ತು. ವಿದ್ಯಾರ್ಥಿಗಳು ತಾವು ಓದಿದ ಪುಸ್ತಕದ ಬಗ್ಗೆ ತಮ್ಮ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಕರ್ನಾಟಕ ರಾಜ್ಯ ಮುಕ್ತ ವಿವಿ ಸಹಾಯಕ ಆಂಗ್ಲ ಪ್ರಾಧ್ಯಾಪಕ ಡಾ. ನಟರಾಜ್ ಮಾತನಾಡಿ, ಪುಸ್ತಕಗಳನ್ನು ಓದುವುದರಿಂದ ಜೀವನದಲ್ಲಿ ಹೊಸ ಅಲೆಯನ್ನು ಸೃಷ್ಟಿಸುವುದರ ಜೊತೆಗೆ ಹೊಸ ಪ್ರಪಂಚ, ಜನರ ಅಭಿಪ್ರಾಯಗಳು ಮತ್ತು ಸಂಶೋಧನಾ ಸಾಹಿತ್ಯಗಳ ಮೂಲಕ ವಿವಿಧ ಸಂಶೋಧನಾ ಮಾಹಿತಿಗಳನ್ನು ತಿಳಿಸುತ್ತವೆ. ಇನ್ನು ವಿಶೇಷವಾಗಿ ಪುಸ್ತಕ ವಿಮರ್ಶೆಗಳಿಗೆ ಬಂದಾಗ ನಿಮ್ಮ ಓದುವಿಕೆ ಒಬ್ಬ ಶ್ರೇಷ್ಠ ಮನಸ್ಸಿನೊಂದಿಗೆ ಸಂಪರ್ಕ ಸಾಧಿಸುತ್ತದೆ. ವಿದ್ಯಾರ್ಥಿಗಳು ಸಂವಿಧಾನದ ಮೂಲಭೂತ ಅಂಶಗಳನ್ನು ತಿಳಿದಿರಬೇಕಾದುದು ಬಹಳ ಮುಖ್ಯ. ಸಾಹಿತ್ಯವು ಹೇಗೆ ಮಾನವನ ಮನಸ್ಸಿಗೆ ಮಾರ್ಗಗಳನ್ನು ತೆರೆಯುತ್ತದೆ ಮತ್ತು ಮಾನವನ ಭಾವನೆಗಳು, ಆಲೋಚನೆಗಳು, ಪ್ರವೇಶಿಸುತ್ತದೆ ಎನ್ನುವ ವಾಸ್ತವದ ಒಳನೋಟವನ್ನು ಕಾಣಬಹುದಾಗಿದೆ. ಸಾಹಿತ್ಯ, ಪಠ್ಯದ ಪ್ರತಿಯೊಂದು ತುಣುಕು ಕಲಾತ್ಮಕ ಸೃಷ್ಟಿಯಾಗಿದೆ ಮತ್ತು ಭವ್ಯವಾದ ಸಿದ್ಧಾಂತವನ್ನು ಹೊಂದಿದೆ. ಪದವಿ ವಿದ್ಯಾರ್ಥಿಗಳಾದ ನೀವು ಓದಿದ ಪುಸ್ತಕಗಳ ಕುರಿತು ಅಂತಹ ದೃಷ್ಟಿಕೋನದಿಂದ ಮಾತನಾಡುತ್ತಿರುವುದು ನಿಜಕ್ಕೂ ಇದಕ್ಕೊಂದು ನಿದರ್ಶನವಾಗಿದೆ. ಇಂದು ಸಾಹಿತ್ಯ ಸಿದ್ಧಾಂತಗಳು ಮಾತನಾಡುತ್ತವೆ ಮತ್ತು ಪುಸ್ತಕ ಸಾಹಿತ್ಯವು ಓದುಗರ ಆಸ್ತಿಯಾಗಿದೆ. ಬರಹಗಾರರ ಆಸ್ತಿಯಲ್ಲ. ಆದುದರಿಂದ ಸಾಹಿತ್ಯದ ಮೌಲ್ಯವನ್ನು ಓದುಗರರಾದ ನೀವು ನಿರ್ಣಯ ಮಾಡಬೇಕು ಎಂದು ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ, ಕಾಲೇಜಿನ ಪ್ರಾಂಶುಪಾಲರಾದ ಡಾ.ಬಿ.ಆರ್.ಜಯಕುಮಾರಿ ಅವರು ಮಾತನಾಡುತ್ತಾ, ವಿದ್ಯಾರ್ಥಿಗಳು ಬಹಳ ಪ್ರೌಢಿಮೆಯಿಂದ ಸ್ಪರ್ಧೆಯಲ್ಲಿ ಭಾಗವಹಿಸಿದ್ದಾರೆ. ಪುಸ್ತಕದ ವಿಮರ್ಶೆಯನ್ನು ತಮ್ಮದೇ ರೀತಿಯಲ್ಲಿ ಮಂಡಿಸಿದ್ದಾರೆ. ಉತ್ತಮ ಪುಸ್ತಕಗಳು ಒಂದು ಶಕ್ತಿಯಾಗಿವೆ. ಅವು ನಮಗೆ ಮಾರ್ಗದರ್ಶಕ, ತತ್ವಜ್ಞಾನಿಯಾಗಿ ಮತ್ತು ಒಳ್ಳೆಯ ಗೆಳೆತನದ ಅನುಭವವನ್ನು ನೀಡುತ್ತವೆ. ಓದುವ ಅಭಿರುಚಿಯನ್ನು ಕೈಬಿಡಬಾರದು, ಅದು ಚಟವಾಗಬೇಕು. 'ಅರಿವೇ ಗುರು' ಎಂಬಂತೆ ಪುಸ್ತಕಗಳು ಆತ್ಮವಿಶ್ವಾಸವನ್ನು ಹೆಚ್ಚಿಸುತ್ತವೆ. ಒಳಗೆ ಅವಿತಿರುವ ಚೇತನವನ್ನು ಜಾಗೃತಗೊಳಿಸುತ್ತವೆ. ನಿರಂತರ ಪ್ರಕ್ರಿಯೆಯಲ್ಲೂ ಓದುವ ಅಭ್ಯಾಸವನ್ನು ನಿಲ್ಲಿಸಬಾರದು ಎಂದು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ಕಾರ್ಯಕ್ರಮದಲ್ಲಿ ಗ್ರಂಥಪಾಲಕರಾದ ವೀಣಾ, ಕನ್ನಡ ವಿಭಾಗದ ಮುಖ್ಯಸ್ಥ ಡಾ.ಎಚ್.ಆರ್.ತಿಮ್ಮೇಗೌಡ, ಐಕ್ಯೂಎಸಿ ಸಂಚಾಲಕಿ ಗೀತಾ ಹಾಗೂ ಅಧ್ಯಾಪಕರು, ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಮಕ್ಕಳಿಗೆ ಕಥೆ ಕೇಳೋಣ ಬನ್ನಿ ಕಾರ್ಯಕ್ರಮ

ಮೈಸೂರು, ನ.7– ಮೈಸೂರಿನ ಕುವೆಂಪುನಗರದ ಚಿತ್ರಭಾನು ರಸ್ತೆಯಲ್ಲಿರುವ ಸುರುಚಿ ರಂಗ ಮನೆಯಲ್ಲಿ ಕಲಾಸುರುಚಿ ವತಿಯಿಂದ ನ.9ರಂದು ಸಂಜೆ 4.30ರಿಂದ 5.30ರವರೆಗೆ ಕಥೆ ಕೇಳೋಣ ಬನ್ನಿ ಕಾರ್ಯಕ್ರಮ ನಡೆಯಲಿದೆ. ಶಿಕ್ಷಣ ಇಲಾಖೆಯ ಉಪನಿರ್ದೇಶಕರ ಕಚೇರಿಯ ಸಹಾಯಕ ಯೋಜನಾ ಸಮನ್ವಯಾಧಿಕಾರಿ ಜಿ. ವೆಂಕಟಾಚಲ ಅವರು ಮಕ್ಕಳಿಗೆ ಕಥೆ ಹೇಳುವರು.

ನಾಳೆ 'ಸೈನ್ಸ್ ಸಂಜೆ' ಕಾರ್ಯಕ್ರಮ

ಮೈಸೂರು, ನ.7– ಮೈಸೂರಿನ ಕುವೆಂಪುನಗರದ ಚಿತ್ರಭಾನು ರಸ್ತೆಯಲ್ಲಿರುವ ಸುರುಚಿ ರಂಗ ಮನೆಯಲ್ಲಿ ಕಲಾಸುರುಚಿ ವತಿಯಿಂದ ನ.9ರಂದು ಸಂಜೆ 6.30ರಿಂದ 7.30ರವರೆಗೆ ಡೇಟಾವಿವ್‌ನ ಮುಖ್ಯ ದತ್ತಾಂಶ ಯೋಜನಾಧಿಕಾರಿ ಸಂಕೇತ್ ಪಾಟೀಲ್ ಅವರು 'ಕೃತಕ ಬುದ್ಧಿ ಮತ್ತು ಭಾಷೆ – ಅನುಕೂಲಗಳು ಮತ್ತು ಅಪಾಯಗಳು' ವಿಷಯ ಕುರಿತು ಕನ್ನಡ ಹಾಗೂ ಇಂಗ್ಲಿಷ್‌ನಲ್ಲಿ ಭಾಷಣ ಮಾಡಲಿದ್ದಾರೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581/1980 E-mail address: mysoorumithra@gmail.com For advertisements: mysoorumithra@gmail.com

ಸಿಎಂ ಸಿದ್ದರಾಮಯ್ಯ ವಿರುದ್ಧ ತನಿಖಾ ಸಂಸ್ಥೆಗಳ ದುರ್ಬಳಕೆ ಆರೋಪ

ಅಹಿಂದ ಸಂಘಟನೆಗಳಿಂದ ದೆಹಲಿಯಲ್ಲಿ ಪ್ರತಿಭಟನೆ



ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ ಹಾಗೂ ಅಹಿಂದ ಸಂಘಟನೆಗಳ ವತಿಯಿಂದ ಗುರುವಾರ ನವದೆಹಲಿಯ ಕರ್ನಾಟಕ ಸಂಘದಲ್ಲಿ ಸಭೆ ನಡೆಸಿದ ಬಳಿಕ ಸಾಂಕೇತಿಕ ಪ್ರತಿಭಟನೆ ನಡೆಸಲಾಯಿತು.

ಮೈಸೂರು, ನ.7(ಎಸ್‌ಬಿಡಿ)– ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಕೇಂದ್ರ ಸರ್ಕಾರ ಹುನ್ನಾರ ನಡೆಸಿ, ಕೇಂದ್ರ ತನಿಖಾ ಸಂಸ್ಥೆಗಳ ದುರುಪಯೋಗಪಡಿಸಿಕೊಳ್ಳುತ್ತಿದೆ ಎಂದು ಆರೋಪಿಸಿ, ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ ಹಾಗೂ ಅಹಿಂದ ಸಂಘಟನೆಗಳ ಸಹಯೋಗದಲ್ಲಿ ಗುರುವಾರ ನವದೆಹಲಿಯಲ್ಲಿ ಪ್ರತಿಭಟನಾ ಸಭೆ ನಡೆಸಿದ ನಂತರ ರಾಷ್ಟ್ರಪತಿ ಕಚೇರಿಗೆ ಮನವಿ ಸಲ್ಲಿಸಲಾಯಿತು.

ನವದೆಹಲಿಯ ಕರ್ನಾಟಕ ಸಂಘದ ಆವರಣದಲ್ಲಿ ಗುರುವಾರ ಆಯೋಜಿಸಿದ್ದ ಪ್ರತಿಭಟನಾ ಸಭೆಯಲ್ಲಿ ಮಾತನಾಡಿದ ರಾಜ್ಯಸಭೆಯ ಮಾಜಿ ಸದಸ್ಯ ಡಾ.ಎಲ್.ಹನುಮಂತಯ್ಯ, ಕೇಂದ್ರ ಸರ್ಕಾರ ಸಂವಿಧಾನದ ಆಶಯಗಳನ್ನೇ ನಾಶಪಡಿಸುವ ಕೆಲಸ ಮಾಡುತ್ತಿದೆ. ದೇಶವಾಸಿಗಳನ್ನು ವಂಚಿಸುತ್ತಿರುವ ಕೇಂದ್ರ ಸರ್ಕಾರ ತನ್ನ ಸರ್ವಾಧಿಕಾರಿ ಧೋರಣೆಯನ್ನು ನಿಲ್ಲಿಸದಿದ್ದರೆ ಕನ್ನಡಿಗರ ಆಕ್ರೋಶಕ್ಕೆ ಗುರಿಯಾಗುವುದು ಅನಿವಾರ್ಯವಾಗುತ್ತದೆ. ಮುಖ್ಯಮಂತ್ರಿ ಸಿದ್ದರಾಮಯ್ಯನವರ ವಿರುದ್ಧ ಸೇಡಿನ ಮನೋಭಾವ ಹೊಂದಿರುವುದು ಖಂಡನೀಯ ಎಂದರು.

ಸಾಹಿತಿಗಳಾದ ಬಂಜಗೆರೆ ಜಯಪ್ರಕಾಶ್, ಪ್ರೊ.ಕಾಳೇಗೌಡ ನಾಗವಾರ, ಪ್ರೊ.ಎಸ್.ಜಿ.ಸಿದ್ಧರಾಮಯ್ಯ, ಉದ್ದಪ್ಪ ಅಣಗವಾಡಿ, ಡಾ.ನೀಲಾ ಸಂಪಿಗೆ, ರವೀಶ್ ಮತ್ತಿತರರು ಕೇಂದ್ರ ಸರ್ಕಾರದ ನಿಲುವನ್ನು ಖಂಡಿಸಿದರಲ್ಲದೇ, ಕರ್ನಾಟಕದ ಮುಖ್ಯಮಂತ್ರಿ ಸಿದ್ದರಾಮಯ್ಯನವರ ವಿರುದ್ಧ ಕೇಂದ್ರದ ಏಜೆನ್ಸಿಗಳನ್ನು ದುರ್ಬಳಕೆ ಮಾಡುತ್ತಿರುವುದು ಪ್ರಜಾಸತ್ತಾತ್ಮಕ ವ್ಯವಸ್ಥೆಗೆ ಹಾನಿಕರ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದರು.

ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ ರಾಜ್ಯಾಧ್ಯಕ್ಷ ಕೆ.ಎಸ್.ಶಿವರಾಂ ಮಾತನಾಡಿ, ಇಂದು ಕರ್ನಾಟಕದ ಪ್ರಮುಖ ಬುದ್ಧಿಜೀವಿಗಳು, ಚಿಂತಕರು, ಸಾಹಿತಿಗಳು, ಪತ್ರಕರ್ತರು, ಹೋರಾಟಗಾರರು, ಅಹಿಂದ ಸಂಘಟನೆಗಳ ಮುಖಂಡರು ಕರ್ನಾಟಕದಿಂದ ದೆಹಲಿವರೆಗೆ ಬಂದು ಕೇಂದ್ರ ಸರ್ಕಾರದ ಏಕಪಕ್ಷೀಯ ಧೋರಣೆಯನ್ನು ಖಂಡಿಸಿದ್ದಾರೆ. ಕರ್ನಾಟಕ ಹಾಗೂ ಕನ್ನಡಿಗರ ಗುರಿಯಾಗಿಸುತ್ತಿರುವ ಕೇಂದ್ರ ಸರ್ಕಾರದ ವಿರುದ್ಧ ಇದು ಮೊದಲ ಹಂತದ ಪ್ರತಿಭಟನೆಯಾಗಿದೆ ಎಂದು ತಿಳಿಸಿದರು.

ಸಭೆಯಲ್ಲಿ ಮೈಸೂರು ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಡಾ.ಬಿ.ಜೆ.ವಿಜಯ್ ಕುಮಾರ್, ವಿಧಾನ ಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ, ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಸದಸ್ಯ ಟಿ.ಗುರುರಾಜ್, ಮಾಜಿ ಸಚಿವ ಎಂ.ಶಿವಣ್ಣ, ಕಾಂಗ್ರೆಸ್ ಮುಖಂಡರಾದ ಎನ್.ಆರ್.ನಾಗೇಶ್, ಜೆ.ಜೆ.ಆನಂದ್, ಮಡಿವಾಳರ ಸಂಘದ ರವಿನಂದನ, ಉಪ್ಪಾರರ ಸಂಘದ ಯೋಗೇಶ್, ಅಹಿಂದ ಸಂಘಟನೆಗಳ ಪ್ರತಿನಿಧಿಗಳಾದ ಮೊಗಣ್ಣಚಾರ್, ಎನ್.ಆರ್.ಸಿದ್ದು, ಲೋಕೇಶ್ ಕುಮಾರ್, ಡಿಎಸ್‌ಎಸ್ ಸಂಚಾಲಕ ದೇವಗಳ್ಳಿ ಸೋಮಶೇಖರ್, ಎಸ್.ಎಂ.ಸಲೀಂ, ಮಂಜುಳಾ ಮಂಜುನಾಥ್, ನಾಗರತ್ನ, ಮಹೇಂದ್ರ, ಮಹದೇವು ಮತ್ತಿತರರ ಮುಖಂಡರು ಹಾಗೂ ದೆಹಲಿಯಲ್ಲಿ ನೆಲೆಸಿರುವ ಅನೇಕ ಕನ್ನಡಿಗರು ಭಾಗವಹಿಸಿದ್ದರು. ಸಭೆ ಬಳಿಕ ಸಾಂಕೇತಿಕವಾಗಿ ಪ್ರತಿಭಟನೆ ನಡೆಸಿ, ರಾಷ್ಟ್ರಪತಿ ಕಚೇರಿಗೆ ಮನವಿ ಸಲ್ಲಿಸಲಾಯಿತು.

ಷೇರು ಮಾರುಕಟ್ಟೆಯಲ್ಲಿ ಲಾಭದ ಆಮಿಷ; ಆನ್‌ಲೈನ್ ಮೂಲಕ 30 ಲಕ್ಷ ವಂಚನೆ

ಮೈಸೂರು, ನ.7(ಎಸ್‌ಬಿಡಿ)– ಷೇರು ಮಾರುಕಟ್ಟೆಯಲ್ಲಿ ಅಧಿಕ ಲಾಭ ಸಿಗಲಿದೆ ಎಂದು ನಂಬಿಸಿ ಆನ್‌ಲೈನ್ ಮೂಲಕ ನಿವೃತ್ತರೊಬ್ಬರ ಸುಮಾರು 30 ಲಕ್ಷ ರೂ. ಲಪಟಾಯಿಸಿರುವ ಸಂಬಂಧ ಮೈಸೂರಿನ ಸೆನ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸಿದ್ಧಾರ್ಥನಗರ ನಿವಾಸಿಯಾದ ಇವರು ಮೊಬೈಲ್‌ಗೆ ಬಂದ ಸಂದೇಶ ನಂಬಿ ಮೋಸ ಹೋಗಿದ್ದಾರೆ. ಷೇರು ಮಾರುಕಟ್ಟೆ ಬಗ್ಗೆ ಮಾಹಿತಿ ಹಾಗೂ ಮಾರ್ಗದರ್ಶನ ನೀಡುವುದಾಗಿ ಅವರ ಮೊಬೈಲ್ ಸಂಖ್ಯೆಯನ್ನು ವಾಟ್ಸಾಪ್ ಗ್ರೂಪ್‌ವೊಂದಕ್ಕೆ ಸೇರ್ಪಡೆ ಮಾಡಿಕೊಂಡು ಜಾಲ ಹೆಣೆದಿದ್ದಾರೆ. ಷೇರು ಮಾರುಕಟ್ಟೆಯಲ್ಲಿ ಹಣ ಹೂಡಿದರೆ ಕಡಿಮೆ ಅವಧಿಯಲ್ಲೇ ಅಧಿಕ ಲಾಭ ಸಿಗಲಿದೆ ಎಂದು ನಂಬಿಸಿ ವಿವಿಧ ಹಂತಗಳಲ್ಲಿ ಒಟ್ಟು 29.98 ಲಕ್ಷ ರೂ. ಹಣ ವರ್ಗಾವಣೆ ಮಾಡಿಸಿಕೊಂಡು, ವಂಚಿಸಿದ್ದಾರೆ.

ನೈಋತ್ಯ ರೈಲ್ವೆ

ಟೆಂಡರು ಸೂಚನೆ ಸಂ.: CAO/CN/BNC/EPC/11/2024, ದಿನಾಂಕ: 06.06.2024

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕಾಮಗಾರಿಯ ವಿವರ	ಅಂದಾಜು ಮೌಲ್ಯ
ಚಾಲಿವೆಂದಲ ಮತ್ತು ಪಾಲಸಮುದ್ರಂನಲ್ಲಿ 02 ಹೊಸ ಯಾರ್ಡ್‌ಗಳನ್ನು ಒಳಗೊಂಡಂತೆ ಮಲುಗೂರು (ಚೈನೇಜ್ (–) 831.6 (ಯಲಹಂಕ – ಪೇನುಕೊಂಡ ನಡುವಿನ ಚೈ. 109200)) ನಿಂದ ಪಾಲಸಮುದ್ರಂ (ಚೈನೇಜ್ 17/150) ನಡುವೆ ಹೊಸ ಬ್ರಾಡ್‌ಗೇಜ್ ರೈಲ್ವೆ ಲೈನಿನ ನಿರ್ಮಾಣ ಕಾರ್ಯ ಮತ್ತು 17.981 ಕಿಮೀ. ರೂಟ್ ಉದ್ದದ ಪ್ರಸ್ತುತ ಮಲುಗೂರು ಯಾರ್ಡ್‌ನ ಮಾರ್ಪಾಡು ಕೆಲಸಗಳು ಹಾಗೂ ಸಿಗ್ನಲ್ & ದೂರಸಂಪರ್ಕ, ವಿದ್ಯುದೀಕರಣ ಮತ್ತು ಎಲೆಕ್ಟ್ರಿಕಲ್ ಸಾಮಾನ್ಯ ಸೇವಾ ಕಾರ್ಯಗಳು. (ಟೆಂಡರು ಉಲ್ಲೇಖ ಸಂ. MLU-PALASAMUDRAM-EPC-01R)	ರೂ. 283,20,51,034/-

ಕೊನೆಯ ದಿನಾಂಕ

ಪ್ರಸ್ತುತ	ಪರಿಷ್ಕೃತ
18.11.2024 (15:00 ಗಂಟೆಗೆ)	ಟೆಂಡರ್ ರದ್ದಾಗಿರುತ್ತದೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ಉಪ ಮುಖ್ಯ ಇಂಜಿನಿಯರ್/ನಿರ್ಮಾಣ/ಕಾರ್ಯಗಳು/ಬೆಂಗಳೂರು ದಂಡು

PUB/555/AAMO/PRB/SWR/2024-25

South Western Railway - SWR | SWRRLY | SWRRLY

ಸಾರ್ವಜನಿಕರ ಗಮನಕ್ಕೆ

ಮೈಸೂರು ಜಿಲ್ಲೆ, ಸರಗೂರು ತಾಲ್ಲೂಕು, ಕಂದಲಿಕೆ ಹೋಬಳಿ, ಬಿದರಹಳ್ಳಿ (Bidarahalli) ಗ್ರಾಮದ ಸರ್ವೆ ನಂ.83 (ಹಳೆ ಸರ್ವೆ ನಂ. 83/2) ರಲ್ಲಿಯ 23 ಎಕರೆ ಮತ್ತು 10 ಗುಂಟೆ (23.10 ಎಕರೆ) ಕೃಷಿ ಜಮೀನನ್ನು ಡಾ॥ ಕಿರಣ ಎನ್. ಮುಗದೂರ್ (Dr. KIRAN N. MUGADUR) ರವರಿಗೆ ಕ್ರಯಕ್ಕೆ ಕೊಡಲು ದಿನಾಂಕ: 02.09.2014ರಂದು ಕ್ರಯದ ಕರಾರು ಪತ್ರ ಮತ್ತು ಸಾಮಾನ್ಯ ಅಧಿಕಾರ ಪತ್ರವನ್ನು ಶ್ರೀ ಎಸ್.ವಿ.ಪದ್ಮಪ್ರಸಾದ್‌ರವರು ಉಪನೋಂದಣಾಧಿಕಾರಿಗಳ ಕಛೇರಿ, ಹೆಚ್.ಡಿ. ಕೋಟೆ ಇಲ್ಲಿ ನೋಂದಾಯಿಸಿಕೊಟ್ಟಿರುತ್ತಾರೆ. ಇದಕ್ಕೆ ಸಂಬಂಧಿಸಿದಂತೆ, ಡಾ॥ ಕಿರಣ್ ಎನ್. ಮುಗದೂರ್‌ರವರು ಮತ್ತು ಇತರರು (ವಾದಿಗಳು) ಗೌರವಾನ್ವಿತ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಹೆಗ್ಗಡದೇವನಕೋಟೆಯಲ್ಲಿ ಅಸಲು ದಾವಾ ಸಂಖ್ಯೆ ನಂ. 71/2020ರ ಮೂಲಕ ಪ್ರಕರಣವನ್ನು (ದಾವೆಯನ್ನು) ಪ್ರತಿವಾದಿಗಳಾದ ಶ್ರೀ ಎಸ್.ವಿ. ಪದ್ಮಪ್ರಸಾದ ಮತ್ತು ಇತರರ ವಿರುದ್ಧ ದಾಖಲಿಸಿದ್ದಾರೆ. ಇದಕ್ಕೆ ಸಂಬಂಧಿಸಿದಂತೆ ದಿನಾಂಕ: 23.09.2024ರಂದು ಘನ ನ್ಯಾಯಾಲಯವು ಈ ಕೆಳಗಿನಂತೆ ಆದೇಶಿಸಿದೆ.

"ಪ್ರತಿವಾದಿಗಳು (ಎಸ್.ವಿ. ಪದ್ಮಪ್ರಸಾದ್) ಪ್ರತಿವಾದಿಗಳ ಸೇವಕರು ಅಥವಾ ಪ್ರತಿವಾದಿಗಳ ಅಡಿಯಲ್ಲಿ ಹಕ್ಕು ಸಾಧಿಸುವವರು, ಮೇಲೆ ಹೇಳಿದ ಜಮೀನನ್ನು ಪರಭಾರೆ, ವರ್ಗಾವಣೆ, ಹಸ್ತಾಂತರ, ಅನಾಧಾರ, ಪರಾಧೀನ, ಅಡಮಾನ, ಉಡುಗೊರೆ, ಇತ್ಯಾದಿ ಮಾಡದಂತೆ ತಡೆಹಿಡಿಯಲಾಗಿದೆ. ಈ ತಡೆಯು ಅಸಲು ದಾವೆ ಸಂಖ್ಯೆ 71/2020 ಇತ್ಯರ್ಥವಾಗುವವರೆಗೆ ಇರುತ್ತದೆ.

ಸಹಿ/– ಕಕ್ಷಿದಾರರು

ಸ್ಥಳ: ಮೈಸೂರು, ದಿ: 2–10–2024

Sd/- **Vishalakshamma**, BA, LLB
Advocate & Notary, Mysore Dist.

PUBLIC NOTICE

Notice is hereby given that SRI. MURTHY T T, son of Late Thimmapaiah, is desirous to sell the under mentioned property to my client/s and any person or persons claiming any interest on the under mentioned property or any part thereof, is hereby required to communicate the same to me with documentary evidence at my office, situated at DOOR No.2765/1A D13/A1, "KEYANS", 5TH MAIN ROAD, V.V. PURAM (V.V. MOHALLA), MYSORE - 570 002, within 15 (Fifteen) days from the date of this publication, as otherwise the said sale will be completed without any reference or regard to any such purported claim or interest, which shall be deemed to have been waived for all intents and purposes.

SCHEDULE PROPERTY

Site bearing No.144, situated at the residential layout formed in alienated land bearing Survey Number 191/P, 195/1, 196/3, 196/4, 196/5, 196/6, 200/1, 200/1, 200/2, 202/1, 202/2 and 224/P, totally measuring an extent of 19 Acres and 36 Guntas, known as "ARADHYA BADAVANE" situated at Belavadi Village, Elavala Hobli, Mysore Taluk, Mysore District, site measuring East to West 12 Meters and North to South 9 Meters, totally measuring 108 Sq Mts and bounded on East by Road, West by Site No. 131, North by Site No.145 and South by Site No.143.

Sd/- Dhirendra Kumar R. Mehta
Advocate
KEY-ANS LAW SOLUTIONS

Date:07.11.2024
Place: Mysore

ಕರ್ನಾಟಕ ಸರ್ಕಾರ

ಕಾರ್ಯಪಾಲಕ ಇಂಜಿನಿಯರ್ ರವರ ಕಾರ್ಯಾಲಯ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಚನ್ನರಾಯಪಟ್ಟಣ

ಕಛೇರಿ ದೂರವಾಣಿ: 08176–252749

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ: 26/2024–25 ದಿನಾಂಕ: 07.11.2024

ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಚನ್ನರಾಯಪಟ್ಟಣ, ವ್ಯಾಪ್ತಿಯ ಹೊಳೆನರಸೀಪುರ ತಾಲ್ಲೋಕಿನ ನರೇಗಾ ಘಟಕದ ಬೂದು ನೀರು ನಿರ್ವಹಣಾ ಯೋಜನೆಯಡಿಯಲ್ಲಿ ಅನುಮೋದನೆಯಾಗಿರುವ (1) ಹಳ್ಳಿಮೈಸೂರು ಗ್ರಾಮಗಳಲ್ಲಿನ ಬೂದು ನೀರು ನಿರ್ವಹಣಾ ಕಾಮಗಾರಿಗಳಿಗೆ ನಿರ್ಮಾಣ ಯಂತ್ರೋಪಕರಣಗಳನ್ನು ಒದಗಿಸುವ ಬಗ್ಗೆ (RDPR/2024-25/SE1849) ಒಟ್ಟು ಟೆಂಡರ್ ಮೊತ್ತ ರೂ 12.45 ಲಕ್ಷಗಳಿಗೆ (2) ದೊಡ್ಡಕಾಡನೂರು ಗ್ರಾಮಗಳಲ್ಲಿನ ಬೂದು ನೀರು ನಿರ್ವಹಣಾ ಕಾಮಗಾರಿಗಳಿಗೆ ನಿರ್ಮಾಣ ಯಂತ್ರೋಪಕರಣಗಳನ್ನು ಒದಗಿಸುವ ಬಗ್ಗೆ (RDPR/2024-25/SE1847) ಒಟ್ಟು ಟೆಂಡರ್ ಮೊತ್ತ ರೂ 10.83 ಲಕ್ಷಗಳಿಗೆ ದ್ವಿ–ಲಕೋಟೆ ಪದ್ಧತಿಯಲ್ಲಿ ಯಂತ್ರೋಪಕರಣಗಳ ಸೇವೆಯನ್ನು ಒದಗಿಸಲು ನೊಂದಣೀಯಾಗಿರುವ ಸರಬರಾಜುದಾರರು /ಗುತ್ತಿಗೆದಾರರಿಂದ ಸ್ಪರ್ಧಾತ್ಮಕ ಟೆಂಡರನ್ನು KPPP ಅಂತರ್ಜಾಲದಲ್ಲಿ ದಿನಾಂಕ: 14.11.2024ರ ಸಂಜೆ 5.00 ಘಂಟೆಯವರೆಗೆ ಟೆಂಡರ್‌ನ್ನು ನಿಗಧಿತ ನಮೂನೆಗಳನ್ನು https://kppp.karnataka.gov.in/kpppನಲ್ಲಿ ಡೌನ್ಲೋಡ್ ಮಾಡಿ ಅವಶ್ಯ ಮಾಹಿತಿಗಳೊಂದಿಗೆ ಹಾಗೂ ನಿಗಧಿತ ಇ.ಎಂ.ಡಿ.ಯೊಂದಿಗೆ ದಿನಾಂಕ: 14.11.2024ರ ಸಂಜೆ 5.00 ಗಂಟೆಯೊಳಗೆ ಅಪ್‌ಲೋಡ್ ಮಾಡತಕ್ಕದ್ದು. ದಿನಾಂಕ 12.11.2024ರವರೆಗೆ ಗುತ್ತಿಗೆದಾರರು ಈ ಕಛೇರಿ ವೇಳೆಯಲ್ಲಿ ಸಂಪರ್ಕಿಸಿ ಯಾವುದೇ ಮಾಹಿತಿಯನ್ನು ಪಡೆಯಬಹುದಾಗಿರುತ್ತದೆ. ದಿನಾಂಕ: 16.11.2024ರಂದು ಬೆಳಿಗ್ಗೆ 11.00ಗಂಟೆಗೆ ಗುತ್ತಿಗೆದಾರರ ತಾಂತ್ರಿಕ ಬಿಡ್ಡನ್ನು ತೆರೆಯಲಾಗುವುದು. ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ ಗುತ್ತಿಗೆದಾರರ ಆರ್ಥಿಕ ಬಿಡ್ಡನ್ನು ತೆರೆಯಲಾಗುವುದು. ಕಾಮಗಾರಿಗಳ ವಿವರಗಳು ಇ–ಪ್ರಕ್ಯೂರ್‌ಮೆಂಟ್ ಅಂತರ್ಜಾಲದಲ್ಲಿ ಲಭ್ಯವಿರುತ್ತವೆ. ಸದರಿ ಕಾಮಗಾರಿಗೆ ಸಂಬಂಧಪಟ್ಟಂತೆ ಒಂದು ವೇಳೆ ಏನಾದರೂ ತಿದ್ದುಪಡಿ ಉಂಟಾದಲ್ಲಿ ಸದರಿ ತಿದ್ದುಪಡಿಯನ್ನು ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡಲಾಗುವುದು ಟೆಂಡರ್‌ನ್ನು ಯಾವುದೇ ಕಾರಣ ನೀಡದೇ ತಿರಸ್ಕರಿಸುವ ಹಕ್ಕನ್ನು ಕಾಯ್ದಿರಿಸಲಾಗಿದೆ.

ಸಹಿ/– ಕಾರ್ಯಪಾಲಕ ಇಂಜಿನಿಯರ್,
ಪ.ರಾಜ್. ಇಂ.ವಿಭಾಗ, ಚನ್ನರಾಯಪಟ್ಟಣ.

ವಾಸಾಸಂಇ/ಹಿಸನಿ/ಹಾಸನ/626/ಕೆಎಸ್ಎಂಸಿಎ/2024–25



ನೈಋತ್ಯ ರೈಲ್ವೆ

ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಸಹಿದಾರರು ಕೆಳಕಂಡ ಕೆಲಸಕ್ಕಾಗಿ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಇ–ಟೆಂಡರ್ ಪ್ರಕಟಣೆ ಸಂ. ವೈ/ಇ.29/2024–25/62 ದಿನಾಂಕ : 28–10–2024

ಕಾಮಗಾರಿಯ ಹೆಸರು	ಅಂದಾಜು ಮೌಲ್ಯ
(ಮರು–ಟೆಂಡರ್) ಸಾಸಲು ಯಾರ್ಡ್‌ನಲ್ಲಿ ಶಂಟಿಂಗ್ ನೆಕ್‌ಗಾಗಿ ರಸ್ತೆ–4 ಮಾರ್ಗವನ್ನು 750 ಮೀಟರ್‌ಗಳಿಂದ ವಿಸ್ತರಿಸುವುದು.	ರೂ. 68,81,437.81

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 19–11–2024 ರಂದು 11:00 ಗಂಟೆಯವರೆಗೆ

ಇ–ಟೆಂಡರ್ ಪ್ರಕಟಣೆ ಸಂ. ವೈ/ಇ.29/2024–25/63 ದಿನಾಂಕ : 29–10–2024

ಕಾಮಗಾರಿಯ ಹೆಸರು	ಅಂದಾಜು ಮೌಲ್ಯ
(ಮರು–ಟೆಂಡರ್) ಮೈಸೂರು ವಿಭಾಗದ ಚಿಕ್ಕಜಾಜೂರು (ಹೊರತುಪಡಿಸಿ) – ರಾಯದುರ್ಗ (ಹೊರತುಪಡಿಸಿ) ಸೆಕ್ಷನ್‌ನ ಆರ್‌ಸಿಸಿ, ಟಿಎಸ್‌ಎಸ್, ಎಸ್‌ಪಿ ಮತ್ತು ಎಸ್‌ಎಸ್‌ಪಿ ಯಲ್ಲಿ ಎಸ್‌ಸಿಎಡಿಎ ಗಾಗಿ 4 ವರ್ಷದ ಅವಧಿಗೆ ಸಮಗ್ರ ವಾರ್ಷಿಕ ನಿರ್ವಹಣಾ ಗುತ್ತಿಗೆ	ರೂ. 48,61,681.28

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 20–11–2024 ರಂದು 11:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ಹಿರಿಯ ವಿಭಾಗೀಯ ವಿದ್ಯುತ್ ಇಂಜಿನಿಯರ್ / ಟ್ರಾಕ್ಷನ್ ಮೈಸೂರು

ಪಿಯುಬಿ/547/ಎಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2024–25

South Western Railway - SWR | SWRRLY | SWRRLY

ಮೈಸೂರು ಮಿತ್ರ 45 – ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು

ಶ್ರೀರಂಗಪಟ್ಟಣದ ಮಹದೇವಪುರ, ಚಂದಗಾಲು ಗ್ರಾಮದಲ್ಲಿ ವಕ್ಫ್ ಆಸ್ತಿ ವಿವಾದ

ವಿಪಕ್ಷ ನಾಯಕ ಆರ್.ಅಶೋಕ್ ನೇತೃತ್ವದಲ್ಲಿ ಬೃಹತ್ ಪ್ರತಿಭಟನೆ

ತಬ್ಬಿಬ್ಬಾದ ಅಧಿಕಾರಿಗಳು

ಬಿಜೆಪಿ ನಿಯೋಗಕ್ಕೆ ಸರ್ಕಾರಿ ಶಾಲೆ ಜಾಗ ವಕ್ಫ್ ಆಸ್ತಿ ಎಂದು ಸಮಜಾಯಿಷಿ ನೀಡಿದ ಪಾಂಡವಪುರ ವಿಭಾಗದ ಎಸಿ ಶ್ರೀನಿವಾಸ್‌ಗೆ ಬಿಜೆಪಿ ಮುಖಂಡರು ತರಾಟೆಗೆ ತೆಗೆದುಕೊಂಡರು. ಪ್ರತಿಭಟನಾ ವೇದಿಕೆ ಮೇಲೆ ಬಿಜೆಪಿ ಮುಖಂಡ ಇಂಡುವಾಳು ಸಚ್ಚಿದಾನಂದ ವಾಗ್ದಾಳಿ ನಡೆಸಿ, ವಕ್ಫ್ ಆಸ್ತಿ ಎಂದು ಹೇಳುತ್ತಿರಾ, ನಿಮ್ಮ ಅಪ್ಪನ ಆಸ್ತಿನಾ ಹೇಳಿ ಎಂದು ತರಾಟೆಗೆ ತೆಗೆದುಕೊಂಡರು. ಇಂಡುವಾಳು ಸಚ್ಚಿದಾನಂದ ಆಕ್ರೋಶ ವ್ಯಕ್ತಪಡಿಸುತ್ತಿದ್ದಂತೆ ಅಧಿಕಾರಿಗಳು ತಬ್ಬಿಬ್ಬಾದರು.

ಶ್ರೀರಂಗಪಟ್ಟಣ/ಮಂಡ್ಯ,ನ.7– ಶ್ರೀರಂಗಪಟ್ಟಣ ತಾಲೂಕಿನ ಮಹದೇವಪುರ ಗ್ರಾಮದ ಚಿಕ್ಕಮ್ಮ ಚಿಕ್ಕದೇವಿ ದೇವಸ್ಥಾನ ಹಾಗೂ ಚಂದಗಾಲು ಗ್ರಾಮದ ಸರ್ಕಾರಿ ಶಾಲೆಯ ವಕ್ಫ್ ಆಸ್ತಿ ವಿವಾದಕ್ಕೆ ಸಂಬಂಧಿಸಿದಂತೆ ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ್ ನೇತೃತ್ವದಲ್ಲಿ ಬಿಜೆಪಿ ಕಾರ್ಯಕರ್ತರು ಗುರುವಾರ ಪ್ರತಿಭಟನೆ ನಡೆಸಿದರು.

ಮಹದೇವಪುರ ಗ್ರಾಮದ ಚಿಕ್ಕಮ್ಮ ಚಿಕ್ಕದೇವಿ ದೇವಸ್ಥಾನದ ಬಳಿಗೆ ಆಗಮಿಸಿದ ಅಶೋಕ್, ದೇವಸ್ಥಾನದ ಆರ್‌ಟಿಸಿಯಲ್ಲಿ ವಕ್ಫ್ ಆಸ್ತಿ ಎಂದು ನಮೂದಾಗಿರುವ ಹಿನ್ನೆಲೆಯಲ್ಲಿ ಜೊತೆಗೆ ಚಂದಗಾಲು ಗ್ರಾಮದ ಸರ್ಕಾರಿ ಶಾಲೆಯ ಜಾಗವು ಸಹ ಇದೇ ರೀತಿ ನಮೂದಾಗಿರುವ ಕ್ರಮವನ್ನು ಖಂಡಿಸಿ ಮಹದೇವಪುರದಲ್ಲಿ ಆಯೋಜಿಸಲಾಗಿದ್ದ ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು. ದೇವಸ್ಥಾನದ ಮುಂಭಾಗ ಆಯೋಜಿಸಿದ್ದ ಪ್ರತಿಭಟನೆಯಲ್ಲಿ ಬಿಜೆಪಿ ಕಾರ್ಯಕರ್ತರು ಲ್ಯಾಂಡ್ ಜಿಹಾದ್ ಎಂಬ ಘೋಷಣೆ ಕೂಗಿ ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಚಿಕ್ಕಮ್ಮ ತಾಯಿ ದೇಗುಲದ ಮುಂಭಾಗವೇ ಪ್ರತಿಭಟನೆ ಆಯೋಜಿಸಿದ್ದರಿಂದ ಪ್ರತಿಭಟನೆಗೂ ಮುನ್ನ ದೇವಿಗೆ ಆರ್.ಅಶೋಕ್ ವಿಶೇಷ ಪೂಜೆ ಸಲ್ಲಿಸಿದರು. ಬಳಿಕ ಪ್ರತಿಭಟನೆಯಲ್ಲಿ ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ ಮುಖಂಡರು, ದೇಗುಲದ ಆಸ್ತಿಯನ್ನು ಹೇಗೆ ವಕ್ಫ್ ಆಸ್ತಿ ಎಂದು ಬದಲಾವಣೆ ಮಾಡಿದ್ದೀರಿ ಎಂದು ಅಧಿಕಾರಿಗಳನ್ನು ಪ್ರಶ್ನಿಸಿದರು.

ಇದಾದ ಬಳಿಕ ಚಂದಗಾಲು ಗ್ರಾಮಕ್ಕೆ ಭೇಟಿ ನೀಡಿದ ಅರ್.ಅಶೋಕ್, ಸಂಸದ ಯದುವೀರ್ ಜೊತೆಗೂಡಿ ಶಾಲೆಯ ಆವರಣವನ್ನು ಪರಿಶೀಲನೆ ನಡೆಸಿದರು. ತಮ್ಮೂರಿನ ಶಾಲೆ ಪರಿಶೀಲನಗೆ ಆಗಮಿಸಿದ ಮೈಸೂರು ರಾಜ ವಂಶಸ್ಥ ಯದುವೀರ್ ಅವರಿಗೆ ಜೈಕಾರ ಕೂಗಿದ ಗ್ರಾಮಸ್ಥರು, ಶಾಲೆಯ ಮುಂಭಾಗ ಯದುವೀರ್ ಮತ್ತು ಆರ್.ಅಶೋಕ್‌ಗೆ ಗ್ರಾಮದ ಮಹಿಳೆಯರು ಆರತಿ ಬೆಳಗಿದರು.

ಬಿಜೆಪಿ ನಿಯೋಗ ಭೇಟಿ ಹಿನ್ನೆಲೆಯಲ್ಲಿ ಚಂದಗಾಲು ಗ್ರಾಮದಲ್ಲಿ ಪೊಲೀಸರ ಬಿಗಿ ಭದ್ರತೆ ಮಾಡಲಾಗಿತ್ತು. ಸ್ಥಳದಲ್ಲಿ ಡಿ.ಆರ್. ಪೊಲೀಸ್ ತುಕಡಿ ನಿಯೋಜನೆ ಮಾಡಲಾಗಿತ್ತು.



ವಿಪಕ್ಷ ನಾಯಕ ಆರ್.ಅಶೋಕ್ ನೇತೃತ್ವದಲ್ಲಿ ಬಿಜೆಪಿ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು. ಸಂಸದ ಯದುವೀರ್ ಇದ್ದಾರೆ.

ಶಾಲೆಯ ಆವರಣದಲ್ಲಿ ಸಭೆ ನಡೆಸದಂತೆ ಗ್ರಾಮದ ಕಾಂಗ್ರೆಸ್ ಕಾರ್ಯಕರ್ತರು ಆಗ್ರಹಿಸಿದ್ದರು. ಆದರೆ ಇದಕ್ಕೆ ವಿರೋಧ ವ್ಯಕ್ತಪಡಿಸಿದ ಜೆಡಿಎಸ್ ಹಾಗೂ ಬಿಜೆಪಿ ಕಾರ್ಯಕರ್ತರು, ಅಲ್ಲೇ ಸಭೆ ಮಾಡಲು ನಿರ್ಧರಿಸಿದ್ದರು. ಇದರಿಂದ ಯಾವುದೇ ರೀತಿಯ ಘರ್ಷಣೆ ಯಾಗಬಾರದೆಂದು ಹೆಚ್ಚಿನ ಪೊಲೀಸರನ್ನು ಶಾಲೆ ಬಳಿ ನಿಯೋಜಿಸಲಾಗಿತ್ತು.

ಸರ್ಕಾರದ ವಿರುದ್ಧ ವಾಗ್ದಾಳಿ: ಮಹದೇವಪುರ ಗ್ರಾಮದಲ್ಲಿ ಪ್ರತಿಭಟನಾ ಸಭೆಯನ್ನುದ್ದೇಶಿಸಿ ಮಾತನಾಡಿದ ವಿಪಕ್ಷ ನಾಯಕ ಆರ್. ಅಶೋಕ್, ಚಿಕ್ಕಮ್ಮ ದೇವಾಲಯ ಉಳಿಸಲು ನಾವು ಬಂದಿದ್ದೇವೆ. ಇದು ಬಹಳ ಪುರಾತನವಾದ ದೇವಸ್ಥಾನವಾಗಿದ್ದು, ದೇವಾಲಯ ಜಾಗ ವಕ್ಫ್ ಆಸ್ತಿ ಎಂದು ಬೋರ್ಡ್ ಅರ್ಜಿ ಕೊಟ್ಟಿದೆ. ಇಲ್ಲಿ ಯಾರು ಮುಸ್ಲಿಮರು ಇಲ್ಲ, ಹಾಗಿದ್ದ ಮೇಲೆ ಹೇಗೆ ಈ ಜಾಗ ವಕ್ಫ್ ಆಸ್ತಿ ಆಗುತ್ತದೆ ಹೇಳಿ ಎಂದು ಪ್ರಶ್ನಿಸಿದರು.

ಮನಮೋಹನ್ ಸಿಂಗ್ ಅಧಿಕಾರದಿಂದ ಇಳಿಯುವಾಗ ವಕ್ಫ್ ಪರ ಕಾಯ್ದೆ ತಂದರು. ಯಾವುದಾದರೂ ಆಸ್ತಿಯನ್ನು ವಕ್ಫ್ ಆಸ್ತಿ ಅಂದರೆ ಪಹಣಿಯಲ್ಲಿ ಬಂದು ಬಿಡುತ್ತದೆ. ಈ ರೀತಿಯ ಕಾನೂನು ಮಾಡಿಕೊಟ್ಟದ್ದು ದುರುಳ ಕಾಂಗ್ರೆಸ್ ಪಕ್ಷವಾಗಿದ್ದು, ಅದಕ್ಕೆ ಈಗ ವಕ್ಫ್ ಎಲ್ಲಾ ಜಮೀನು ನನ್ನದೆ ಅಂತ ಹೇಳುತ್ತಿದೆ. ಎಲ್ಲರೂ ನಿಮ್ಮ ಜಮೀನಿನ ಪಹಣಿ ಪರಿಶೀಲಿಸಿಕೊಳ್ಳಿ ಎಂದು ಹೇಳಿದರು.

ಮುಸಲ್ಮಾನರು ನಮ್ಮ ದೇಶಕ್ಕೆ ಯಾವಾಗ ಬಂದರು. ಚೋಳರು, ಚಾಲುಕ್ಯರ ಕಾಲದಲ್ಲಿ ಇದ್ದರು? ನಮ್ಮ ದೇಶಕ್ಕೆ ಬಂದು ದೇವಾಲಯಗಳು ನಮ್ಮದು, ರೈತರ ಜಮೀನುಗಳು ನಮ್ಮದು ಅನ್ನುತ್ತಾರೆ. ನಾವುಗಳು ಪ್ರತಿಭಟಿಸಲಿಲ್ಲ ಅಂದರೆ ಈ ರಾಜ್ಯದಲ್ಲಿ ಬದುಕಲು ಆಗಲ್ಲ. ಬ್ರಿಟಿಷರ ಈಸ್ಟ್ ಇಂಡಿಯಾ ಕಂಪನಿ ರೀತಿಯ ಈದ್ ಇಂಡಿಯಾ ಕಂಪನಿ ಬಂದಿದೆ ಬ್ರಿಟಿಷರ ರೀತಿ ಅವರನ್ನು ಓಡಿಸಬೇಕು ಎಂದರು.

ವಕ್ಫ್ ಕರ್ನಾಟಕವನ್ನು ನಾಶ ಮಾಡಲಿದೆ

ಚಂದಗಾಲು ಗ್ರಾಮದಲ್ಲಿ ಮಾತನಾಡಿದ ವಿಪಕ್ಷ ನಾಯಕ ಅಶೋಕ್, ಚಂದಗಾಲು ಸರ್ಕಾರಿ ಶಾಲೆಗೆ ಭೇಟಿ ನೀಡಿದ್ದೇನೆ. ಸರ್ಕಾರಿ ನಮ್ಮ ಶಾಲೆ ನಮ್ಮ ಹಕ್ಕು, ನಮ್ಮ ದೇವಸ್ಥಾನ ನಮ್ಮ ಹಕ್ಕು ವಕ್ಫ್ ಬೋರ್ಡ್ ಕ್ಯಾನ್ಸರ್ ರೀತಿ ಹಬ್ಬುತ್ತಿದ್ದು, ಕರ್ನಾಟಕವನ್ನು ಸರ್ವನಾಶ ಮಾಡಲು ವಕ್ಫ್ ಬೋರ್ಡ್ ಹೊರಟಿದೆ. ಕ್ಯಾನ್ಸರ್ ಅನ್ನು ಸರ್ಜರಿ ಮಾಡದಿದ್ದರೆ ರಾಜ್ಯದಲ್ಲಿ ಏನೂ ಉಳಿಯಲ್ಲ. ದೊಡ್ಡ ಆಂದೋಲನದ ಮೂಲಕ ಚಳುವಳಿ ಮಾಡಬೇಕು ಎಂದು ಒತ್ತಾಯಿಸಿದರು.

ನೋಟೀಸ್ ರದ್ದು ಮಾಡಿರೋದಾಗಿ ಸಿಎಂ ಹೇಳಿದ್ದಾರೆ. ನಾನು ಇಲ್ಲಿಗೆ ಬರ್ತೀನಿ ಅಂತಾ ಗೊತ್ತಾಗಿ, ಎರಡು ಜಾಗಗಳ ಪಹಣಿ ಬದಲಿಸಿದ್ದಾರೆ. ಇನ್ನು ಮುಂದೆ ಎಲ್ಲೆಡೆ ನಮ್ಮದೇ ಹವಾ ಇರಬೇಕು. ನಾವು ಎಲ್ಲೆಲ್ಲಿ ಹೋಗುತ್ತೇವೋ ಅಲ್ಲೆಲ್ಲಾ ಬದಲಾವಣೆಯಾಗಬೇಕು. ಗಂಟೆ ಸದ್ದು ಹೋಗಿ ಮೈಕ್ ಸೌಂಡ್ ಶುರುವಾಗುತ್ತದೆ ಎಚ್ಚರವಾಗಿರಿ ಎಂದ ಅವರು, ಅತೀ ಹೆಚ್ಚು ಕನ್ನಡ ಮಾತನಾಡುವವರು ಮಂಡ್ಯದವರು. ಹೋರಾಟಕ್ಕೆ ಹೆಸರಾದವರು ಮಂಡ್ಯದವರು. ವಕ್ಫ್ ಬೋರ್ಡ್ ವಿರುದ್ಧ ಯಾಕೆ ಹೋರಾಟ ಮಾಡುತ್ತಿಲ್ಲ ಎಂದು ಪ್ರಶ್ನಿಸಿದರು.

ಮನೆಗೆ ಒಬ್ಬರಂತೆ ಹೋರಾಟಕ್ಕೆ ಬಂದು ಒಗ್ಗಟ್ಟಾಗಬೇಕು. ವಕ್ಫ್ ಬೋರ್ಡ್ ಕ್ಯಾನ್ಸರ್ ಇದ್ದಂತೆ ಜಮೀನಿಂದ ಜಮೀನಿಗೆ ಹಬ್ಬುತ್ತಿದ್ದು, ವಕ್ಫ್ ನಮ್ಮ ರಾಜ್ಯ ನುಂಗುವ ಮೊದಲು ಹೋರಾಟ ಮಾಡಬೇಕು. ವಕ್ಫ್ ಬೋರ್ಡ್ ಕರ್ನಾಟಕದ ರೈತರ ಪಾಲಿನ ಮರಣಶಾಸನವಾಗಿದ್ದು, ನೋಟೀಸ್ ರದ್ದಾದರೆ ಸಾಲಲ್ಲ ವಕ್ಫ್ ಬೋರ್ಡ್ ರದ್ದಾಗಬೇಕು. ಪ್ರಧಾನಮಂತ್ರಿಗಳು ವಕ್ಫ್ ಬೋರ್ಡ್ ವಜಾ ಮಾಡಬೇಕು ಎಂದು ಆಗ್ರಹಿಸಿದರು.

ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಮಾತನಾಡಿ, ವಕ್ಫ್ ಬೋರ್ಡ್ ಕಾಯ್ದೆ ವಿರುದ್ಧ ನಮ್ಮ ಹೋರಾಟ ನಡೆಯುತ್ತಿದ್ದು, ವಿಜಯಪುರ, ಚಿತ್ರದುರ್ಗ, ಎಲ್ಲಾ ಕಡೆ ವಕ್ಫ್ ಪ್ರಕರಣ ಬಂದಿದೆ. ಇದೀಗ ಮಂಡ್ಯದಲ್ಲಿ ಈ ಪ್ರಕರಣ ಬಂದಿದ್ದು, ನಮ್ಮ ಹೋರಾಟ ನಿರಂತರವಾಗಿ ಇರುತ್ತದೆ. ಇದನ್ನ ಬದಲಾವಣೆ ಮಾಡಬೇಕು, ಹಾಗಾಗಿ ನಮ್ಮ ಹೋರಾಟ. ತಿದ್ದುಪಡಿ ಕಾಯ್ದೆ ಸರಿಪಡಿಸುವ ಕೆಲಸ ಆಗಬೇಕು. ಪತ್ರದ ಮೂಲಕ ಎಲ್ಲರೂ ಧ್ವನಿ ಎತ್ತಬೇಕು. ಕಾನೂನಾತ್ಮಕ ಹೋರಾಟವಾಗಬೇಕು ಎಂದು ಹೇಳಿದರು.

ಈ ಸಂದರ್ಭದಲ್ಲಿ ಶಾಸಕ ಮುನಿರಾಜು, ಮಾಜಿ ಸಚಿವ ಕೆ.ಸಿ.ನಾರಾಯಣಗೌಡ, ಬಿಜೆಪಿ ಮುಖಂಡ ಇಂಡುವಾಳು ಸಚ್ಚಿದಾನಂದ, ಎಸ್.ಪಿ.ಸ್ವಾಮಿ, ಬಿಜೆಪಿ ಜಿಲ್ಲಾಧ್ಯಕ್ಷ ಡಾ.ಇಂದ್ರೇಶ್, ತಾಲೂಕು ಘಟಕದ ಅಧ್ಯಕ್ಷ ಪೀಹಳ್ಳಿ ರಮೇಶ್, ಧಾರ್ಮಿಕ ಮುಖಂಡ ಭಾನುಪ್ರಕಾಶ್ ಶರ್ಮಾ ಸೇರಿದಂತೆ ಬಿಜೆಪಿ, ಜೆಡಿಎಸ್‌ನ ನೂರಾರು ಕಾರ್ಯಕರ್ತರು ಭಾಗವಹಿಸಿದ್ದರು.

ನ.15ರಿಂದ ಭಾರತೀನಗರದಲ್ಲಿ 10 ದಿನಗಳ ಕಾಲ ನಾಟಕೋತ್ಸವ

ಭಾರತೀನಗರ,ನ.7– ರಂಗಭೂಮಿ ಚಾರಿಟಬಲ್ ಸೇವಾ ಟ್ರಸ್ಟ್, ಸಿ.ಎ.ಕೆರೆ ಹೋಬಳಿ ರಂಗಭೂಮಿ ಕಲಾವಿದರ ಸಂಘದ ವಾರ್ಷಿಕೋತ್ಸವದ ಅಂಗವಾಗಿ ನ.15ರಿಂದ 24 ರವರೆಗೆ 10 ದಿನಗಳ ಕಾಲ ನಾಟಕೋತ್ಸವವು ಭಾರತೀನಗರದಲ್ಲಿ ನಡೆಯಲಿದೆ ಎಂದು ರಂಗಭೂಮಿ ಕಲಾವಿದರ ಸಂಘದ ಸಿ.ಎ.ಕೆರೆ ಹೋಬಳಿ ಅಧ್ಯಕ್ಷ ತೊರೆಚಾಕನಹಳ್ಳಿ ಶಂಕರೇಗೌಡ ತಿಳಿಸಿದರು.

ಭಾರತೀನಗರದಲ್ಲಿ 10 ದಿನಗಳ ಕಾಲ ನಡೆಯುವ ಸಾಮಾಜಿಕ ಹಾಗೂ ಪೌರಾಣಿಕ ನಾಟಕದ ಪೋಸ್ಟರ್ ಬಿಡುಗಡೆಗೊಳಿಸಿ ಮಾತನಾಡಿದ ಅವರು, ಈ ನಾಟಕೋತ್ಸವದಲ್ಲಿ ರಂಗಭೂಮಿ ಕಲಾವಿದ ತೈಲೂರು ಸಿದ್ದರಾಜು ಅವರಿಗೆ ಬಂಗಾರದ ಕಡಗ ಸಮರ್ಪಣೆ, ಕನ್ನಡ ಹಬ್ಬ ಹಾಗೂ ವಿವಿಧ ಕ್ಷೇತ್ರದಲ್ಲಿ ಸಾಧನೆ ಮಾಡಿದ ಸಾಧಕರಿಗೆ



ಸನ್ಮಾನ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ.

ನ.15ರಂದು ಶ್ರೀ ಕಾಳಿಕಾಂಬ ಕಲಾವಿದರ ಸೇವಾಟ್ರಸ್ಟ್ ವತಿಯಿಂದ 'ಮಹಿಷಾಸುರ ಮರ್ದಿನಿ' ಪೌರಾಣಿಕ ನಾಟಕ, ನ.16ರಂದು ಸಿ.ಎ.ಕೆರೆ ಹೋಬಳಿ ರಂಗಭೂಮಿ ಚಾರಿಟಬಲ್ ಸೇವಾಟ್ರಸ್ಟ್‌ನಿಂದ 'ಶನಿಮಹಾತ್ಮೆ' ಅಥವಾ 'ರಾಜಾವಿಕ್ರಮ' (ಪೌರಾಣಿಕ), ನ.17ರಂದು ರಂಗಭೂಮಿ ಚಾರಿಟಬಲ್ ಸೇವಾಟ್ರಸ್ಟ್ ಹಾಗೂ ಶ್ರೀಚಾಮುಂಡೇಶ್ವರಿ ಕಲಾ ಬಳಗದ ವತಿಯಿಂದ 'ಸಾಮ್ರಾಟ್ ಸುಯೋಧನ' (ಪೌರಾಣಿಕ), ನ.18ರಂದು ಸಿ.ಎ.ಕೆರೆ ಹೋಬಳಿ ರಂಗಭೂಮಿ ಕಲಾವಿದರ ಸಂಘದಿಂದ 'ಭಕ್ತಪ್ರಹ್ಲಾದ' (ಪೌರಾಣಿಕ), ನ.19ರಂದು ಸುಮುಖ ಸೇವಾ ಟ್ರಸ್ಟ್ ಹಾಗೂ ಸಿ.ಎ.ಕೆರೆ ಹೋಬಳಿ ರಂಗಭೂಮಿ ಕಲಾವಿದರ ಸಂಘದಿಂದ 'ದಕ್ಷಯಜ್ಞ' (ಪೌರಾಣಿಕ), ನ.20ರಂದು ರಂಗಭೂಮಿ ಚಾರಿಟಬಲ್ ಸೇವಾಟ್ರಸ್ಟ್‌ನಿಂದ 'ಚಿಗುರಿದ ಕನಸು' ಎಂಬ ಸಾಮಾಜಿಕ ನಾಟಕ, ನ.21ರಂದು ಕನ್ನಡ ಜ್ಯೋತಿ ಯುವಕರ ಸಂಘದ ವತಿಯಿಂದ 'ಬಂಗಾರದ ಗುಡಿ' (ಸಾಮಾಜಿಕ ನಾಟಕ), ನ.22ರಂದು ಸಿ.ಎ.ಕೆರೆ ಹೋಬಳಿ ರಂಗಭೂಮಿ ಕಲಾವಿದ ಸಂಘದಿಂದ 'ಬಾಳಿನದಾರಿ' ಅಥವಾ 'ಸಂಸಾರ ನೌಕೆ', ನ.23ರಂದು ಶ್ರೀಚೌಡೇಶ್ವರಿ ಕೃಪಾ ಪೋಷಿತ ನಾಟಕ ಮಂಡಳಿ ವತಿಯಿಂದ 'ಮಾಂಗಲ್ಯಭಾಗ್ಯ' (ಸಾಮಾಜಿಕ ನಾಟಕ), ನ.24ರಂದು ಸಿ.ಎ.ಕೆರೆ ಹೋಬಳಿ ರಂಗಭೂಮಿ ಕಲಾವಿದರ ಸಂಘದಿಂದ 'ಮಾನವಂತರ ಮನೆ' ಅಥವಾ 'ಮರೆಯದ ಮಾಣಿಕ್ಯ' ಎಂಬ ಸಾಮಾಜಿಕ ನಾಟಕ ನಡೆಯಲಿದೆ.

ಜಿಲ್ಲೆಯಲ್ಲಿ ಲಾಟರಿ ಹಾವಳಿ ಬಗ್ಗೆ ಜನ ಜಾಗೃತಿ ಮೂಡಿಸಿ

ಮಂಡ್ಯ,ನ.7–ಜಿಲ್ಲೆಯಲ್ಲಿ ಲಾಟರಿ ಟಿಕೆಟ್ ಮಾರಾಟದಿಂದ ಜನಸಾಮಾನ್ಯರಲ್ಲಿ ಕೌಟುಂಬಿಕ ಕಲಹಗಳು ಉಂಟಾಗುವುದರ ಜೊತೆಗೆ ಆರ್ಥಿಕ ನಷ್ಟಗಳು ಸಂಭವಿಸುತ್ತಿದೆ. ಲಾಟರಿ ಹಾವಳಿ ತಪ್ಪಿಸಲು ಲಾಟರಿಯಿಂದಾಗುವ ದುಷ್ಪರಿಣಾಮಗಳ ಬಗ್ಗೆ ಜನ ಜಾಗೃತಿ ಮೂಡಿಸಬೇಕು ಎಂದು ಜಿಲ್ಲಾಧಿಕಾರಿ ಡಾ ಕುಮಾರ ತಿಳಿಸಿದರು.

ತಮ್ಮ ಕಚೇರಿಯ ಸಭಾಂಗಣದಲ್ಲಿ ಜಿಲ್ಲೆಯಲ್ಲಿ ಅನಧಿಕೃತ ಲಾಟರಿ ಮಾರಾಟ ಮತ್ತು ಮಟ್ಕಾ ಹಾವಳಿಯನ್ನು ನಿಯಂತ್ರಿಸುವ ಫ್ಲೈಯಿಂಗ್ ಸ್ಕ್ವಾಡ್ ಸಭೆ ನಡೆಸಿ ಮಾತನಾಡಿದರು.

ಬೇರೆ ರಾಜ್ಯಗಳಿಂದ ಅನಧಿಕೃತವಾಗಿ ಲಾಟರಿ ಟಿಕೆಟ್ ತಂದು ಜಿಲ್ಲೆಯಲ್ಲಿ ಮಾರಾಟ ಮಾಡಲಾಗುತ್ತಿದೆ. ಅನಧಿಕೃತ ಲಾಟರಿ ಟಿಕೆಟ್‌ಗೆ ಸಂಬಂಧಿಸಿದಂತೆ ಪ್ರಸ್ತುತ ವರ್ಷದಲ್ಲಿ 4 ಪ್ರಕರಣಗಳು ದಾಖಲಾಗಿವೆ. ಕಿರುಗಾವಲು ವ್ಯಾಪ್ತಿಯಲ್ಲಿ ಹೆಚ್ಚು ದೂರುಗಳು ಕೇಳಿ ಬರುತ್ತಿವೆ ಎಂದರು.



ಲಾಟರಿ ಹಾವಳಿ ಹಾಗೂ ನಕಲಿ ಲಾಟರಿ ಮಾರಾಟ ತಡೆಗಟ್ಟಲು ಲಾಟರಿ ಮಾರಾಟ ಮಾಡುವ ಸ್ಥಳಗಳಲ್ಲಿ ಹೆಚ್ಚೆಚ್ಚು ಅರಿವು ಮೂಡಿಸಬೇಕು. ಗ್ರಾಮ ಪಂಚಾಯಿತಿ, ಸ್ತ್ರೀ ಶಕ್ತಿ ಸಂಘ ಹಾಗೂ ಸ್ವಸಹಾಯ ಸಂಘಗಳ ಮೂಲಕ ಜನ ಜಾಗೃತಿ ಮೂಡಿಸಬೇಕು. ಜೊತೆಗೆ ಶಾಲಾ ಮಕ್ಕಳಿಂದ ಜಾಥಾ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಬೇಕು ಎಂದರು.

ಅನಧಿಕೃತವಾಗಿ ಲಾಟರಿ ಟಿಕೆಟ್ ಮಾರಾಟಗಾರರು ಹಾಗೂ ಲಾಟರಿ ಕೊಳ್ಳುವವರ ಮೇಲೆ ಕಾನೂನು ಕ್ರಮ ಜರುಗಿಸಲಾಗುವುದು ಎಂದು ತಿಳಿಸಿದರು.

ಸಭೆಯಲ್ಲಿ ಅಪರ ಜಿಲ್ಲಾಧಿಕಾರಿ ಡಾ ಹೆಚ್.ಎಲ್.ನಾಗರಾಜು, ಹೆಚ್ಚುವರಿ ಪೊಲೀಸ್ ಅಧೀಕ್ಷಕ ತಿಮ್ಮಯ್ಯ, ಸಣ್ಣ ಉಳಿತಾಯ ಮತ್ತು ರಾಜ್ಯ ಲಾಟರಿ ಸಹಾಯಕ ನಿರ್ದೇಶಕ ಗಿರೀಶ್, ಅಭಿವೃದ್ಧಿ ಅಧಿಕಾರಿ ಶಿವಕುಮಾರ್, ವಾಣಿಜ್ಯ ತೆರಿಗೆ ಇಲಾಖೆಯ ಬಿ.ಎಸ್ ಲೋಕೇಶ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಮೂರನೇ ಪುಟದಿಂದ

50:50 ಅನುಪಾತದ ನಿವೇಶನ ರದ್ದು

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಪತ್ನಿ ಶ್ರೀಮತಿ ಪಾರ್ವತಿ ಅವರು ಪಡೆದಿದ್ದ 14 ನಿವೇಶನವನ್ನು ಮುಡಾಗೆ ಹಿಂದಿರುಗಿಸಿದ್ದರು. ಈ ಹಿನ್ನೆಲೆಯಲ್ಲಿ ಇಂದು ನಡೆದ ಮುಡಾ ಸಾಮಾನ್ಯ ಸಭೆ ಎಲ್ಲರ ಕೇಂದ್ರಬಿಂದುವಾಗಿತ್ತು. ಹಾಗಾಗಿ ಸುಧೀರ್ಘ ಚರ್ಚೆ ಬಳಿಕ ನ್ಯಾ.ದೇಸಾಯಿ ಆಯೋಗದ ವರದಿ ಬಂದ ಬಳಿಕ, ಅದನ್ನು ಪರಿಶೀಲಿಸಿ 50:50 ಅನುಪಾತದ ನಿವೇಶನ ಹಿಂಪಡೆಯುವುದು ಸೂಕ್ತ ಎಂಬ ಅಭಿಪ್ರಾಯ ವ್ಯಕ್ತವಾಯಿತು. ಇದಕ್ಕೆ ಸಭೆಯಲ್ಲಿ ಪಾಲ್ಗೊಂಡಿದ್ದ ಜನಪ್ರತಿನಿದಿಗಳು ಒಕ್ಕೊರಲಿನಿಂದ ಸಮ್ಮತಿ ಸೂಚಿಸಿದರು.

ಸಾಮಾನ್ಯ ಸಭೆಯಲ್ಲಿ ಶಾಸಕ ಟಿ.ಎಸ್. ಶ್ರೀವತ್ಸ ವಿಷಯ ಪ್ರಸ್ತಾಪಿಸಿ, ಮುಡಾದಲ್ಲಿ 50:50 ನಿವೇಶನಗಳ ಹಂಚಿಕೆಯಲ್ಲಿ ವ್ಯಾಪಕ ಅಕ್ರಮ, ಅವ್ಯವಹಾರ ನಡೆದಿದ್ದು ನಿವೇಶನಗಳನ್ನು ಹಿಂಪಡೆಯಬೇಕು. ಈ ವಿಚಾರದಲ್ಲಿ ತೀರ್ಮಾನ ಮಾಡಿ ಸರ್ಕಾರಕ್ಕೆ ನಿರ್ಣಯ ಕಳುಹಿಸಬೇಕು ಎಂದು ಸಲಹೆ ನೀಡಿದರು. ಇದಕ್ಕೆ ದನಿಗೂಡಿಸಿದ ಶಾಸಕ ಕೆ.ಹರೀಶ್‌ಗೌಡ, ಮುಡಾದಲ್ಲಿ ಈಗಾಗಲೇ 50:50 ನಿವೇಶನ ಹಂಚಿಕೆ ಮಾಡಿರುವುದನ್ನು ಮೊದಲು ರದ್ದುಪಡಿಸುವ ತೀರ್ಮಾನ ಮಾಡೋಣ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಪತ್ನಿ ಪಾರ್ವತಿ ಅವರು ನಿವೇಶನಗಳನ್ನು ವಾಪಸ್ ಮಾಡಿದ್ದಾರೆ. ಆದರೆ, ಬೇರೆಯವರು ಹಿಂತಿರುಗಿಸುತ್ತಾರೋ, ಇಲ್ಲವೋ ಎನ್ನುವುದನ್ನು ನಾವು ಕಾದು ಕುಳಿತುಕೊಳ್ಳಬಾರದು. ನಿವೇಶನಗಳ ಹಂಚಿಕೆ ರದ್ದುಪಡಿಸಿ ತಕ್ಷಣವೇ ಜಪ್ತಿ ಮಾಡಬೇಕು ಎಂದು ಒತ್ತಾಯಿಸಿದರು.

ಶಾಸಕ ಜಿ.ಟಿ.ದೇವೇಗೌಡ ಮಾತನಾಡಿ, ಮಾತನಾಡಿ, 50:50 ಅನುಪಾತದಡಿ ನಿವೇಶನ ಹಂಚಿಕೆ ಮಾಡಲು ಸದಸ್ಯರು ಹೇಳುತ್ತಿರುವ ಅಭಿಪ್ರಾಯವನ್ನು ಪರಿಗಣಿಸಿ ತೀರ್ಮಾನ ಕೈಗೊಳ್ಳಬೇಕಾಗಿದೆ. ಯಾರಿಗೆ ಅಕ್ರಮವಾಗಿ ನಿವೇಶನ ಹಂಚಿಕೆ ಮಾಡಲಾಗಿದೆ ಎಂದು ಗುರುತಿಸಿ, ಅವುಗಳನ್ನು ಹಿಂಪಡೆಬೇಕು. ನಂತರ, ಉಳಿದ ಕ್ರಮ ಕೈಗೊಳ್ಳುವುದು ಸೂಕ್ತ ಎಂದು ಅಭಿಪ್ರಾಯಪಟ್ಟರು. ವಿಧಾನ ಪರಿಷತ್ ಸದಸ್ಯ ಅಡಗೂರು ಹೆಚ್.ವಿಶ್ವನಾಥ್ ಮಾತನಾಡಿ, 50:50 ನಿವೇಶನ ಹಂಚಿಕೆ ಪ್ರಕರಣ ಹೊರ ಬಂದ ಮೇಲೆ ಮುಡಾ ಯಾರ ಪರವಾಗಿ ಇದೆ ಎನ್ನುವುದು ಗೊತ್ತಾಗುತ್ತಿದೆ. ಬಡವರ ಪರವಾಗಿ ಒಂದು ನಿವೇಶನ ಹಂಚಿಕೆ ಮಾಡಲು ಸಾಧ್ಯವಾಗಿಲ್ಲ. ಈಗಾಗಲೇ 50:50 ಅನುಪಾತದಡಿ ಹಂಚಿಕೆ ಮಾಡಿರುವುದನ್ನು ರದ್ದುಪಡಿಸಬೇಕು ಎನ್ನುವ ತೀರ್ಮಾನಕ್ಕೆ ನಮ್ಮ ಬೆಂಬಲವಿದೆ ಎಂದರು.

ಈ ಸಂದರ್ಭದಲ್ಲಿ ಆಯುಕ್ತ ರಘುನಂದನ್ ಅವರು ಮುಡಾದಲ್ಲಿ ಆಗಿರುವ ನಿವೇಶನ ಹಂಚಿಕೆಗೆ ಸಂಬಂಧಿಸಿದಂತೆ ತನಿಖಾ ಸಂಸ್ಥೆಗಳು ನಡೆಸುತ್ತಿರುವ ತನಿಖೆಗಳ ಬಗ್ಗೆ ವಿವರಿಸಿದರು. ಅಭಿಪ್ರಾಯ ವ್ಯಕ್ತವಾದ ಬಳಿಕ ಮುಡಾ ಅಧ್ಯಕ್ಷ, ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತ್ ರೆಡ್ಡಿ ಮಾತನಾಡಿ, 50:50 ಅನುಪಾತದಡಿ ನಿವೇಶನಗಳನ್ನು ಹಂಚಿಕೆ ಮಾಡಿರುವುದನ್ನು ರದ್ದುಪಡಿಸಲು ಕೈಗೊಂಡಿರುವ ತೀರ್ಮಾನವನ್ನು ಒಪ್ಪುತ್ತೇವೆ. ಆದರೆ, ಪಿ.ಎನ್.ದೇಸಾಯಿ ನೇತೃತ್ವದ ಏಕಸದಸ್ಯ ವಿಚಾರಣಾ ಆಯೋಗ ವರದಿ ಬಂದ ನಂತರ ಜಪ್ತಿ ಮಾಡುವುದರ ಬಗ್ಗೆ ನಿರ್ಣಯ ಕೈಗೊಂಡು ಅಂಗೀಕರಿಸಿ ಮುಂದಿನ ಪ್ರಕ್ರಿಯೆ ಆರಂಭಿಸುವುದು ಸೂಕ್ತ ಎಂದರು. ಇದಕ್ಕೆ ಸದಸ್ಯರು ಒಪ್ಪಿಗೆ ಸೂಚಿಸಿದರು.

ಮುಡಾದಿಂದ ಕೈಗೊಳ್ಳುವ ನಿರ್ಣಯವನ್ನು ಸರ್ಕಾರಕ್ಕೆ ಕಳುಹಿಸಿ ಒಪ್ಪಿಗೆ ಪಡೆಯಬೇಕು. ಆದರೆ, ವಿಚಾರಣಾ ಆಯೋಗದ ವರದಿ ಬಾರದೆ ನಿರ್ಣಯವನ್ನು ಒಪ್ಪಿ ಆದೇಶ ಮಾಡಲು ಸಾಧ್ಯವಾಗದ ಕಾರಣ ಮುಂದಿನ ಜನವರಿವರೆಗೆ ಕಾದು ತೀರ್ಮಾನಿಸುವುದು ಸೂಕ್ತ ಎಂದರು. ಅಧ್ಯಕ್ಷರ ಮಾತಿಗೆ ದನಿಗೂಡಿಸಿದ ಸದಸ್ಯರು 50:50 ನಿವೇಶನ ಹಂಚಿಕೆ ರದ್ದತಿಯ ವಿಚಾರಕ್ಕೆ ಸರ್ವಾನುಮತದ ಒಪ್ಪಿಗೆ ನೀಡಿದರು. ಸಭೆಯಲ್ಲಿ ಮುಡಾ (ಶಾಸಕರಾದ) ಸದಸ್ಯರಾದ ದರ್ಶನ್ ಧ್ರುವನಾರಾಯಣ, ಎ.ಬಿ. ರಮೇಶ್‌ಬಾಬು ಬಂಡಿಸಿದ್ದೇಗೌಡ, ಸಿ.ಎನ್.ಮಂಜೇಗೌಡ, ಕೆ.ವಿವೇಕಾನಂದ, ನಗರ ಪೊಲೀಸ್ ಆಯುಕ್ತರಾದ ಸೀಮಾ ಲಾಟ್ಕರ್, ನಗರ ಪಾಲಿಕೆ ಆಯುಕ್ತ ಆಶಾದ್ ಉರ್ ರೆಹಮಾನ್ ಷರೀಫ್ ಉಪಸ್ಥಿತರಿದ್ದರು. ಮುಖ್ಯಮಂತ್ರಿ ಸಿದ್ದರಾಮಯ್ಯ, ತನ್ವೀರ್ ಸೇಠ್,ಡಾ.ಡಿ.ತಿಮ್ಮಯ್ಯ, ಮಧು ಜಿ.ಮಾದೇಗೌಡ, ದಿನೇಶ್ ಗೂಳೀಗೌಡ ಗೈರು ಹಾಜರಾಗಿದ್ದರು.

ಇಂತಹ ಸನ್ನಿವೇಶದಲ್ಲಿ ಮಾಂಸಾಹಾರದ ಮೋಜು ಬೇಕಿತ್ತಾ?

ಇದು ಸಾರ್ವಜನಿಕ ವಲಯದಲ್ಲಿ ಉದ್ಭವಿಸಿರುವ ಪ್ರಶ್ನೆ

ಗುರುವಾರ ನಡೆದ ಮುಡಾ ಸಾಮಾನ್ಯ ಸಭೆಯಲ್ಲಿ ಅಧಿಕಾರಿಗಳು, ಜನಪ್ರತಿನಿಧಿಗಳು ಮಾಂಸಾಹಾರ ಸೇವನೆ ಮಾಡಿದ್ದು, ಈ ಬಗ್ಗೆ ಸಾರ್ವಜನಿಕ ವಲಯ ದಲ್ಲಿ ಆಕ್ಷೇಪ ವ್ಯಕ್ತವಾಗಿದೆ. ಮುಡಾ ವಿವಾದಕ್ಕೆ ಸಿಲುಕಿರುವ ಇಂತಹ ಸನ್ನಿವೇಶದಲ್ಲಿ ಮಾಂಸಾ ಹಾರದ ಮೋಜು ಬೇಕಿತ್ತಾ? ಎಂದು ಸಾರ್ವಜನಿಕ ವಲಯದಲ್ಲಿ ಪ್ರಶ್ನೆ ಉದ್ಭವಿಸಿದೆ. ಮುಡಾ ಕಚೇರಿ ಯಲ್ಲಿ ನಡೆದ ಸಭೆ ನಡುವೆಯೇ ಮಾಂಸಾಹಾರಕ್ಕೆ ವ್ಯವಸ್ಥೆ ಮಾಡಲಾಗಿತ್ತು. ಚಿಕನ್, ಮಟನ್, ಫಿಶ್ ಕಬಾಬ್, ಮೊಟ್ಟೆ ಸೇರಿದಂತೆ ತರಾವರಿ ಮಾಂಸದ ಊಟವನ್ನು ಸಭೆಯಲ್ಲಿ ಪಾಲ್ಗೊಂಡಿದ್ದ ಅಧಿಕಾರಿಗಳು ಮತ್ತು ಜನಪ್ರತಿನಿಧಿಗಳು ಸವಿದಿದ್ದಾರೆ. ಸಭೆ ಮುಗಿಸಿ ಹೊರಬಂದ ವಿಧಾನ ಪರಿಷತ್ ಸದಸ್ಯ ಎ.ಹೆಚ್.ವಿಶ್ವನಾಥ್ ಊಟಕ್ಕೆ ಸಂಬಂಧಿಸಿ ದಂತೆ ಮಾಧ್ಯಮದವರಿಗೆ ಪ್ರತಿಕ್ರಿಯಿಸಿ, ಕಾರ್ತಿಕ ಮಾಸವಾದ ಹಿನ್ನೆಲೆಯಲ್ಲಿ ನಾನು ಮಾಂಸಾಹಾರ ಸೇವನೆ ಮಾಡಿಲ್ಲ. ಹೋಳಿಗೆ ಊಟ ಮಾಡಿದ್ದೇನೆ ಎಂದು ತಿಳಿಸಿದರು.

ಜೈಲಿಗೆ ಮೊಬೈಲ್ ಸಾಗಾಟ ಯತ್ನ; ಪ್ರಕರಣ ದಾಖಲು

ಮೈಸೂರು, ನ.7(ಎಸ್‌ಬಿಡಿ)– ಮೈಸೂರು ಕೇಂದ್ರ ಕಾರಾಗೃಹಕ್ಕೆ ಅಗರ್‌ಬತ್ತಿ ಪ್ಯಾಕಿಂಗ್ ಸಾಮಗ್ರಿಗಳನ್ನು ಸಾಗಿಸುತ್ತಿದ್ದ ಚೀಲದಲ್ಲಿ ಮೊಬೈಲ್ ಪತ್ತೆಯಾಗಿದ್ದು, ಈ ಸಂಬಂಧ ಮಂಡಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಬುಧವಾರ ಬೆಳಗ್ಗೆ ಅಗರ್‌ಬತ್ತಿ ಹಾಗೂ ಪ್ಯಾಕಿಂಗ್ ಸಾಮಗ್ರಿಗಳನ್ನು ಕಾರಾಗೃಹಕ್ಕೆ ಸಾಗಿಸುತ್ತಿದ್ದ ವಾಹನವನ್ನು ಕೆಎಸ್‌ಐಎಸ್‌ಎಫ್ ಸಿಬ್ಬಂದಿ ತಪಾಸಣೆಗೆ ಒಳಪಡಿಸಿದ್ದರು. ಈ ವೇಳೆ ದೂಪದ ಭತ್ತಿ ಪ್ಯಾಕಿಂಗ್ ಕವರ್‌ಗಳನ್ನು ತುಂಬಿದ್ದ ಚೀಲವನ್ನು ಎಕ್ಸ್–ರೇ ಬ್ಯಾಗೇಜ್ ಸ್ಕ್ಯಾನರ್‌ನಲ್ಲಿ ತಪಾಸಣೆ ನಡೆಸಿದಾಗ ಅನುಮಾನಾಸ್ಪದ ವಸ್ತು ಇರುವ ಸೂಚನೆ ಬಂದಿದೆ. ಕೂಡಲೇ ಸಿಬ್ಬಂದಿ ಆ ಚೀಲವನ್ನು ಪರಿಶೀಲಿಸಿದಾಗ ಅದರಲ್ಲಿ ಕಪ್ಪು ಬಣ್ಣದ ಮೊಬೈಲ್ ಪತ್ತೆಯಾಗಿದೆ. ಆದರೆ ಅದರಲ್ಲಿ ಯಾವುದೇ ಸಿಮ್ ಇರಲಿಲ್ಲ ಎಂದು ತಿಳಿದುಬಂದಿದೆ. ಈ ಸಂಬಂಧ ಕಾರಾಗೃಹ ಅಧಿಕಾರಿಗಳು ನೀಡಿದ ದೂರಿನನ್ವಯ ಮಂಡಿ ಠಾಣೆ ಪೊಲೀಸರು ಆ ವಾಹನ ಚಾಲಕನ ವಿರುದ್ಧ ಪ್ರಕರಣ ದಾಖಲಿಸಿಕೊಂಡು, ಮುಂದಿನ ಕ್ರಮ ಕೈಗೊಂಡಿದ್ದಾರೆ.

ಒಳಮೀಸಲಾತಿ ಜಾರಿ ಕುರಿತು ವಿಚಾರ ಸಂಕಿರಣ

ಮೈಸೂರು, ನ.7(ಎಂಕೆ)– ಮೈಸೂರು ವಿವಿ ಮಾನಸಗಂಗೋತ್ರಿಯ ರಾಣಿಬಹದ್ದೂರ್ ಸಭಾಂಗಣದಲ್ಲಿ ನ.10ರ ಬೆಳಗ್ಗೆ 11 ಗಂಟೆಗೆ ಕರ್ನಾಟಕ ಸಂವಿಧಾನ ಸಂರಕ್ಷಣಾ ಹೋರಾಟ ಸಮಿತಿ ಹಾಗೂ ಮೈಸೂರು ವಿವಿ ಸಂಶೋಧಕರ ಸಂಘದ ವತಿಯಿಂದ 'ವೈಜ್ಞಾನಿಕವಾಗಿ ಒಳಮೀಸಲಾತಿ ಜಾರಿ' ಕುರಿತು ವಿಚಾರ ಸಂಕಿರಣವನ್ನು ಆಯೋಜಿಸಲಾಗಿದೆ. ಮೈಸೂರು ಗಾಂಧಿನಗರದ ಉರಿಲಿಂಗಪೆದ್ದಿ ಮಠದ ಜ್ಞಾನಪ್ರಕಾಶ್ ಸ್ವಾಮೀಜಿ ದಿವ್ಯಸಾನಿಧ್ಯ ವಹಿಸಲಿದ್ದು, ಕರ್ನಾಟಕ ರಾಜ್ಯ ಸರ್ಕಾರಿ ಎಸ್‌ಸಿ, ಎಸ್‌ಟಿ ನೌಕರರ ಸಂಘದ ಅಧ್ಯಕ್ಷ ಡಿ.ಚಂದ್ರಶೇಖರಯ್ಯ ಉದ್ಘಾಟಿಸಲಿದ್ದಾರೆ. ಕರ್ನಾಟಕ ಲೋಕಸೇವಾ ಆಯೋಗದ ಮಾಜಿ ಸದಸ್ಯ ದಾಸಯ್ಯ ವಿಚಾರ ಸಂಕಿರಣದ ಅಧ್ಯಕ್ಷತೆ ವಹಿಸಲಿದ್ದು, ನಿವೃತ್ತ ಐಎಫ್‌ಎಸ್ ಅಧಿಕಾರಿ ಡಾ.ಆರ್.ರಾಜು, ಹವ್ಯಾಸಿ ಬರಹಗಾರ ಸಿ.ಹರಕುಮಾರ್ ಮುಖ್ಯಭಾಷಣ ಮಾಡಲಿದ್ದಾರೆ.

ಶೀಘ್ರದಲ್ಲೇ ಸಿಬಿಐ ಪ್ರವೇಶಿಸುವ ಸಾಧ್ಯತೆ

ಕ್ರಮ ಆಗಲಿದೆ. ಈಗಾಗಲೇ ಹೈಕೋರ್ಟ್ ನೀಡಿರುವ ಆದೇಶ ಚೆನ್ನಾಗಿದೆ. ನ್ಯಾಯಮೂರ್ತಿ ನಾಗಪ್ರಸನ್ನ ನೀಡಿರುವ ಆದೇಶ ಪ್ರಾಸಿಕ್ಯೂಷನ್ ಆದೇಶಕ್ಕೆ ಸರಿಸಮಾನವಾಗಿದೆ. ಮುಡಾಗೆ ನ್ಯಾಯ ಸಿಗುತ್ತೆ ಎಂಬ ಆಶಯವಿದೆ. ಮುಡಾದಲ್ಲಿ ನಟೇಶ್ ಆಯುಕ್ತರಾಗಿದ್ದ ಕಾಲದಿಂದ ಜಿ.ಟಿ.ದಿನೇಶ್ ಆಯುಕ್ತರಾಗಿದ್ದ ಅವಧಿವರೆಗೂ ಭಾರಿ ಪ್ರಮಾಣದ ಭ್ರಷ್ಟಾಚಾರ ನಡೆದಿದೆ. ಸಾವಿರಾರು ಕೋಟಿ ರೂ. ಹಗರಣವಾಗಿದೆ. ಈ ಹಿನ್ನೆಲೆಯಲ್ಲಿ ಸಮಗ್ರ ತನಿಖೆ ಆಗಬೇಕು. ಈ ಇಬ್ಬರ ಅವಧಿಯಲ್ಲಿ ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ಮುಡಾ ಯಾರ ಪರ ಇದೆ: ಸೂರಿಲ್ಲದವರಿಗಾಗಿ ನಿವೇಶನ ಕಲ್ಪಿಸಬೇಕಾದ ಮುಡಾ ಯಾರ ಪರವಾಗಿದೆ ಎಂಬ ಅನುಮಾನ ಮೂಡುತ್ತಿದೆ. **ಮುಖ್ಯಮಂತ್ರಿಗಳು ನಡೆಸಿದ ಪ್ರಗತಿ ಪರಿಶೀಲನಾ ಸಭೆಯಲ್ಲಿ ಈ ಸಂಬಂಧ ನಾನು ಪ್ರಶ್ನೆ ಮಾಡಿದ್ದೇನೆ. ಮುಡಾ ಡೆವಲಪರ್ಸ್ ಪರವೋ, ರಿಯಲ್ ಎಸ್ಟೇಟ್ ಪರವಾಗಿದೆಯೋ ಎಂದು ಕೇಳಿದ್ದೇನೆ. ಕಳೆದ 25 ವರ್ಷದಿಂದ ಒಂದು ಸೈಟ್ ಕೊಡಲು ಆಗಿಲ್ಲ. 80 ಸಾವಿರ ಜನರು ಹಣ ಕಟ್ಟಿ ನಿವೇಶನಕ್ಕೆ ಕಾಯುತ್ತಿದ್ದಾರೆ. ಅವರ ಕಷ್ಟ ಕೇಳುವವರು ಯಾರು ಎಂದು ಪ್ರಶ್ನಿಸಿದರು.**

ಜನರ ನಿರೀಕ್ಷೆ ಹುಸಿಯಾಗಿದೆ

ನಮಗೆ ವೇದನೆ: ಮುಖ್ಯಮಂತ್ರಿಗಳು ಮೈಸೂರಲ್ಲಿ ಲೋಕಾಯುಕ್ತರ ಮುಂದೆ ವಿಚಾರಣೆಗೆ ಹಾಜರಾಗಿದ್ದು ನಮ್ಮೆಲ್ಲರಿಗೂ ವೇದನೆ ತಂದಿದೆ. ನಾನು, ಸಿದ್ದರಾಮಯ್ಯ ಮೈಸೂರಲ್ಲಿ ಜನಪ್ರತಿನಿಧಿಗಳಾಗಿ ಆಯ್ಕೆಯಾದವರು. ಮೈಸೂರಲ್ಲಿ ವಿಚಾರಣೆ ಎದುರಿಸಿದ್ದು ನೋವಿನ ಸಂಗತಿ. ಯಾಕೆಂದರೆ

ಇಂದು ನಡೆದ ಸಭೆ ಉತ್ತಮವಾಗಿತ್ತು: ಮುಡಾ ಅಧ್ಯಕ್ಷರೂ ಆದ ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತರೆಡ್ಡಿ ಇಂದು ನಡೆಸಿದ ಮುಡಾ ಸಭೆ ಅತ್ಯುತ್ತಮವಾಗಿತ್ತು. ಎಲ್ಲಾ ಮಾಹಿತಿಯನ್ನು ತೆಗೆದುಕೊಂಡು ಸಭೆ ನಡೆಸಿದ್ದರಿಂದ ಕೊನೆವರೆಗೂ ಪಾಲ್ಗೊಂಡಿದ್ದೆವು. ಮುಂದೆ ಏನೇನು ಆಗಬೇಕು ಎಂದು ಚರ್ಚೆ ಮಾಡಿದ್ದೇವೆ. 50:50 ಅನುಪಾತದ ನಿವೇಶನ ಇರಬಹುದು, **ರಾಮಕೃಷ್ಣನಗರದ ಪರಮಹಂಸ ವೃತ್ತದ ಸಮೀಪದ 27 ಎಕರೆ ಭೂಮಿ ಏನಾಯಿತು ಎನ್ನುವುದು ಸೇರಿದಂತೆ ಮುಡಾ ವಿಚಾರದಲ್ಲಿ ಹಲವು ವಿಷಯ ಚರ್ಚೆಯಾಗಿದೆ.** ಸಭೆಯಲ್ಲಿ ಎಲ್ಲಾ ಅಧಿಕಾರಿಗಳು ಕೊನೆವರೆಗೂ ಇದ್ದರು. ಒಟ್ಟಾರೆ ಉತ್ತಮ ಸಭೆಯಾಗಿ ಹೊರ ಹೊಮ್ಮಿತು ಎಂದು ತಿಳಿಸಿದರು.

ವ್ಯವಸ್ಥೆಯನ್ನೇ ಹಾಳು ಮಾಡಿದ ಪೊಲೀಸರು: ಲೋಕಾಯುಕ್ತ ವಿಚಾರಣೆಗೆ ಹಾಜರಾಗಲು ಬಂದ ವೇಳೆ ಆಪಾದಿತ ಮುಖ್ಯಮಂತ್ರಿಗೆ ಗಾರ್ಡ್ ಆಫ್ ಹಾನರ್ ನೀಡುವ ಮೂಲಕ ಪೊಲೀಸರು ವ್ಯವಸ್ಥೆಯನ್ನೇ ಹಾಳು ಮಾಡಿದ್ದಾರೆ. ಗಾಡ್ ಆಫ್ ಹಾನರ್ ಕೊಟ್ಟ ಪೊಲೀಸರಿಗೆ ಏನು ಅನ್ನಬೇಕು. ಶಿಷ್ಟಾಚಾರ ಉಲ್ಲಂಘನೆಯಾಗಿದೆ ಎಂದು ಕಿಡಿಕಾರಿದರು.

50:50 ಅನುಪಾತದ 3600ಕ್ಕೂ ಹೆಚ್ಚು ನಿವೇಶನ ಹಿಂಪಡೆಯಲು ಆಗ್ರಹಿಸಿದ್ದೇನೆ

ಮುಡಾ ಸಾಮಾನ್ಯ ಸಭೆ ನಂತರ ಶಾಸಕ ಕೆ.ಹರೀಶ್‌ಗೌಡ ಹೇಳಿಕೆ

ಮೈಸೂರು, ನ.7(ಎಂಟಿವೈ)– ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ)ದಲ್ಲಿ 2020ರಿಂದ ಇದುವರೆಗೂ 50:50 ಅನುಪಾತದಲ್ಲಿ 3600ಕ್ಕೂ ಹೆಚ್ಚು ನಿವೇಶನ ಹಂಚಿಕೆಯಾಗಿದ್ದು, ಎಲ್ಲವನ್ನೂ ಹಿಂಪಡೆಯುವಂತೆ ಸಭೆಯಲ್ಲಿ ಆಗ್ರಹಿಸಿದ್ದೇನೆ ಎಂದು ಶಾಸಕ ಕೆ.ಹರೀಶ್‌ಗೌಡ ತಿಳಿಸಿದ್ದಾರೆ.

ಮುಡಾ ಸಾಮಾನ್ಯ ಸಭೆ ಬಳಿಕ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಮುಡಾದಲ್ಲಿ 2020ರಿಂದ 24ರವರೆಗೆ 50:50 ಅನುಪಾತದಲ್ಲಿ 3600ಕ್ಕೂ ಹೆಚ್ಚು ನಿವೇಶನ ಹಂಚಿಕೆ ಮಾಡಲಾಗಿದೆ. ಅಕ್ರಮವಾಗಿ ನೀಡಿರುವ ನಿವೇಶನಗಳನ್ನು ಮುಟ್ಟುಗೋಲು ಹಾಕಿಕೊಳ್ಳುವಂತೆ ನಾನು ಈ ಹಿಂದೆಯೂ ಒತ್ತಾಯಿಸಿದ್ದೇನೆ. ಮುಡಾದಲ್ಲಿ ನ್ಯಾಯಯುತ ಹಾಗೂ ನಿಯಮಾನುಸಾರ 14 ನಿವೇಶನ ಪಡೆದ ಹಿನ್ನೆಲೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ವಿರುದ್ಧ ವಿನಾಕಾರಣ ಆರೋಪ ಮಾಡಲಾಗುತ್ತಿದೆ. ಯಾವುದೇ ತಪ್ಪು ಮಾಡದೇ ಇದ್ದರೂ, ಸಿಎಂ ಪತ್ನಿ ಪಾರ್ವತಿ ಅವರು 14 ನಿವೇಶನಗಳನ್ನು ಹಿಂದಿರುಗಿಸಿದ್ದಾರೆ. ಅವರಂತೆ 50:50 ಅನುಪಾತದಲ್ಲಿ ನಿವೇಶನ ಪಡೆದಿರುವ ಎಲ್ಲರೂ ಮುಡಾಗೆ




ಶಾಸಕ ಕೆ.ಹರೀಶ್‌ಗೌಡ, ಮುಡಾ ಸಾಮಾನ್ಯ ಸಭೆ ಬಳಿಕ ಪತ್ರಕರ್ತರೊಂದಿಗೆ ಮಾತನಾಡಿದರು.


ನಿವೇಶನ ಹಿಂದಿರುಗಿಸಬೇಕು. ಇಲ್ಲದಿದ್ದರೆ ಮುಡಾ ಆ ನಿವೇಶನಗಳನ್ನು ವಶಕ್ಕೆ ಪಡೆಬೆಕು. ಇಂದು ನಡೆದ ಸಭೆಯಲ್ಲೂ ಈ ವಿಚಾರ ಪ್ರಸ್ತಾಪಿಸಿದ್ದೇನೆ. ಮುಡಾದಿಂದ 50:50 ಅನುಪಾತದಡಿ ನೀಡಿರುವ ನಿವೇಶನಗಳ ಜಪ್ತಿಗೆ ಎಲ್ಲಾ ಸದಸ್ಯರು ಒಪ್ಪಿದ್ದಾರೆ. ನ್ಯಾಯಮೂರ್ತಿ ಪಿ.ಎನ್.ದೇಸಾಯಿ ಆಯೋಗದ ವರದಿಗಾಗಿ ಕಾಯುತ್ತಿದ್ದೇವೆ. ಆ ವರದಿ ಬಂದ ನಂತರ ನಿವೇಶನ ಹಿಂಪಡೆಯುವ ಸಂಬಂಧ ಕ್ರಮ ತೆಗೆದುಕೊಳ್ಳುವುದಾಗಿ ಅಧ್ಯಕ್ಷರು ಹೇಳಿದ್ದಾರೆ. ಮುಡಾ ಸ್ವಚ್ಛವಾಗಬೇಕೆಂಬುದು ನಮ್ಮೆಲ್ಲರ ಅಭಿಪ್ರಾಯವಾಗಿದೆ ಎಂದು ಹೇಳಿದರು.

ಕೆಲವೊಂದು ಪ್ರಕರಣದಲ್ಲಿ ಪರಿಹಾರದ ರೂಪದಲ್ಲಿ ಹಣ ಪಡೆದಿದ್ದರೂ, 50:50 ಅನುಪಾತದಡಿ ನಿವೇಶನ ನೀಡಿದ್ದಾರೆ. ಇದಕ್ಕೆ ಸಂಬಂಧಿಸಿದ ಎಲ್ಲಾ ದಾಖಲೆಗಳನ್ನು ಇಟ್ಟುಕೊಂಡು ಸಭೆಯಲ್ಲಿ ನಾನು ಮಾತನಾಡಿದ್ದೇನೆ. ಕಳೆದ ಬಾರಿ ನಡೆದ ಸಭೆಯಲ್ಲೂ ಈ ಬಗ್ಗೆ ಚರ್ಚೆ ಮಾಡಲಾಗಿತ್ತು. ಆದರೆ, ಅದರ ದಾಖಲೀಕರಣ ಆಗಿರಲಿಲ್ಲ. ಹೀಗಾಗಿ ಅದರ ದಾಖಲೀಕರಣ ಮಾಡದ ಅಧಿಕಾರಿಗಳ ಮೇಲೆ ಎಫ್‌ಐಆರ್ ದಾಖಲು ಮಾಡಿ ಸರ್ಕಾರಕ್ಕೆ ಶಿಸ್ತು ಕ್ರಮಕ್ಕೆ ಪತ್ರ ಬರೆಯಲು ನಿರ್ಧರಿಸಲಾಗಿದೆ ಎಂದರು.

ಮುಡಾದಲ್ಲಿ ನಾನು 50:50ರ ಅನುಪಾತ ಅಥವಾ ಪರಿಹಾರದ ರೂಪದಲ್ಲಿ ಒಂದು ಇಂಚು ಅಳತೆಯ ನಿವೇಶನ ಪಡೆದಿರುವುದನ್ನು ಸಾಬೀತು ಮಾಡಿದರೆ, ರಾಜಕೀಯದಿಂದ ನಿವೃತ್ತಿಯಾಗುತ್ತೇನೆ. ನಾನು ರೈತ, ಜಮೀನ್ದಾರನ ಮಗ. ಹಾಗಾಗಿ ರೈತರ ಕಷ್ಟದ ಬಗ್ಗೆ ನನಗೆ ಅರಿವಿದೆ. ಆ ಕಾರಣದಿಂದ 50:50 ಅನುಪಾತದಲ್ಲಿ ನಿವೇಶನ ಪಡೆದಿರುವುದರಲ್ಲಿ ಅಕ್ರಮ ನಡೆದಿದ್ದು, ಅದನ್ನು ಮುಟ್ಟುಗೋಲು ಹಾಕಿಕೊಳ್ಳುವುದು ಸೂಕ್ತ ಎಂದರು.



> ಮುಡಾದಲ್ಲಿ 50:50 ಅನುಪಾತದಲ್ಲಿ ಹಂಚಿಕೆಯಾಗಿರುವ ನಿವೇಶನ ಹಂಚಿಕೆ ಪ್ರಕರಣಕ್ಕೆ ಸಂಬಂಧಿಸಿದಂತೆ ಈಗಾಗಲೇ ಲೋಕಾಯುಕ್ತ, ಇಡಿ, ನ್ಯಾ.ಪಿ.ಎನ್.ದೇಸಾಯಿ ಆಯೋಗ ತನಿಖೆ ಮಾಡುತ್ತಿವೆ. ಇಂದು ನಡೆದ ಸಭೆಯಲ್ಲಿ 50:50 ಅನುಪಾತ ವಾಪಾಸ್ ಪಡೆಯಬೇಕು ಎಂಬ ಅಭಿಪ್ರಾಯ ವ್ಯಕ್ತವಾಗಿದೆ. ಅಕ್ರಮವಾಗಿ ಹಂಚಿಕೆಯಾಗಿರುವ ನಿವೇಶನವನ್ನು ರದ್ದು ಮಾಡಬೇಕು. ಕಾನೂನುನಾತ್ಮಕವಾಗಿ ಇರುವವರಿಗೆ ನೀಡಬೇಕು ಎಂಬುದು ನಮ್ಮ ಅಭಿಪ್ರಾಯವಾಗಿದೆ. ಮೊದಲು ನ್ಯಾಯಮೂರ್ತಿ ದೇಸಾಯಿ ಅವರ **ತನಿಖಾ ಆಯೋಗದ ವರದಿ ಬರಲಿ**. ಆ ನಂತರ ಮುಂದಿನ ನಿರ್ಧಾರ ಕೈಗೊಳ್ಳಲು ಒಮ್ಮತದ ನಿರ್ಧಾರಕ್ಕೆ ಬಂದಿದ್ದೇವೆ. **–ಜಿ.ಟಿ.ದೇವೇಗೌಡ, ಶಾಸಕರು.**



> ಮುಡಾದಲ್ಲಿ 50:50 ಅನುಪಾತದ ಸೈಟ್ ಹಂಚಿಕೆಯಾಗಿರುವುದನ್ನು ರದ್ದು ಮಾಡುವಂತೆ ಈಗಾಗಲೇ ಹಲವು ಬಾರಿ ಒತ್ತಾಯಿಸಿದ್ದೇನೆ. ಈ ಸಂಬಂಧ ನ್ಯಾ.ಪಿ.ಎನ್.ದೇಸಾಯಿ ಆಯೋಗ ತನಿಖೆ ಮಾಡುತ್ತಿದೆ. ಅವರು ಏನು ವರದಿ ಕೊಡುತ್ತಾರೆ ಎಂದು ಕಾದು ನೋಡಬೇಕಾಗಿದೆ ಏನು ತೀರ್ಮಾನ ಮಾಡುತ್ತಾರೆ ನೋಡೋಣ ಎಂದು ಅಧ್ಯಕ್ಷರು ಹೇಳಿದ್ದಾರೆ. ಮಾಧ್ಯಮದವರನ್ನು ಹೊರಗಿಟ್ಟು ಮುಡಾ ಸಭೆ ನಡೆಸಲಾಗುತ್ತಿದೆ. ಮುಂದಿನ ಸಭೆಗಳಲ್ಲಿ ಮಾಧ್ಯಮದವರಿಗೆ ಪ್ರವೇಶ ನೀಡಬೇಕೆಂದು ಎಂದು ಮನವಿ ಮಾಡಿದ್ದೇನೆ. ಮಾಧ್ಯಮದವರು ಇದ್ದರೆ ಅಕ್ರಮ ನಡೆಸುವುದಕ್ಕೆ ಸಾಧ್ಯವಿರುವುದಿಲ್ಲ. ಭಯ ಇರುತ್ತದೆ ಎನ್ನುವ ಕಾರಣಕ್ಕೆ ಮನವಿ ಮಾಡಿದ್ದೇನೆ. ಶೀಘ್ರದಲ್ಲೇ ಬೆಂಗಳೂರಲ್ಲಿ ಹಿರಿಯ ಅಧಿಕಾರಿಗಳನ್ನು ಭೇಟಿ ಮಾಡಿ ಹಗರಣಗಳ ಬಗ್ಗೆ ಚರ್ಚೆ ನಡೆಸುತ್ತೇನೆ. **– ಟಿ.ಎಸ್.ಶ್ರೀವತ್ಸ, ಶಾಸಕರು.**



> ಮುಡಾ ಸಭೆಯಲ್ಲಿ ಸಾರ್ವಜನಿಕರಿಗೆ ಅನುಕೂಲವಾಗುವಂತಹ ಹಲವಾರು ವಿಷಯಗಳ ಬಗ್ಗೆ **ಚರ್ಚಿಸಿ ತೀರ್ಮಾನ ಮಾಡಿದ್ದೇವೆ**. ಸಾಮಾನ್ಯ ಸಭೆ ನಡೆಯದೆ ತೊಂದರೆ ಆಗಿದ್ದರಿಂದ ಸಭೆ ನಡೆಸಿ ಕೆಲವು ನಿರ್ಧಾರ ಮಾಡಿದ್ದೇವೆ. 50:50 ಅನುಪಾತಕ್ಕೆ ಸಂಬಂಧಿಸಿದಂತೆ ಚರ್ಚೆ ನಡೆಸಿದ್ದೇವೆ. ಪಿ.ಎನ್.ದೇಸಾಯಿ ವರದಿ ಬಂದ ಮೇಲೆ ಮುಂದಿನ ಪ್ರಕ್ರಿಯೆ ಆರಂಭಿಸುತ್ತೇವೆ. **–ರಘುನಂದನ್, ಮುಡಾ ಆಯುಕ್ತರು.**

ಮೂರನೇ ಪುಟದಿಂದ

ಬೋರ್ಡ್ ಆಸ್ತಿಯಾಗಿ ಬದಲಿಸಲು ಹೇಗೆ ಸಾಧ್ಯ?

ಎಂದು ತಿಳಿಸುತ್ತಿದ್ದು, ಟ್ರಿಬ್ಯೂನಲ್ ನಿರ್ಧಾರದ ಬಳಿಕ ಸಂತ್ರಸ್ತರು ಅಸಿ ಕೆಡುತ್ತಿದ್ದಾರೆ. ಇದೊಂದು ಗಂಭೀರ ಸಮಸ್ಯೆ, ರೈತರು ಸಂಕಷ್ಟಕ್ಕೆ ಸಿಲುಕುತ್ತಾರೆ. ಈ ಸಂಬಂಧ ದೇಶದ ವಿವಿಧ ಕಡೆಗಳಿಗೆ ಸಮಿತಿ ಭೇಟಿ ಕೊಟ್ಟಿದೆ. ಬಿಜೆಪಿಯ ಪಕ್ಷ ಅಲ್ಲದೆ, ರೈತರು, ಜನಸಾಮಾನ್ಯರು, ಮಹಿಳೆಯರು, ಮುಸ್ಲಿಂ ಸಮುದಾಯದವರೂ ಸೇರಿದಂತೆ ಎಲ್ಲರೂ ಮನವಿ ಸಲ್ಲಿಸಿದ್ದಾರೆ, ಸಂತ್ರಸ್ತರನ್ನು ಭೇಟಿ ಮಾಡುತ್ತಿದ್ದೇವೆ. ಸಮಗ್ರ ಮಾಹಿತಿ ಪಡೆಯಲು ಮತ್ತು ವಿವರ ತಿಳಿಯಲು ಎಲ್ಲರನ್ನೂ ಭೇಟಿ ಮಾಡುತ್ತಿದ್ದೇವೆ, ಕಳೆದೊಂದು ತಿಂಗಳಿನಲ್ಲಿ ಕರ್ನಾಟಕದಲ್ಲಿ ಈ ಗಂಭೀರ ಸಮಸ್ಯೆ ಉದ್ಭವಿಸಿದೆ, ವರದಿಯಲ್ಲಿ ಇದೆಲ್ಲ ವಿವರಗಳನ್ನು ಸೇರಿಸುತ್ತೇವೆ ಎಂದರು.

ವಕ್ಫ್ (ತಿದ್ದುಪಡಿ) ವಿಧೇಯಕ ಕುರಿತ ಜಂಟಿ ಸಂಸದೀಯ ಸಮಿತಿ (ಜೆಪಿಸಿ)ಯನ್ನು ಲೋಕಸಭಾ ಸ್ಪೀಕರ್ ರಚಿಸಿದ್ದಾರೆ, ಬಿಜೆಪಿ ಮಾತ್ರವಲ್ಲದೆ, ಸಮಾಜವಾದಿ ಪಕ್ಷ, ಡಿಎಂಕೆ, ಕಾಂಗ್ರೆಸ್, ಎಐಎಂಐಎಂ ಸೇರಿದಂತೆ ವಿವಿಧ ಪಕ್ಷಗಳ ಸದಸ್ಯರು ಇದರಲ್ಲಿದ್ದಾರೆ. ನಾಳೆ ಭುವನೇಶ್ವರ, ಕೊಲ್ಕತಾ ಸೇರಿದಂತೆ ದೇಶದ ಅನೇಕ ಪ್ರದೇಶಗಳಿಗೆ ಭೇಟಿ ಕೊಡಲಿದ್ದೇವೆ, ಸರ್ಕಾರಕ್ಕೆ ಸಮಿತಿ ತನ್ನ ವರದಿ ಸಲ್ಲಿಸಲಿದೆ ಎಂದರು.

ಸುಪ್ರೀಂಕೋರ್ಟ್ ಮೆಟ್ಟಿಲೇರಿದ್ದ ಡಿ.ರೂಪಾಗೆ ಹಿನ್ನಡೆ

ಅರ್ಜಿ ವಾಪಸ್ ಪಡೆಯದಿದ್ದರೆ ವಜಾ ಮಾಡುವುದಾಗಿ ಸುಪ್ರೀಂ ಕೋರ್ಟ್ ಎಚ್ಚರಿಕೆ ನೀಡಿದ ಬಳಿಕ ಅವರು ಅರ್ಜಿ ವಾಪಸ್ ಪಡೆದಿದ್ದಾರೆ. ರೋಹಿಣಿ ಸಿಂಧೂರಿ ಸಲ್ಲಿಸಿದ್ದ ಅರ್ಜಿ ವಜಾ ಮಾಡಲು ಹೈಕೋರ್ಟ್ ನಿರಾಕರಿಸಿದ ಹಿನ್ನೆಲೆ ಹೈಕೋರ್ಟ್ ಆದೇಶ ಪ್ರಶ್ನಿಸಿ ಸುಪ್ರೀಂಕೋರ್ಟ್‌ಗೆ ಡಿ.ರೂಪಾ ಅರ್ಜಿ ಸಲ್ಲಿಸಿದ್ದರು. ಅರ್ಜಿಯನ್ನು ನ್ಯಾ. ಎ.ಎಸ್.ಓಕಾ ನೇತೃತ್ವದ ದ್ವಿ ಸದಸ್ಯ ಪೀಠ ವಿಚಾರಣೆ ನಡೆಸಿತು. ಈ ವೇಳೆ ಮಧ್ಯ ಪ್ರವೇಶ ಮಾಡಿದ ನ್ಯಾಯಮೂರ್ತಿಗಳು ಇಬ್ಬರೂ ಕೋರ್ಟ್‌ನಲ್ಲಿದ್ದೀರಿ. ಪರಸ್ಪರ ಮಾತನಾಡಿಕೊಳ್ಳಬಹುದೇ ಅಥವಾ ಹಿರಿಯ ವಕೀಲರು ಅಥವಾ ನಿವೃತ್ತ ನ್ಯಾಯಾಧೀಶರ ಸಮ್ಮುಖದಲ್ಲಿ ಪರಸ್ಪರ ರಾಜೀ ಸಂಧಾನ ಮಾಡಬಹುದೇ ಎಂದು ಪ್ರಸ್ತಾಪ ಮಾಡಿದರು. ಕೆಲಕಾಲ ಮಾತುಕತೆಗೂ ಅವಕಾಶ ನೀಡಿ ವಿಚಾರಣೆ ಮುಂದೂಡಿದರು. ಕೆಲ ಹೊತ್ತಿನ ಬಳಿಕ ರೂಪಾ ಮಾತುಕತೆ ವಿಫಲವಾಯಿತು ಎಂದರು. ಇದಕ್ಕೆ ಕಾರಣ ಏನು ಎಂದು ನ್ಯಾಯಾಧೀಶರು ಪ್ರಶ್ನಿಸಿದರು. ಇದಕ್ಕೆ ಉತ್ತರಿಸಿದ ರೂಪಾ ನಾನು ಬೇಷರತ್ ಕ್ಷಮೆಯಾಚಿಸುವಂತೆ ರೋಹಿಣಿ ಸಿಂಧೂರಿ ಒತ್ತಾಯಿಸಿದ್ದಾರೆ ಎಂದು ಹೇಳಿದರು. ಇದಕ್ಕೆ ಉತ್ತರಿಸಿದ ರೋಹಿಣಿ ಸಿಂಧೂರಿ, ಡಿ.ರೂಪಾ ನನ್ನ ಮೇಲೆ ಮಾಡಿದ ಆರೋಪಗಳು ಇನ್ನೂ ಸಾಮಾಜಿಕ ಜಾಲತಾಣದಲ್ಲಿದೆ. ಕೋರ್ಟ್ ಆದೇಶದ ಬಳಿಕವೂ ರೂಪಾ ಡಿಲೀಟ್ ಮಾಡಿಲ್ಲ ಎಂದು ವಾದಿಸಿದರು.

ಇಬ್ಬರೂ ಹಿರಿಯ ಅಧಿಕಾರಿಗಳು ಹೀಗೆ ವರ್ತಿಸಬಾರದು. ಮಾತುಕತೆಗೆ ಒಪ್ಪದಿದ್ದರೆ ನಾವು ಏನು ಮಾಡಬಹುದು. ಅರ್ಹತೆ ಮೇಲೆ ವಿಚಾರಣೆ ನಡೆಸುಬಹುದು ಎಂದು ಕೋರ್ಟ್ ಆಕ್ಷೇಪ ವ್ಯಕ್ತಪಡಿಸಿತು. ಅಂತಿಮವಾಗಿ ಇಬ್ಬರೂ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡ ಸುಪ್ರೀಂಕೋರ್ಟ್ ವಿಚಾರಣಾಧೀನ ನ್ಯಾಯಾಲಯದಲ್ಲಿ ಪ್ರಕರಣ ಇತ್ಯರ್ಥಪಡಿಸಿಕೊಳ್ಳುವಂತೆ ಸೂಚಿಸಿತು. ಸುಪ್ರೀಂಕೋರ್ಟ್ ಸೂಚನೆ ಹಿನ್ನೆಲೆ ಡಿ.ರೂಪಾ ತಮ್ಮ ಅರ್ಜಿ ವಾಪಸ್ ಪಡೆದರು.

ನನ್ನ ವಿರುದ್ಧ ಡಿ.ರೂಪಾ ಮೌದ್ಗಿಲ್ 2023ರ ಫೆ.18 ಮತ್ತು 19ರಂದು ತಮ್ಮ ಫೇಸ್‌ಬುಕ್ ಖಾತೆಯಲ್ಲಿ ಕೀಳು ಅಭಿರುಚಿಯಿಂದ ಕೂಡಿದ ಆರೋಪ ಮಾಡಿದ್ದಾರೆ. ವಿದ್ಯುನ್ಮಾನ ಮಾಧ್ಯಮಗಳಲ್ಲೂ ಹೇಳಿಕೆ ನೀಡಿದ್ದಾರೆ. ಆ ಆರೋಪಗಳು ನನ್ನ ವ್ಯಕ್ತಿತ್ವಕ್ಕೆ ಧಕ್ಕೆ ಉಂಟು ಮಾಡುವಂತಿವೆ. ನನ್ನ ತೇಜೋವಧೆ ಮಾಡುವ ದುರುದ್ದೇಶದಿಂದಲೇ ರೂಪ ಈ ಕೃತ್ಯ ಎಸಗಿದ್ದಾರೆ. ಇದು ನನ್ನ ಖಾಸಗಿ, ಸಾಮಾಜಿಕ ಮತ್ತು ವೃತ್ತಿ ಬದುಕಿನ ಮೇಲೆ ಗಂಭೀರ ಪರಿಣಾಮ ಬೀರಿದ್ದು, ಮಾನಸಿಕ ಯಾತನೆ ಉಂಟು ಮಾಡಿದೆ ಎಂದು ಆರೋಪಿಸಿ ರೋಹಿಣಿ ಸಿಂಧೂರಿ 2023ರ ಮಾ.3ರಂದು ವಿಚಾರಣಾ ನ್ಯಾಯಾಲಯದಲ್ಲಿ ಖಾಸಗಿ ದೂರು ದಾಖಲಿಸಿದ್ದರು. ಮಾನಹಾನಿ ಮತ್ತು ಮಾನಸಿಕ ಯಾತನೆ ಉಂಟು ಮಾಡಿರುವುದಕ್ಕಾಗಿ ಡಿ.ರೂಪಾ ಅವರಿಂದ ನನಗೆ 1 ಕೋಟಿ ರೂ. ಮೊತ್ತವನ್ನು ಪರಿಹಾರವಾಗಿ ಕೊಡಿಸಬೇಕು. ಅವರ ವಿರುದ್ಧ ಸೂಕ್ತ ದಂಡನೀಯ ಕ್ರಮ ಕೈಗೊಳ್ಳಬೇಕು ಎಂದು ಕೋರಿದ್ದರು. ದೂರು ಪರಿಗಣಿಸಿದ್ದ ಮ್ಯಾಜಿಸ್ಟ್ರೇಟ್ ನ್ಯಾಯಾಲಯ ರೂಪಾ ವಿರುದ್ಧ ಕ್ರಿಮಿನಲ್ ಮಾನನಷ್ಟ ಪ್ರಕರಣ ದಾಖಲಿಸಲು 2023ರ ಮಾ.24 ರಂದು ಆದೇಶಿಸಿತ್ತು.

ಹಗರಣದ ಸುಳಿಯಲ್ಲಿ ರಾಜ್ಯ ಸರ್ಕಾರ

ವಶಪಡಿಸಿಕೊಳ್ಳಲು ನೋಟಿಫಿಕೇಶನ್ ಹೊರಡಿಸಲಾಗಿತ್ತು. ಈ ಪೈಕಿ ದೇವನಹಳ್ಳಿ ತಾಲೂಕಿನ ಕುಂದಾಣ ಹೋಬಳಿಯ ಚಪ್ಪರದಹಳ್ಳಿ ಗ್ರಾಮದಲ್ಲಿ ನಡೆದ ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಅವ್ಯವಹಾರ ನಡೆದಿದೆ. ಕುಂದಾಣ ಹೋಬಳಿಯ ಚಪ್ಪರದಹಳ್ಳಿ ಗ್ರಾಮದ ಸರ್ವೆ ನಂಬರ್ 7ರಲ್ಲಿ ಅನಧಿಕೃತವಾಗಿ ಕೃಷಿ ಮಾಡುತ್ತಿದ್ದ ಹಲವರಿಗೆ 1984ರಲ್ಲಿ ಆಗಿನ ತಹಸೀಲ್ದಾರರು ಎವಿಕ್ಷನ್ ನೋಟಿಸ್ ಜಾರಿ ಮಾಡಿದ್ದರು. ಅನಂತರ ಸದರಿ ಜಮೀನನ್ನು 'ಸರ್ಕಾರಿ ಖರಾಬ' ಎಂದು ಘೋಷಿಸಲಾಗಿತ್ತು. ಆದರೆ, ಕೆಐಎಡಿಬಿ ವತಿಯಿಂದ ಭೂಸ್ವಾಧೀನ ಪ್ರಸ್ತಾವನೆ ಸಂದರ್ಭದಲ್ಲಿ ಹಲವರನ್ನು ಜಮೀನಿನ ಮಾಲೀಕರೆಂದು ಗುರುತಿಸಿ ಪರಿಹಾರ ಹಂಚಲಾಗಿದೆ ಎಂಬ ಆರೋಪ ಕೇಳಿ ಬಂದಿದೆ. ಬಾಳಪ್ಪ ಹಂದಿಗುಂದ (ವಿಶೇಷ ಭೂಸ್ವಾಧೀನಾಧಿಕಾರಿ–2) ಅವರ ಉಪಸ್ಥಿತಿಯಲ್ಲಿ ನಡೆದ ತೀರ್ಮಾನ ಹಾಗೂ ಅವರ ಆದೇಶದಂತೆ ಈ ಕ್ರಮ ಕೈಗೊಳ್ಳಲಾಗಿದೆ ಎಂದು ಇಡಿಗೆ ಸಲ್ಲಿಸಲಾಗಿರುವ ದೂರಿನಲ್ಲಿ ಗಮನಸೆಳೆಯಲಾಗಿದೆ.

ಈ ಸಂಬಂಧ ತನಿಖೆಗೆ ಕೋರಿ 12.09.2024ರಂದು ಮುಖ್ಯಮಂತ್ರಿ, ಮುಖ್ಯ ಕಾರ್ಯದರ್ಶಿ, ಕೈಗಾರಿಕಾ ಸಚಿವರಿಗೆ ದೂರು ನೀಡಲಾಗಿತ್ತು. ಇದಕ್ಕೆ ಸ್ಪಂದಿಸದಿದ್ದಾಗ 09.10.2024ರಂದು ಲೋಕಾಯುಕ್ತರಿಗೆ ದೂರು ಸಲ್ಲಿಸಲಾಗಿದೆ. ಅದಕ್ಕೂ ಸರ್ಕಾರ ಸ್ಪಂದಿಸದ ಹಿನ್ನೆಲೆ ಅಕ್ಟೋಬರ್ 23ರಂದು ಇಡಿಗೆ ಅಹವಾಲು ಸಲ್ಲಿಸಲಾಗಿದ್ದು, ಬುಧವಾರ (06.11.2024) ಪ್ರಧಾನಿ ನರೇಂದ್ರ ಮೋದಿ, ಗೃಹ ಸಚಿವ ಅಮಿತ್ ಷಾ, ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್, ಜಾರಿ ನಿರ್ದೇಶನಾಲಯದ ನಿರ್ದೇಶಕರಿಗೆ ದೂರು ಸಲ್ಲಿಸಿ ಬಹುಕೋಟಿ ಕೆಐಎಡಿಬಿ ಹಗರಣ ಬಗ್ಗೆ ಸಮಗ್ರ ತನಿಖೆ ನಡೆಸಲು ಕೆ.ಎ.ಪಾಲ್ ಮನವಿ ಮಾಡಿದ್ದಾರೆ.

ದೇವನಹಳ್ಳಿಯ ಗೊಲ್ಲಹಳ್ಳಿ, ದೊಡ್ಡಗೊಲ್ಲಹಳ್ಳಿ, ಜೊಡಿಗ್ರಾಮ, ಕುಂದಾಣ, ಚಪ್ಪರದಹಳ್ಳಿ, ಕೊಡಿಹಳ್ಳಿ, ಕೋಣಗಟ್ಟಿ, ಬೈದೇನಹಳ್ಳಿ, ಹಾರೋನಹಳ್ಳಿ, ಹರಳೂರು, ಮೊದಲಾದ ಹತ್ತಾರು ಹಳ್ಳಿಗಳಲ್ಲಿ ಜಮೀನನ್ನು ಕೆಐಎಡಿಬಿ ವತಿಯಿಂದ ಸ್ವಾಧೀನಪಡಿಸಿ ವಿವಿಧ ಕಂಪನಿಗಳಿಗೆ ಹಂಚಿಕೆ ಮಾಡಲಾಗಿದೆ. ಸರ್ಕಾರ ಭೂಮಿಯನ್ನು ಸ್ವಾಧೀನ ಪಡೆದು ನಕಲಿ ವ್ಯಕ್ತಿಗಳಿಗೆ ಪರಿಹಾರ ಪಾವತಿಸಲಾಗಿದೆ. ಚಪ್ಪರದಹಳ್ಳಿ ಗ್ರಾಮದ ಸರ್ವೆ ನಂಬರ್ 7ರಲ್ಲಿ 45 ಎಕರೆ 15 ಗುಂಟೆ ಪೈಕಿ 5.5 ಎಕರೆ ಜಮೀನನ್ನು ಹಂಗಾಮಿ ಸಾಗುವಳಿ ಭೂಮಿಯೇ ಎಂದು ಪರಿಶೀಲಿಸದೆ ಹಲವರ ಹೆಸರಿನಲ್ಲಿ ಪರಿಹಾರ ಪ್ರಕಟಿಸಲಾಗಿದೆ. 38.5 ಎಕರೆ ಹಂಗಾಮಿ ಸಾಗುವಳಿ ಜಮೀನು 'ಸರ್ಕಾರಿ ಖರಾಬ' ಎಂದು ತಿಳಿದಿದ್ದರೂ ಅಕ್ರಮವಾಗಿ ಪರಿಹಾರದ ಮೊತ್ತ ಪಾವತಿಸಲಾಗಿದೆ ಎಂದು ಈ ದೂರಿನಲ್ಲಿ ಗುರುತರ ಆರೋಪ ಮಾಡಲಾಗಿದೆ. ದೇವನಹಳ್ಳಿ ತಾಲೂಕಿನ ಬೈದೇನಹಳ್ಳಿ, ದೊಡ್ಡಗೊಲ್ಲಹಳ್ಳಿ, ಚಪ್ಪರದಹಳ್ಳಿ, ಹರೋನಹಳ್ಳಿ ಮೊದಲಾದ ಗ್ರಾಮಗಳಲ್ಲಿ ಕೆಐಎಡಿಬಿ ಭೂಸ್ವಾಧೀನ ನಡೆಸಿದ್ದು, ಭೂಮಿಯ ಮಾಲೀಕರಿಗೆ ಪ್ರತೀ ಎಕರೆಗೆ 1.35 ಕೋಟಿ ರೂಪಾಯಿ ಪಾವತಿಸಿ, ಆ ಮೊತ್ತದಿಂದ ಕಮೀಷನ್ ಸಂಗ್ರಹಿಸಲಾಗಿದೆ ಎಂಬ ರೈತರು 'ಸಿಟಿಜನ್ ರೈಟ್ಸ್ ಫೌಂಡೇಷನ್'ಗೆ ದೂರು ನೀಡಿದ್ದು, ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಸಚಿವ ಎಂ.ಬಿ.ಪಾಟೀಲ್‌ರವರಿಗೆ ತಲುಪಿಸಲು ಪ್ರತೀ ಎಕರೆಗೆ 35 ಲಕ್ಷ ರೂಪಾಯಿ ಕಮೀಷನ್ ಸಂಗ್ರಹಿಸಲಾಗಿದೆ ಎಂದೂ ಆರೋಪಿಸಿದ್ದಾರೆ.

ನಾಟಕ ಪ್ರದರ್ಶನಕ್ಕೆ ರಂಗಮಂದಿರ ಹುಡುಕುವುದೇ ಸವಾಲಾಗಿದೆ

ಹಿರಿಯ ರಂಗಕರ್ಮಿ ರಾಮೇಶ್ವರಿ ವರ್ಮ ಬೇಸರ

ಮೈಸೂರು, ನ.7(ಎಂಕೆ)– ಇತ್ತೀಚೆಗೆ ನಾಟಕಗಳ ಪ್ರದರ್ಶನಕ್ಕೆ ಹಣದ ಕ್ರೋಢೀಕರಣ ಮತ್ತು ರಂಗ ಮಂದಿರಗಳನ್ನು ಹುಡುಕುವುದೇ ಸವಾಲಿನ ಕೆಲಸವಾಗಿದ್ದು, ಸರ್ಕಾರಿ ರಂಗಮಂದಿರಗಳಂತೂ ಕೆಲವೇ ತಂಡಗಳಿಗೆ ಸೀಮಿತವಾಗಿದೆಯೇ ಎಂಬ ಅನುಮಾನ ಮೂಡುತ್ತದೆ ಎಂದು ಹಿರಿಯ ರಂಗಕರ್ಮಿ ರಾಮೇಶ್ವರಿ ವರ್ಮಾ ಬೇಸರ ವ್ಯಕ್ತಪಡಿಸಿದರು.

ಮೈಸೂರು ಕಲಾಮಂದಿರ ಕಿರುರಂಗ ಮಂದಿರದಲ್ಲಿ ಮೈಸೂರು ರಂಗವಲ್ಲಿ ತಂಡದ ನಾಲ್ಕು ದಿನಗಳ 'ರಂಗಸಂಭ್ರಮ ನಾಟಕೋತ್ಸವ' ಉದ್ಘಾಟಿಸಿ ಮಾತನಾಡಿದ ಅವರು, ಇತ್ತೀಚಿನ ದಿನಗಳಲ್ಲಿ ಸಣ್ಣ ನಾಟಕ ಪ್ರದರ್ಶನಕ್ಕೂ ಕನಿಷ್ಠ 50 ಸಾವಿರ ರೂ. ಖರ್ಚಾಗಲಿದೆ. ಸರ್ಕಾರಿ ರಂಗಮಂದಿರಗಳು ರಂಗತಂಡಗಳಿಗೆ ದೊರೆಯುವಂತೆ ಅಧಿಕಾರಿಗಳು ಗಮನಿಸಬೇಕು. ಯಾರೋ ಒಬ್ಬರು ರಂಗಮಂದಿರವನ್ನು ಬ್ಲಾಕ್ ಮಾಡಿಕೊಂಡು, ಕಾಳಸಂತೆಯಲ್ಲಿ ಮಾರಾಟವಾಗುವಂತಾಗ ಬಾರದು ಎಂದು ಮನವಿ ಮಾಡಿದರು.

ರಂಗಭೂಮಿಯು ಕೇವಲ ಸರ್ಕಾರದ ಸಬ್ಸಿಡಿ, ಪ್ರೋತ್ಸಾಹ ಧನವನ್ನು ನಂಬಿ ಕುಳಿತರೆ ಆಗುವುದಿಲ್ಲ ನಾಟಕಗಳ ನಿರ್ಮಾಣ ಮತ್ತು ಪ್ರದರ್ಶನದ ಮೂಲಕ ಊರಿನ ಸಂಸ್ಕೃತಿ ಉಳಿಸಿ, ಬೆಳೆಸಬೇಕಾದರೆ ಆಸಕ್ತ ಸ್ಥಳೀಯ ಉದ್ಯಮಿಗಳ ಸಹಕಾರ ಪಡೆಯಿರಿ. ಕೊಡುಗೆ ನೀಡುವಂತೆ ಉದ್ಯಮಿಗಳಿಗೆ ಮನವಿ ಮಾಡಿ ಖಾಸಗಿ ಸಂಪನ್ಮೂಲಗಳ ಸೃಷ್ಟಿಸಿ, ಕಂಪನಿಗಳ ಸಾಮಾಜಿಕ ಹೊಣೆಗಾರಿಕೆ ಯೋಜನೆಯಡಿ (ಸಿಎಸ್‌ಆರ್ ಫಂಡ್)ಅವಕಾಶಗಳಿದ್ದರೆ ಸದ್ಬಳಕೆ ಮಾಡಿಕೊಳ್ಳುವಂತೆ ಸಲಹೆ ನೀಡಿದರು.

ಚಲನಚಿತ್ರ ನಿರ್ದೇಶಕ ಎನ್.ಎಸ್. ಇಸ್ಲಾಹುದ್ದೀನ್ ಮಾತನಾಡಿ, ಮೂರು ದಿನಗಳ ರಂಗಸಂಭ್ರಮ ಹಮ್ಮಿಕೊಂಡಿರುವ ರಂಗವಲ್ಲಿ ತಂಡ ಒಂದು ಶಿಸ್ತುಬದ್ಧ ಸಂಸ್ಥೆಯಂತೆ ಕೆಲಸ ಮಾಡಿದೆ. ನಾಟಕಗಳು ಅನೇಕ ಪ್ರದರ್ಶನಗಳನ್ನು ಕಾಣುವಂತೆ ಮಾಡುವ ಮೂಲಕ ಬಂಡವಾಳವನ್ನು ಸೃಷ್ಟಿಸುವ ಜೊತೆಗೆ ಹೊಸ ಹೊಸ ಯೋಜನೆಗಳನ್ನು ಕೈಗೊಂಡಿರುವುದು ನಿಜಕ್ಕೂ ಶ್ಲಾಘನೀಯ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಒಂದೆಡೆ ಮೊಬೈಲ್ ಜಗತ್ತಿನೊಂದಿಗೆ ನಮ್ಮನ್ನು ಏಕಾಂಗಿಯಾಗಿಸುತ್ತಿದ್ದರೆ, ರಂಗಭೂಮಿ ಎಲ್ಲರನ್ನು ಒಳಗೊಳ್ಳುವ ಕೆಲಸ ಮಾಡುತ್ತದೆ. ಇಂದು ರಂಗಭೂಮಿಗೆ ಯುವಜನರನ್ನು ಸೆಳೆಯುವ ಅಗತ್ಯವಿದೆ, ಹೊಸತನವನ್ನು ಅಪ್ಪಿಕೊಳ್ಳುವಲ್ಲಿ ಇನ್ನಷ್ಟು ಕೆಲಸವಾಗಬೇಕು ಎಂದು ಅಭಿಪ್ರಾಯಪಟ್ಟರು.

ರಂಗ ಸಂಗೀತಾಂಜಲಿ: ನಂತರ ರಾಜ್ಯ ಪ್ರಶಸ್ತಿ ವಿಜೇತ ವೈ.ಎಂ.ಪುಟ್ಟಣ್ಣಯ್ಯ ಮತ್ತು ತಂಡದಿಂದ 'ರಂಗ ಸಂಗೀತಾಂಜಲಿ' ರಂಗಗೀತೆ ಕಾರ್ಯಕ್ರಮ ನಡೆಯಿತು. ಮೈಸೂರು ರಂಗಾಯಣ ನಿರ್ದೇಶಕ ಸತೀಶ್ ತಿಪಟೂರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್. ಮಲ್ಲಿಕಾರ್ಜುನ ಸ್ವಾಮಿ, ರಂಗವಲ್ಲಿ ಸ್ಥಾಪಕ ಸದಸ್ಯ ಹೆಚ್.ಆರ್.ರವಿಪ್ರಸಾದ್, ನಾಟಕೋತ್ಸವ ಸಮಿತಿ ಸಂಚಾಲಕ ಮಂಜುನಾಥ ಶಾಸ್ತ್ರಿ ಮತ್ತಿತರರಿದ್ದರು.



ಕಿರುರಂಗಮಂದಿರದಲ್ಲಿ ನಾಲ್ಕು ದಿನಗಳ 'ರಂಗಸಂಭ್ರಮ ನಾಟಕೋತ್ಸವ'ವನ್ನು ಹಿರಿಯ ರಂಗಕರ್ಮಿ ರಾಮೇಶ್ವರಿ ವರ್ಮಾ ಉದ್ಘಾಟಿಸಿದರು.

ನಿಜವಾದ ಮನರಂಜನೆ...

ರಂಗೋತ್ಸವಗಳು ಪ್ರೇಕ್ಷಕರಿಗೆ ನಿಜವಾದ ಮನರಂಜನೆ ನೀಡಲಿವೆ. ಇಂಥ ಉತ್ಸವಗಳಲ್ಲಿ ಪ್ರದರ್ಶನಗೊಳ್ಳುವ ನಾಟಕಗಳನ್ನು ಆಯ್ಕೆ ಮಾಡುವುದು ಒಂದು ಸವಾಲಿನ ಕೆಲಸ. ಏಕೆಂದರೆ ಉತ್ತಮ ನಾಟಕ ಪ್ರದರ್ಶಿಸಿದ ಕೆಲವೇ ತಂಡಗಳು ಮಾತ್ರ ಅರ್ಜಿ ಹಾಕಿರುವುದಿಲ್ಲ. ಅಂಥ ಉತ್ತಮ ನಾಟಕವನ್ನು ಒಳಗೊಳ್ಳುವುದರಿಂದಲೇ ರಂಗೋತ್ಸವ ಅರ್ಥಪೂರ್ಣವಾಗುತ್ತದೆ.

- ರಾಮೇಶ್ವರಿ ವರ್ಮಾ, ಹಿರಿಯ ರಂಗಕರ್ಮಿ

ಎಲ್ಲರಿಗೂ ಸೂಕ್ತ ಅವಕಾಶ ನೀಡಲು ನಿರ್ಧಾರ...

ರಂಗಮಂದಿರಗಳ ಆನ್‌ಲೈನ್ ಮೂಲಕ ಬುಕಿಂಗ್ ಮಾಡಲಾಗುತ್ತದೆ. ನಮ್ಮ ಪರಿಶೀಲನೆಯ ನಡುವೆಯೂ ಒಂದೇ ಸಂಸ್ಥೆಗೆ ರಂಗಮಂದಿರ ಬುಕಿಂಗ್ ಮಾಡಿರುವ ಹಾಗೂ ಬುಕಿಂಗ್ ಮಾಡಿದ ಕೆಲವರು ಇತರರಿಗೆ ಸ್ಥಳ ನೀಡಿರುವ ಘಟನೆಗಳು ನಡೆದಿರಬಹುದು. ಹಾಗಾಗಿ ಮುಂದಿನ ದಿನಗಳಲ್ಲಿ ಜಿಲ್ಲೆಯ ಎಲ್ಲಾ ರಂಗ ತಂಡಗಳು, ಸಂಸ್ಥೆಗಳ ಒಂದು ಗುಂಪನ್ನು ಮಾಡಿ ಶೀಘ್ರದಲ್ಲೇ ಈ ಸಮಸ್ಯೆ ಬಗ್ಗೆ ಚರ್ಚೆ ಮಾಡುತ್ತೇವೆ. ಎಲ್ಲರಿಗೂ ಸೂಕ್ತ ಅವಕಾಶ ಸಿಗುವಂತೆ ನಿರ್ಧಾರ ತೆಗೆದುಕೊಳ್ಳೋಣ.

-ಎಂ.ಡಿ.ಸುದರ್ಶನ್, ಸಹಾಯಕ ನಿರ್ದೇಶಕ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಸಿಎಫ್‌ಟಿಆರ್‌ಐನಲ್ಲಿ ಜಾನಪದ ಕಲಾಸೌರಭ



ಮೈಸೂರು, ನ.7(ಎಂಕೆ)– ಮೈಸೂರಿನ ಕೇಂದ್ರೀಯ ಆಹಾರ ತಾಂತ್ರಿಕ ಸಂಶೋಧನಾಲಯ (ಸಿಎಫ್‌ಟಿಆರ್‌ಐ)ದ ಚೆಲುವಾಂಬ ಸಭಾಂಗಣದಲ್ಲಿ ಕನ್ನಡ ಸಹೃದಯ ಬಳಗದ ಸಹಯೋಗದೊಂದಿಗೆ ಕನ್ನಡ ರಾಜ್ಯೋತ್ಸವ ಸಂಭ್ರಮಾಚರಣೆ ಅಂಗವಾಗಿ ಖ್ಯಾತ ಜಾನಪದ ಗಾಯಕ ಡಾ.ಮಳವಳ್ಳಿ ಮಹದೇವಸ್ವಾಮಿ ಅವರಿಂದ ಜಾನಪದ ಕಲಾಸೌರಭ ನಡೆಯಿತು.

'ಚೆಲ್ಲಿದರು ಮಲ್ಲಿಗೆಯಾ' ಭಕ್ತಿ ಗೀತೆಯೊಂದಿಗೆ ಜಾನಪದ ಕಲಾಸೌರಭ ಆರಂಭಿಸಿದ ಅವರು, 'ಸೋಜುಗಾದ ಸೂಜು ಮಲ್ಲಿಗೆ', 'ಎಲ್ಲೋ ಜೋಗಪ್ಪ ನಿನ್ನರಮನೆ', ಅನ್ಯಾಯಕಾರಿ ಬ್ರಹ್ಮ ಈ ಸುಂದರನ ಸನ್ಯಾಸಿ ಮಾಡಬಹುದೇ', ತಾಯಿ–ತಂದೆ ಇಬ್ಬರು ಕಣ್ಣಿಗೆ ಕಾಣುವ ದೇವರು' ಸೇರಿದಂತೆ ಹತ್ತಾರು ಜಾನಪದ ಹಾಡುಗಳನ್ನು ಸುಶ್ರಾವ್ಯವಾಗಿ ಹಾಡಿ ಅಪಾರ ಮೆಚ್ಚುಗೆ ಪಡೆದರು.

ಇದಕ್ಕೂ ಮುನ್ನ ಸಭಿಕರನ್ನುದ್ದೇಶಿಸಿ ಮಾತನಾಡಿದ ಅವರು, ಜಾನಪದ ಕಲೆ ಹಳೇ ಬೇರು ಹೊಸ ಚಿಗುರಾಗಿದೆ. ಈ ಜನಪದವನ್ನು ನಮ್ಮ ಪೂರ್ವಿಕರು ಉಳಿಸಿಕೊಂಡು ಬಂದಿದ್ದಾರೆ. ಮುಂದಿನ ದಿನಗಳಲ್ಲಿ ನಾವು ಈ ಜನಪದ ಕಲಿತು ಬೆಳೆಸಬೇಕು. ಈ ಜನಪದ ಕಲೆಗಿರುವ ಗಟ್ಟಿತನ ಬೇರೆ ಕಲೆಗಳಿಗೆ ಇಲ್ಲ.

ಚಿಕ್ಕ ವಯಸ್ಸಿನಲ್ಲಿ ಹಳ್ಳಿಗಳಲ್ಲಿ ನಡೆಯುತ್ತಿದ್ದ ನಾಟಕ, ಹರಿಕಥೆಗಳನ್ನು ಕೇಳುತ್ತಿದ್ದರಿಂದ ನನಗೆ ಜಾನಪದದಲ್ಲಿ ಆಸಕ್ತಿ ಬೆಳೆಯಿತು. ಅಲ್ಲದೆ ನಮಗಿದ್ದ ಬಡತನ ಏನಾದರೂ ಸಾಧನೆ ಮಾಡಲೇಬೇಕು ಎಂಬುದಕ್ಕೆ ಪ್ರೇರಣೆಯಾಯಿತು. ಹಳ್ಳಿ ಹಳ್ಳಿಗೆ ತಿರುಗಿ ಮಂಟೇಸ್ವಾಮಿ, ಸಿದ್ದಪ್ಪಾಜಿ ಕಥೆಗಳನ್ನು ಹೇಳುತ್ತಾ ಬಂದೆವು ಎಂದು ತಾವು ಸಾಗಿ ಬಂದಿದ್ದನ್ನು ಸ್ಮರಿಸಿದರು. ಜಾನಪದ ಕಾರ್ಯಕ್ರಮಕ್ಕೂ ಮುನ್ನ ಸಿಎಫ್‌ಟಿಆರ್‌ಐ ನಿರ್ದೇಶಕಿ ಅನ್ನಪೂರ್ಣ ಸಿಂಗ್ ಹಾಗೂ ಕನ್ನಡ ಸಹೃದಯ ಸಂಘದ ವತಿಯಿಂದ ಮಳವಳ್ಳಿ ಮಹದೇವಸ್ವಾಮಿ ಅವರನ್ನು ಸನ್ಮಾನಿಸಲಾಯಿತು.

ಸಾಧನೆ ಹಿಂದೆ ಎಲ್ಲವೂ ಬರಲಿದೆ...

ಕಲೆಗೆ ಬೆಲೆ ಇದೆ. ಅದರಲ್ಲೂ ಜಾನಪದ ಕಲೆಗೆ ಎಲ್ಲೆಡೆ ವಿಶೇಷ ಆದ್ಯತೆ ನೀಡಲಾಗುತ್ತದೆ. ಮಕ್ಕಳು ಪುಸ್ತಕದ ಕಡೆಗೆ ಗಮನ ಕೊಡದಿದ್ದರೆ ಜನಪದ ಇನ್ನಿತರೆ ಸಾಂಸ್ಕೃತಿಕ ಕಲೆಗಳನ್ನು ಕಲಿಯಲು ಅವಕಾಶ ಮಾಡಿಕೊಡಬೇಕು. ಸಾಧನೆಯ ಹಿಂದೆ ಹಣ, ಐಶ್ವರ್ಯ, ಹೆಸರು ಎಲ್ಲವೂ ತಾನಾಗಿಯೇ ಬರಲಿದೆ. ಹಾಗಾಗಿ ಸಾಧನೆಯತ್ತ ಚಿತ್ತಹರಿಸುವುದು ಮುಖ್ಯ. ಮಕ್ಕಳು ಯಾವುದೇ ಕಾರಣಕ್ಕೂ ಕೆಟ್ಟಚಟಗಳಿಗೆ ಬಲಿಯಾಗದಂತೆ ನೋಡಿಕೊಳ್ಳಬೇಕಿದೆ.

- ಡಾ.ಮಳವಳ್ಳಿ ಮಹದೇವಸ್ವಾಮಿ, ಖ್ಯಾತ ಜಾನಪದ ಗಾಯಕ

ಡಿಸಿ ಕಚೇರಿ ಮುಂದೆ ಕನಕದಾಸರ ಪ್ರತಿಮೆ ಸ್ಥಾಪನೆಗೆ ಮನವಿ



ಮೈಸೂರು, ನ.7(ಎಂಕೆ)– ಮೈಸೂರು ಜಿಲ್ಲಾಧಿಕಾರಿಗಳ ಕಚೇರಿ ಆವರಣದಲ್ಲಿ ಭಕ್ತ ಕನಕದಾಸರ ಪ್ರತಿಮೆ ಸ್ಥಾಪಿಸಲು ಕ್ರಮ ಕೈಗೊಳ್ಳುವಂತೆ ಕರ್ನಾಟಕ ಪ್ರದೇಶ ಕುರುಬರ ಸಂಘದ ಮಾಜಿ ಅಧ್ಯಕ್ಷ ಬಿ.ಸುಬ್ರಹ್ಮಣ್ಯ ನೇತೃತ್ವದಲ್ಲಿ ಗುರುವಾರ ಮನವಿ ಪತ್ರ ಸಲ್ಲಿಸಲಾಯಿತು.

ಅಪರ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಶ್ರೀ ಭಕ್ತ ಕನಕದಾಸರ ಜಯಂತಿ ಅಂಗವಾಗಿ ನಡೆದ ಪೂರ್ವಭಾವಿ ಸಭೆ ಬಳಿಕ ಕನಕದಾಸರ ಪ್ರತಿಮೆ ನಿರ್ಮಾಣಕ್ಕೆ ಸೂಕ್ತ ಸ್ಥಳವನ್ನು ಗುರುತಿಸಿ ಸರ್ಕಾರಕ್ಕೆ ಶಿಫಾರಸ್ಸು ಮಾಡಲು ಮನವಿ ಮಾಡಲಾಯಿತು.

ಈ ವೇಳೆ ಕರ್ನಾಟಕ ಪ್ರದೇಶ ಕುರುಬರ ಸಂಘದ ಮಾಜಿ ಅಧ್ಯಕ್ಷ ಬಿ.ಸುಬ್ರಹ್ಮಣ್ಯ ಮಾತನಾಡಿ, ನ.18ರಂದು ನಡೆಯುವ ಕನಕದಾಸರ ಜಯಂತ್ಯುತ್ಸವಕ್ಕೂ ಮುನ್ನ ಪ್ರತಿಮೆ ನಿರ್ಮಾಣಕ್ಕೆ ಸೂಕ್ತ ಸ್ಥಳವನ್ನು ಗುರುತಿಸಿ ಮುಖ್ಯಮಂತ್ರಿಗಳ ಗಮನಕ್ಕೆ ತರಬೇಕು. ನಂತರ ಕಂಚಿನ ಪ್ರತಿಮೆ ನಿರ್ಮಿಸಿ ದಾರ್ಶನಿಕರಿಗೆ ಗೌರವ ಸಲ್ಲಿಸಬೇಕು ಎಂದರು.

ಕನಕದಾಸರು ದಾಸ ಸಾಹಿತ್ಯದ ಶ್ರೇಷ್ಠ ಕವಿಗಳು. ತಾವು ಬದುಕಿದ್ದ ಅವಧಿಯಲ್ಲಿ ನೇರ, ನಿಷ್ಠುರತೆಯಿಂದ ಸಾಹಿತ್ಯ ರಚಿಸಿ ಸಮಾಜದಲ್ಲಿದ್ದ ಅಂಕು–ಡೊಂಕುಗಳನ್ನು ತಿದ್ದಿ ಸಾಮಾಜಿಕ ಸಂದೇಶ ನೀಡಿದವರು. ಕಾವ್ಯ, ಕಂಡಿಕೆಗಳನ್ನು ಬರೆದು ಕನ್ನಡ ಸಾಹಿತ್ಯ ಪರಂಪರೆಯಲ್ಲೂ ಉನ್ನತ ಸ್ಥಾನ ಅಲಂಕರಿಸಿದ್ದಾರೆ. ಅಂತಹ ಮಹನೀಯರನ್ನು ಸ್ಮರಿಸುವ ಕಾರ್ಯವನ್ನು ಜಿಲ್ಲಾಡಳಿತ ಮಾಡಬೇಕು ಎಂದು ಕೋರಿದರು.

ಸಿಎಂ ಸ್ಥಾನದಿಂದ ಸಿದ್ದರಾಮಯ್ಯರನ್ನು ಕೆಳಗಿಳಿಸಲು ಹುನ್ನಾರ ಆರೋಪ; ಬಿಜೆಪಿ ವಿರುದ್ಧ ದಲಿತ ಮಹಾಸಭಾ ಪ್ರತಿಭಟನೆ

ಮೈಸೂರು,ನ.7(ಪಿಎಂ)– ಮುಖ್ಯಮಂತ್ರಿ ಸ್ಥಾನದಿಂದ ಸಿದ್ದರಾಮಯ್ಯ ಅವರನ್ನು ಕೆಳಗಿಳಿಸಲು ಕೇಂದ್ರದ ಬಿಜೆಪಿ ಸರ್ಕಾರವು ಹುನ್ನಾರ ನಡೆಸುತ್ತಿದೆ ಎಂದು ಆರೋಪಿಸಿ ಗಾಂಧಿನಗರದ ದಲಿತ ಮಹಾಸಭಾ ವತಿಯಿಂದ ಗುರುವಾರ ಪ್ರತಿಭಟನೆ ನಡೆಸಲಾಯಿತು.

ಮೈಸೂರಿನ ಪುರಭವನ ಆವರಣದ ಡಾ.ಬಿ.ಆರ್. ಅಂಬೇಡ್ಕರ್ ಪ್ರತಿಮೆ ಬಳಿ ಜಮಾಯಿಸಿದ ಪ್ರತಿಭಟನಾಕಾರರು, ಶೋಷಿತ ಸಮುದಾಯದ ನಾಯಕ ಸಿದ್ದರಾಮಯ್ಯ ಅವರ ವಿರುದ್ಧ ಬಿಜೆಪಿಯವರು ಸುಳ್ಳು ಆರೋಪ ಮಾಡುತ್ತಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಸಿಎಂ ಸ್ಥಾನದಿಂದ ಸಿದ್ದರಾಮಯ್ಯರನ್ನು ಕೆಳಗಿಳಿಸಲು ಬಿಜೆಪಿಯಲ್ಲಿರುವ ಮನುವಾದಿಗಳು ಕುತಂತ್ರ ನಡೆಸುತ್ತಿರುವುದು ಇತ್ತೀಚಿನ ಅನೇಕ ಬೆಳವಣಿಗೆಗಳಿಂದ ಸಾಬೀತಾಗಿದೆ. ಮುಡಾ ಪ್ರಕರಣ ಸಂಬಂಧ ಲೋಕಾಯುಕ್ತ ತನಿಖೆಯಾಗಬೇಕೆಂದು ಬಿಜೆಪಿಯವರು ಒತ್ತಾಯಿಸುತ್ತಿದ್ದರು. ಹೈಕೋರ್ಟ್ ಆದೇಶದ ಮೇರೆಗೆ ಇದೀಗ ಲೋಕಾಯುಕ್ತವೇ ತನಿಖೆ ಕೈಗೆತ್ತಿಕೊಂಡಿದೆ. ಲೋಕಾಯುಕ್ತ ಅಧಿಕಾರಿಗಳು ಪ್ರಾಮಾಣಿಕ ಮತ್ತು ದಕ್ಷತೆಯಿಂದ ತನಿಖೆ ನಡೆಸುತ್ತಿದ್ದರೂ ಈಗ ಏಕಾಏಕಿ ಲೋಕಾಯುಕ್ತ ತನಿಖೆ ಮೇಲೆ ಬಿಜೆಪಿಯವರು ಅಪನಂಬಿಕೆ ವ್ಯಕ್ತಪಡಿಸಲು ಆರಂಭಿಸಿದ್ದಾರೆ. ಇವರ ಈ ವರ್ತನೆ ಕೋರ್ಟ್ ಆದೇಶವನ್ನು ಧಿಕ್ಕರಿಸುವಂತಿದೆ ಎಂದು ಆರೋಪಿಸಿದರು.

ಇಂತಹ ಇಬ್ಬಂದಿತನ ನಡವಳಿಕೆ ಬಿಜೆಪಿಯವರಿಂದ ಮಾತ್ರವೇ ಸಾಧ್ಯ. ಬಿಜೆಪಿಯವರಿಗೆ ಈ ದೇಶದ ಕಾನೂನು ಹಾಗೂ ಸಂವಿಧಾನದ ಮೇಲೆ ನಂಬಿಕೆ ಇಲ್ಲ ಎಂಬುದು ಇವರ ಹೇಳಿಕೆಗಳಿಂದ ಸಾಬೀತಾಗುತ್ತಿದೆ. ಕರ್ನಾಟಕ ಲೋಕಾಯುಕ್ತ ಸಂಸ್ಥೆ ದೇಶದಲ್ಲಿಯೇ ಅತ್ಯಂತ ಪ್ರಾಮಾಣಿಕ, ದಕ್ಷತೆ, ನಿಷ್ಪಕ್ಷಪಾತ ತನಿಖೆ ನಡೆಸುವ ಮಾದರಿ ಸಂಸ್ಥೆಯಾಗಿದೆ. ಆದರೂ ಲೋಕಾಯುಕ್ತ ತನಿಖೆಯ ಮೇಲೆ ಅವಿಶ್ವಾಸ ವ್ಯಕ್ತಪಡಿಸುವ ಮೂಲಕ ಬಿಜೆಪಿಯವರು ದ್ವೇಷ ರಾಜಕಾರಣಕ್ಕೆ ಮುಂದಾಗಿದ್ದಾರೆ ಎಂದು ದೂರಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯನವರು ದೇಶದ ಸಂವಿಧಾನ ಹಾಗೂ ಕಾನೂನು ಗೌರವಿಸಿ ತಮ್ಮ ಚುನಾವಣಾ ಪ್ರಚಾರ ಸ್ಥಗಿತಗೊಳಿಸಿ ತನಿಖೆಗೆ ಸಹಕರಿಸಿದ್ದಾರೆ. ಹೀಗಿದ್ದರೂ ಬಿಜೆಪಿಯವರು ಸಿಬಿಐ ತನಿಖೆಗೆ ಒತ್ತಾಯಿಸುತ್ತಿರುವುದು ರಾಜಕೀಯ ದುರುದ್ದೇಶವಲ್ಲದೇ ಬೇರೇನೂ ಅಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.


ದಲಿತ ಮಹಾಸಭಾ ಅಧ್ಯಕ್ಷ ಎಸ್.ರಾಜೇಶ್, ಸಾಹುಕಾರ್ ಚನ್ನಯ್ಯ ಬ್ಲಾಕ್ ಕಾಂಗ್ರೆಸ್ ಕಾರ್ಯದರ್ಶಿ ಎಸ್.ಎ.ರಹೀಮ್, ರಾಜ್ಯ ಸಂಶೋಧನಾ ಸಂಘದ ಅಧ್ಯಕ್ಷ ಮರಿದೇವಯ್ಯ, ಕಾಂಗ್ರೆಸ್ ಸೇವಾದಳದ ಕಮ್ರುಜ್ ಪಾಷ, ಮುಖಂಡರಾದ ಕುಕ್ಕರಹಳ್ಳಿ ನಂಜುಂಡ ಸ್ವಾಮಿ, ಮೋಹನ್ ಕುಮಾರ್, ಫಾಜಿಲ್, ಪ್ರಮೋದ್, ಕನ್ನಡ ಹೋರಾಟಗಾರ ಧನಪಾಲ್ ಮತ್ತಿತರರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.


ಮೈಸೂರಿನ ಪುರಭವನ ಆವರಣದ ಡಾ.ಬಿ.ಆರ್.ಅಂಬೇಡ್ಕರ್ ಪ್ರತಿಮೆ ಬಳಿ ಗುರುವಾರ ದಲಿತ ಮಹಾಸಭಾದಿಂದ ಪ್ರತಿಭಟನೆ ನಡೆಸಲಾಯಿತು.

ದೇಶ - ವಿದೇಶ

ಕೆನಡಾ: ಪ್ರತಿಭಟನೆಯಲ್ಲಿ ಭಾಗಿಯಾದ ಹಿಂದೂ ದೇವಾಲಯದ ಅರ್ಚಕ ಅಮಾನತು

ಕೆನಡಾ: ಭಾನುವಾರ ಬ್ರಾಂಪ್ಟನ್‌ನ ಹಿಂದೂ ಸಭಾ ಮಂದಿರದಲ್ಲಿ ನಡೆದ ಪ್ರತಿಭಟನೆಯಲ್ಲಿ ಭಾಗಿಯಾಗಿದ್ದ ಅರ್ಚಕ ರಾಜಿಂದರ್ ಪರ್ಸಾದ್ ಅವರನ್ನು ಹಿಂದೂ ಸಭಾ ದೇವಾಲಯದ ಆಡಳಿತ ಮಂಡಳಿ ಅಮಾನತುಗೊಳಿಸಿದೆ.




ದೇವಾಲಯದ ಆವರಣದಲ್ಲಿರುವ ಹಿಂದೂ ಸಭಾ ದೇವಾಲಯದಲ್ಲಿ ಖಲಿಸ್ತಾನಿ ಪರ ಪ್ರತಿಭಟನಾಕಾರರು ಮತ್ತು ಜನರ ನಡುವಿನ ಘರ್ಷಣೆ ನಂತರ ಭಾರತೀಯ ಪಿಂಚಣಿದಾರರಿಗೆ ಪ್ರಮಾಣಪತ್ರಗಳನ್ನು ನೀಡಲು ಯೋಜಿಸಲಾಗಿದ್ದ ಕಾನ್ಸುಲರ್ ಶಿಬಿರಗಳನ್ನು ಭದ್ರತಾ ಕಾರಣಗಳಿಗಾಗಿ ರದ್ದುಗೊಳಿಸಲಾಗಿದೆ. ಖಲಿಸ್ತಾನಿ ಉಗ್ರರ ಇತ್ತೀಚಿನ ಹಿಂಸಾಚಾರದ ನಂತರ ಸೂಕ್ತ ರಕ್ಷಣೆ ನೀಡಲು ಅಧಿಕಾರಿಗಳಿಗೆ ಸಾಧ್ಯವಾಗಲಿಲ್ಲ.

ಹೀಗಾಗಿ ಸುರಕ್ಷತಾ ದೃಷ್ಟಿಯಿಂದ ಕಾನ್ಸುಲೇಟ್ ಕೆಲವು ನಿಗದಿತ ಶಿಬಿರಗಳನ್ನು ರದ್ದುಗೊಳಿಸಲು ನಿರ್ಧರಿಸಿದೆ ಎಂದು ಎಕ್ಸ್ ಖಾತೆಯಲ್ಲಿ ಬರೆದುಕೊಂಡಿದೆ. ಭಾರತೀಯ ದೂತಾವಾಸ ಕಾರ್ಯಕ್ರಮಕ್ಕೆ ಅಡ್ಡಿಪಡಿಸಿದ ನಂತರ ಅರ್ಚಕರನ್ನು ಅಮಾನತುಗೊಳಿಸಲು ಆದೇಶವನ್ನು ಹೊರಡಿಸಲಾಗಿದೆ.

14 ವರ್ಷದ ಬಾಲಕಿ ಜತೆ ಸಂಭೋಗ; ವಜ್ರದ ಕಂಪೆನಿ ಮ್ಯಾನೇಜರ್ ಸಾವು


ಮುಂಬೈ: 14 ವರ್ಷದ ಬಾಲಕಿಯ ಜತೆ ಸಂಭೋಗ ನಡೆಸುತ್ತಿರುವಾಗಲೇ ವಜ್ರದ ಕಂಪನಿಯ ಮ್ಯಾನೇಜರ್ ಸಾವನ್ನಪ್ಪಿರುವ ವಿಲಕ್ಷಣ ಘಟನೆ ಮಹಾರಾಷ್ಟ್ರದಲ್ಲಿ ವರದಿಯಾಗಿದೆ.



ಸೂರತ್‌ನ ಡೈಮಂಡ್ ಫ್ಯಾಕ್ಟರಿಯಲ್ಲಿ ಮ್ಯಾನೇಜರ್ ಆಗಿ ಕೆಲಸ ಮಾಡುತ್ತಿದ್ದ ವ್ಯಕ್ತಿಯೊಬ್ಬ 14ರ ಹರೆಯದ ಬಾಲಕಿಯ ಜೊತೆ ಹೋಟೆಲ್ ರೂಮ್‌ನಲ್ಲಿ ಬಲವಂತವಾಗಿ ದೈಹಿಕ ಸಂಪರ್ಕ ಬೆಳೆಸಿದ ನಂತರ ಹಠಾತ್ ಸಾವನ್ನಪ್ಪಿದ್ದಾನೆ. ಗುಜರಾತ್ ಮೂಲದ ವ್ಯಕ್ತಿಯೊಬ್ಬ 14 ವರ್ಷದ ಬಾಲಕಿಯನ್ನು ಮುಂಬೈಗೆ ಕರೆತಂದು ಹೋಟೆಲ್ ರೂಮಿನಲ್ಲಿ ಆಕೆ ಜೊತೆ ಬಲವಂತವಾಗಿ ದೈಹಿಕ ಸಂಪರ್ಕ ಬೆಳೆಸಿದ್ದಾಗ ಆತ ಹಠಾತ್ ಸಾವನ್ನಪ್ಪಿದ್ದು, ಆತನ ಸಾವಿಗೆ ಹೃದಯಾಘಾತ ಮತ್ತು ಅತಿಯಾದ ವಯಾಗ್ರ ಕಾರಣ ಎನ್ನಲಾಗಿದೆ. ಪೊಲೀಸ್ ಮೂಲಗಳ ಪ್ರಕಾರ ಸೂರತ್‌ನ ಡೈಮಂಡ್ ಫ್ಯಾಕ್ಟರಿಯಲ್ಲಿ ಮ್ಯಾನೇಜರ್ ಆಗಿದ್ದ 41 ವರ್ಷದ ಈ ವ್ಯಕ್ತಿ ಬಾಲಕಿಯ ಕುಟುಂಬಕ್ಕೆ ಆರ್ಥಿಕವಾಗಿ ಸಹಾಯ ಮಾಡುತ್ತಿದ್ದ. ಅಲ್ಲದೆ ಬಾಲಕಿಗೂ ವಜ್ರದ ಫ್ಯಾಕ್ಟರಿಯಲ್ಲಿಯೇ ಕೆಲಸ ಕೊಟ್ಟಿದ್ದನು. ಬಾಲಕಿ ಕುಟುಂಬದೊಂದಿಗೆ ಉತ್ತಮ ಸಂಬಂಧ ಹೊಂದಿದ್ದ ಆತ ಹಣದ ಸಹಾಯ ಮಾಡುತ್ತಿದ್ದನು. ಅಲ್ಲದೆ ಅವರು ಆತನ ಮೇಲಿನ ನಂಬಿಕೆಯಿಂದ ಮಗಳನ್ನು ಆತನೊಂದಿಗೆ ಕೆಲಸದ ನಿಮಿತ್ತ ಕಳುಹಿಸಿಕೊಡುತ್ತಿದ್ದರು.

ಫಲಿತಾಂಶ ಒಪ್ಪಿಕೊಳ್ಳುತ್ತೇವೆ ಆದರೆ, ಚುನಾವಣೆ ವೇಳೆ ಕಿಚ್ಚು ಹೊತ್ತಿಸಿದ ಹೋರಾಟ ಮುಂದುವರಿಸುತ್ತೇನೆ

ವಾಷಿಂಗ್ಟನ್: ನಮ್ಮ ದೇಶದ ಸಂವಿಧಾನಕ್ಕೆ ನಾವು ಬದ್ಧರಾಗಿದ್ದೇವೆ. ಹಾಗಾಗಿ ಚುನಾವಣೆ ಫಲಿತಾಂಶವನ್ನು ಒಪ್ಪಿಕೊಳ್ಳುತ್ತೇವೆ. ಆದರೆ, ಚುನಾವಣೆ ಸಂದರ್ಭದಲ್ಲಿ ಕಿಚ್ಚು ಹೊತ್ತಿಸಿದ ಹೋರಾಟವನ್ನು ಮುಂದುವರಿಸುತ್ತೇನೆ. ಪ್ರಜಾಪ್ರಭುತ್ವ, ಕಾನೂನು ಮತ್ತು ನ್ಯಾಯಕ್ಕಾಗಿ ಹೋರಾಟ ಮುಂದುವರಿಯಲಿದೆ ಎಂದು ಡೆಮಾಕ್ರಟಿಕ್ ಪಕ್ಷದ ಪ್ರತಿಸ್ಪರ್ಧಿ ಕಮಲಾ ಹ್ಯಾರಿಸ್ ಹೇಳಿದ್ದಾರೆ. ಅಮೆರಿಕಾ ಅಧ್ಯಕ್ಷೀಯ ಚುನಾವಣೆ ಫಲಿತಾಂಶ ಬೆನ್ನಲ್ಲೇ ಹಾರ್ವರ್ಡ್ ವಿಶ್ವವಿದ್ಯಾಲಯದ ಆವರಣದಲ್ಲಿ ಬೆಂಬಲಿಗರನ್ನುದ್ದೇಶಿಸಿ ಭಾಷಣ ಮಾಡಿದ ಅವರು, ಮೊದಲಿಗೆ ಚುನಾವಣೆಯಲ್ಲಿ ಗೆಲುವು ಸಾಧಿಸಿರುವ ರಿಪಬ್ಲಿಕನ್ ಪಕ್ಷದ ಅಭ್ಯರ್ಥಿ ಡೊನಾಲ್ಡ್ ಟ್ರಂಪ್ ಅವರಿಗೆ ಅಭಿನಂದನೆಗಳನ್ನು ಸಲ್ಲಿಸಿದರು.



ಚುನಾವಣಾ ಫಲಿತಾಂಶವನ್ನು ನಾವು ಒಪ್ಪಿಕೊಳ್ಳಲೇಬೇಕು. ನಿಮ್ಮೆಲ್ಲರ ಬೆಂಬಲಕ್ಕೆ, ನನ್ನ ಮೇಲೆ ಇಟ್ಟಿರುವ ನಂಬಿಕೆಗೆ ಆಭಾರಿಯಾಗಿದ್ದೇನೆ. ಇಂದು ಮುಂಜಾನೆ ಡೊನಾಲ್ಡ್ ಟ್ರಂಪ್ ಅವರೊಂದಿಗೆ ನಾನು ಮಾತುಕತೆ ನಡೆಸಿದ್ದು, ಅಮೆರಿಕ ಅಧ್ಯಕ್ಷೀಯ ಚುನಾವಣೆಯಲ್ಲಿ ಗೆಲುವಿಗಾಗಿ ಅಭಿನಂದನೆಗಳನ್ನು ಸಲ್ಲಿಸಿದ್ದೇನೆ ಎಂದರು.

ಸಲ್ಮಾನ್ ಖಾನ್ ಬೆನ್ನಲ್ಲೇ ಈಗ ಶಾರುಖ್‌ಗೂ ಬೆದರಿಕೆ

ಮುಂಬೈ: ಬಾಲಿವುಡ್ ನಟ ಸಲ್ಮಾನ್ ಖಾನ್ ಬಳಿಕ ಶಾರುಖ್‌ಖಾನ್‌ಗೆ ಕೊಲೆ ಬೆದರಿಕೆಯೊಡ್ಡಿರುವ ಪ್ರಕರಣ ವರದಿಯಾಗಿದ್ದು, 50 ಲಕ್ಷ ರೂ. ಕೊಡದಿದ್ದರೆ ಕೊಲ್ಲುವುದಾಗಿ ಬೆದರಿಕೆ ಹಾಕಲಾಗಿದೆ. ಶಾರುಖ್ ಖಾನ್ ವೈಯಕ್ತಿಕ ಮೊಬೈಲ್‌ಗೆ ಬೆದರಿಕೆ ಕರೆ ಬಂದಿದ್ದು, 50 ಲಕ್ಷ ರೂ. ಕೊಡದಿದ್ದರೆ ಕೊಲ್ಲುವುದಾಗಿ ಬೆದರಿಕೆ ಹಾಕಿದ್ದಾರೆ.



ಬೆದರಿಕೆ ಕರೆ ಬೆನ್ನಲ್ಲೇ ನಟ ಶಾರುಖ್ ಖಾನ್ ತಂಡ ಬಾಂದ್ರಾ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದು, ಪ್ರಕರಣ ದಾಖಲಿಸಿಕೊಂಡಿರುವ ಬಾಂದ್ರಾ ಪೊಲೀಸರು ತನಿಖೆ ನಡೆಸಿದ್ದಾರೆ. ನ.5 ಮುಂಬೈನ ಬಾಂದ್ರಾ ಪೊಲೀಸ್ ಠಾಣೆಯಲ್ಲಿ ಶಾರುಖ್ ಖಾನ್‌ಗೆ ಬೆದರಿಕೆಯ ದೂರು ದಾಖಲಾಗಿದೆ. ಬಾಂದ್ರಾ ಪೊಲೀಸ್ ಠಾಣೆಯಲ್ಲಿ BNS ಕಾಯಿದೆಯ ಸೆಕ್ಷನ್ 308(4) ಮತ್ತು 351(3)(4) ಅಡಿಯಲ್ಲಿ ಪ್ರಕರಣ ದಾಖಲಿಸಲಾಗಿದೆ. ಇನ್ನು ಈ ಬೆದರಿಕೆ ಕರೆ ಮಾಡಿರುವ ಮೊಬೈಲ್ ಲೊಕೇಷನ್ ಚತ್ತೀಸ್‌ಘಡದಲ್ಲಿ ಪತ್ತೆಯಾಗಿದೆ. ಶಾರುಖ್‌ಗೆ ಬೆದರಿಕೆ ಬಂದ ಫೋನ್ ಫೈಜಾನ್ ಹೆಸರಿನಲ್ಲಿ ನೋಂದಾಯಿಸಲ್ಪಟ್ಟಿದೆ ಮತ್ತು ಆತನ ಕೊನೆಯ ಸ್ಥಳ ರಾಯ್‌ಪುರದಲ್ಲಿ ಲೊಕೇಷನ್ ಪತ್ತೆಯಾಗಿದೆ ಎಂದು ತಿಳಿದುಬಂದಿದೆ.


ಹುಟ್ಟಿದ ಕೆಲವೇ ಗಂಟೆಯಲ್ಲಿ ಫೇಸ್‌ಬುಕ್ ಮೂಲಕ ಮಗು ಮಾರಾಟ ಮಾಡಲು ಯತ್ನಿಸಿದ ಮಹಿಳೆ

ಅಮೆರಿಕಾ: ಹೆರಿಗೆಯಾದ ಕೆಲವೇ ಗಂಟೆಗಳಲ್ಲಿ ಮಹಿಳೆಯೊಬ್ಬಳು ತನ್ನ ನವಜಾತ ಶಿಶುವನ್ನು ಮಾರಾಟ ಮಾಡಲು ಯತ್ನಿಸಿರುವ ಘಟನೆ ಅಮೆರಿಕದ ಟೆಕ್ಸಾಸ್‌ನಲ್ಲಿ ನಡೆದಿದೆ. ಮಹಿಳೆ ತನ್ನ ಮಗುವಿನ ಫೋಟೋವನ್ನು ಫೇಸ್‌ಬುಕ್‌ನಲ್ಲಿ ಹಂಚಿಕೊಂಡು ಮಾರಾಟಕ್ಕೆ ಮುಂದಾಗಿದ್ದು, ವಿಷಯ ತಿಳಿದ ಪೊಲೀಸರು ಮಹಿಳೆಯನ್ನು ಬಂಧಿಸಿದ್ದಾರೆ. ಜುನಿಪರ್ ಬ್ರೈಸನ್(21) ಮಗುವಿನ ಫೋಟೋವನ್ನು ಫೇಸ್‌ಬುಕ್‌ನಲ್ಲಿ ಪೋಸ್ಟ್ ಮಾಡಿ, ಮಗು ದತ್ತು ಪಡೆಯಲು ಬಯಸುವ ದಂಪತಿಗಳ ಗುಂಪಿನಲ್ಲಿ ಹಂಚಿಕೊಂಡಿದ್ದಾರೆ. ಪ್ರಾರಂಭದಲ್ಲಿ ಯಾವುದೇ ಹಣಕ್ಕೆ ಬೇಡಿಕೆ ಇಡದ ಈ ಮಹಿಳೆ ಬಳಿಕ ಸಾಕಷ್ಟು ದಂಪತಿ ದತ್ತು ಪಡೆಯಲು ಮುಂದೆ ಬಂದಾಗ ಹಣದ ಬೇಡಿಕೆ ಇಟ್ಟಿದ್ದಾಳೆ.

ಹಣಕಾಸಿನ ತೊಂದರೆಗಳಿಂದ ನಾನು ನನ್ನ ಮಗುವನ್ನು ಮಾರಾಟ ಮಾಡಲು ಮುಂದಾಗಿರುವುದಾಗಿ ಜುನಿಪರ್ ಹೇಳಿಕೊಂಡಿದ್ದಾಳೆ. 150 ಡಾಲರ್ ಅಂದರೆ ಸುಮಾರು 12 ಸಾವಿರ ರೂ.ಗಳಿಗೆ ಬೇಡಿಕೆ ಇಟ್ಟಿದ್ದಾಳೆ. ಘಟನೆಯ ಬಗ್ಗೆ ತಿಳಿದ ಪೊಲೀಸರು ಮಗುವನ್ನು ತನ್ನ ವಶಕ್ಕೆ ಪಡೆದುಕೊಂಡಿದ್ದಾರೆ. ತನಿಖೆಯ ನಂತರ ಪೊಲೀಸರು ಮಹಿಳೆಯನ್ನು ಬಂಧಿಸಿದ್ದಾರೆ.

ಮಡಿಕೇರಿಯ ರಾಣಿಪೇಟೆ, ಮಖಾನ್ ಗಲ್ಲಿಯ ಮುಸ್ಲಿಂ ಖಬರಸ್ಥಾನ್ ಸುತ್ತಮುತ್ತ

16 ನಿವಾಸಿಗಳಿಗೆ ವಕ್ಫ್ ಬೋರ್ಡ್ ನೋಟಿಸ್


IN THE COURT OF THE ENQUIRY OFFICER
UNDER SECTION 54 OF THE WAQF ACT, 1995
KARNATAKA STATE BOARD OF AUQAF

Case No. ENQ/202/KDL/2019 Date: 10.09.2024

BETWEEN: AND:
Muslim Khabrasthan Taluk, Madikeri, Kodagu District. (Petitioner)
R1. Sri. Usha Belliyappa & others (Respondent)

NOTICE

The enquiry pertaining to above case has been fixed on Thursday, the 24.10.2024 at 3:00 p.m., at the Court Hall of the Karnataka State Board of Auqaf, No.5, Cunningham Road, Bengaluru-52.

Therefore you are hereby directed to appear in person or through an Advocate duly appointed and instructed before the Enquiry Officer, Karnataka State Board of Auqaf, Bengaluru with relevant documents on the above date and time, failing which the enquiry will be continued in your absence and order will be passed on available material on record.

BY ORDER OF THE E.O.
Chief Administrative Officer

To:
R1. Sri. Usha Belliyappa
R2. Sri. S.K. Appaiya

ಮಡಿಕೇರಿ, ನ.7–ನಗರದ ರಾಣಿಪೇಟೆ ಮತ್ತು ಮಖಾನ್ ಗಲ್ಲಿಯ ಮುಸ್ಲಿಂ ಖಬರಸ್ಥಾನ್ ಸುತ್ತಮುತ್ತಲಿನ 16 ನಿವಾಸಿಗಳಿಗೆ ರಾಜ್ಯ ವಕ್ಫ್ ಬೋರ್ಡ್ ನೋಟಿಸ್ ನೀಡಿದ್ದು, ಜಾಗದ ದಾಖಲಾತಿ ಹಾಜರುಪಡಿಸಲು ಸೂಚಿಸಿದೆ.

ಈ 16 ನಿವಾಸಿಗಳ ಪೈಕಿ 11 ಮಂದಿ ಹಿಂದೂ ಸಮುದಾಯಕ್ಕೆ ಸೇರಿದವರಾಗಿದ್ದರೆ, ಉಳಿದ 5 ಮಂದಿ ಮುಸ್ಲಿಂ ಸಮುದಾಯದವರಾಗಿದ್ದು, ಇವರ ವಿರುದ್ಧ ಖಬರಸ್ಥಾನ ಒತ್ತುವರಿ ಮಾಡಿರುವ ಬಗ್ಗೆ ನೋಟಿಸ್‌ನಲ್ಲಿ ಉಲ್ಲೇಖಿಸಲಾಗಿದೆ. ಅ.10ರಂದು ನೋಟಿಸ್ ನೀಡಿರುವ ವಕ್ಫ್ ಬೋರ್ಡ್ ಅ.24ರಂದು ಮಧ್ಯಾಹ್ನ 3 ಗಂಟೆಗೆ ಬೆಂಗಳೂರಿನ ಕನ್ನಿಂಗ್ ಹ್ಯಾಮ್ ರಸ್ತೆಯಲ್ಲಿರುವ ರಾಜ್ಯ ವಕ್ಫ್ ಬೋರ್ಡ್‌ನಲ್ಲಿ ಹಾಜರಿರಬೇಕೆಂದು ಸೂಚಿಸಲಾಗಿದೆ.

ಅಲ್ಲಿನ ನಿವಾಸಿಗಳ ಪ್ರಕಾರ 40 ವರ್ಷಗಳಿಂದ ಇಲ್ಲಿಯೇ ಕುಟುಂಬಗಳು ವಾಸಿಸುತ್ತಿದ್ದು, 2019ರ ಬಳಿಕ ವಕ್ಫ್ ಬೋರ್ಡ್‌ನಿಂದ ನೋಟಿಸ್ ಬರಲು ಆರಂಭವಾಗಿದೆ. ನಮ್ಮ ದಾಖಲಾತಿಗಳ ಆರ್‌ಟಿಸಿ ಕಲಂನಲ್ಲಿ ಮನೆ ಮಾಲೀಕರ ಹೆಸರು ನಮೂದಾಗಿದೆ. ಹೀಗಿದ್ದರೂ 2019ರಿಂದ ವಕ್ಫ್ ಬೋರ್ಡ್ ನೋಟಿಸ್ ನೀಡುತ್ತಿದೆ ಎಂದು ಆರೋಪಿಸಿದ್ದಾರೆ. ಮನೆ, ನೀರಿನ ಕಂದಾಯ ಸಹಿತ ಎಲ್ಲಾ ತೆರಿಗೆಗಳನ್ನು ನಗರಸಭೆಗೆ ಪಾವತಿಸುತ್ತಿದ್ದೇವೆ. ಆದರೆ, ನಾವ್ಯಾರು ಯಾರು ಕೂಡ ವಕ್ಫ್ ಬೋರ್ಡ್ ವಿಚಾರಣೆಗೆ ಹಾಜರಾಗಿಲ್ಲ. ಅದರ ಅಗತ್ಯವೂ ನಮಗಿಲ್ಲ ಎಂದು ನಿವಾಸಿಗಳು ಹೇಳಿದ್ದಾರೆ.

ವಕ್ಫ್ ಆಸ್ತಿ ಅತಿಕ್ರಮಿಸಿದ್ದೀರಿ, ಮನೆ ಖಾಲಿ ಮಾಡಿ

ಕುಶಾಲನಗರದಲ್ಲಿ ಕೊಡವ ಮಹಿಳೆಗೆ ಬೆದರಿಕೆ

ಕುಶಾಲನಗರ, ನ.7–ಇದ್ದಕ್ಕಿದ್ದಂತೆ ಮಹಿಳೆಯೊಬ್ಬರ ಮನೆಯ ಆವರಣಕ್ಕೆ ಪ್ರವೇಶಿಸಿ ನೀವು ವಕ್ಫ್ ಆಸ್ತಿಯನ್ನು ಅತಿಕ್ರಮಿಸಿಕೊಂಡು ಮನೆ ಕಟ್ಟಿದೀರಿ, ತೆರವುಗೊಳಿಸಿ ಎಂದು ಕೆಲವರು ಬೆದರಿಕೆ ಒಡ್ಡಿದ ಘಟನೆ ಕೊಡಗು ಜಿಲ್ಲೆಯ ಕುಶಾಲನಗರ ತಾಲೂಕಿನ ಮುಳ್ಳುಸೋಗೆ ಗ್ರಾಮದಲ್ಲಿ ನಡೆದಿದೆ.

ಈ ಕುರಿತು ಕೊಡಗು ಎಸ್ಪಿಗೆ ಗ್ರಾಮದ ಮಹಿಳೆ ರೇಣುಕಾ ಉತ್ತಪ್ಪ ದೂರು ನೀಡಿದ್ದಾರೆ. ತಾವು ತಮ್ಮ ಕುಶಾಲನಗರದ ಮುಳ್ಳುಸೋಗೆ ಮನೆಯಲ್ಲಿ ಒಬ್ಬರೇ ಇರುವಾಗ ಇಬ್ಬರು ಬಂದು ಬೆದರಿಕೆ ಒಡ್ಡಿದ್ದಾರೆ ಎಂದು ದೂರಿನಲ್ಲಿ ತಿಳಿಸಿದ್ದಾರೆ.

ದೂರಿನಲ್ಲಿ ಏನಿದೆ?: ಬೆಂಗಳೂರಿನಲ್ಲಿ ಖಾಸಗಿ ಕಂಪನಿಯಲ್ಲಿ ಉದ್ಯೋಗ ಮಾಡಿಕೊಂಡಿರುವ ರೇಣುಕಾ ಉತ್ತಪ್ಪ ಅವರು ಮುಳ್ಳುಸೋಗೆಯಲ್ಲಿ ಪಿತ್ರಾರ್ಜಿತ ಆಸ್ತಿ ಹೊಂದಿದ್ದಾರೆ. ಕಳೆದ ಅ.25ರಂದು ಬೆಳಗ್ಗೆ 11 ಗಂಟೆಗೆ ತಾವೊಬ್ಬರೇ ಮನೆಯಲ್ಲಿ ಇರುವಾಗ ಅನ್ಯ ಸಮುದಾಯಕ್ಕೆ ಸೇರಿದ ಇಬ್ಬರು ವ್ಯಕ್ತಿಗಳು ಮನೆಯ ಆವರಣಕ್ಕೆ ಪ್ರವೇಶಿಸಿ, ಇದು ವಕ್ಫ್ ಆಸ್ತಿ ತಕ್ಷಣವೇ ಮನೆಯನ್ನು ತೆರವುಗೊಳಿಸಿ ವಕ್ಫ್‌ಗೆ ಒಪ್ಪಿಸುವಂತೆ ಬೆದರಿಸಿದ್ದಾರೆ.

ಆಗ ತಾವು ನನ್ನ ತಂದೆ 1984ರಲ್ಲಿ ಮುಳ್ಳುಸೋಗೆಯಲ್ಲಿ ಸರ್ವೆ ನಂಬರ್ 79/2ರಲ್ಲಿ 36 ಸೆಂಟ್ಸ್ ಜಮೀನನ್ನು ಮಾನ್ಯಪಂಡ ಬೋಪಣ್ಣ ಎಂಬುವವರಿಂದ ಖರೀದಿಸಿದ್ದರು. ಅಂದಿನಿಂದ ನಾವು ಇದೇ ಆಸ್ತಿಯಲ್ಲಿ ವಾಸಿಸುತ್ತಿದ್ದೇವೆ. ಇತ್ತೀಚೆಗೆ ನನ್ನ ಪೋಷಕರು ನಿಧನರಾದರು. ನಂತರ ನಾನು ಈ ಆಸ್ತಿಯನ್ನು ಪಿತ್ರಾರ್ಜಿತವಾಗಿ ಪಡೆದಿದ್ದೇನೆ,


ಮುಳ್ಳುಸೋಗೆಯ ರೇಣುಕಾ ಉತ್ತಪ್ಪ ಅವರ ಮನೆ.

ಏಕೆ ತೆರವುಗೊಳಿಸಬೇಕು? ನಿಮ್ಮ ಬಳಿ ಯಾವುದಾದರೂ ನ್ಯಾಯಾಲಯದ ನೋಟಿಸ್ ಅಥವಾ ವಕ್ಫ್‌ಗೆ ಸೇರಿರುವುದಕ್ಕೆ ದಾಖಲೆ ಇದ್ದರೆ ಕೊಡಿ ಎಂದು ಪ್ರಶ್ನಿಸಿದೆ. ಆಗ ಅವರು ನೀವು ಮನೆ ಖಾಲಿ ಮಾಡದಿದ್ದರೆ ಹೊರಗೆ 15 ಜನರು ಇದ್ದಾರೆ. ಅವರನ್ನು ಕರೆಯುವುದಾಗಿ ಬೆದರಿಸಿದರು. ಇದರಿಂದ ಕೋಪಗೊಂಡ ತಾವು ಕೂಡಲೇ ಮನೆಯ ಆವರಣದಿಂದ ಹೊರ ಹೋಗುವಂತೆ ಗದರಿಸಿದ್ದಾಗಿಯೂ, ಆಗ ಅವರು ನಮಗೆ ಷರಿಯಾ ಕೋರ್ಟ್ ಇದೆ. ನೀವು ಬೆಂಗಳೂರಿನ ಷರಿಯಾ ಕೋರ್ಟ್‌ಗೆ ಬರಬೇಕಾಗುತ್ತದೆ. ಅಲ್ಲಿ ನಿಮ್ಮ ಮಾಲೀಕತ್ವ ಸಾಬೀತುಪಡಿಸಬೇಕು ಎಂದು ಬೆದರಿಸಿ ಸ್ಥಳದಿಂದ ತೆರಳಿದ್ದಾರೆ ಎಂದು ಮಹಿಳೆ ದೂರಿನಲ್ಲಿ ತಿಳಿಸಿದ್ದಾರೆ. ಘಟನೆ ಕುರಿತು ಕೊಡವ ಸಮಾಜದ ಒಕ್ಕೂಟಗಳ ಅಧ್ಯಕ್ಷರಿಗೂ ಸೂಕ್ತ ನೆರವು ನೀಡುವಂತೆ ಕೋರಿ ದೂರು ಸಲ್ಲಿಸಿದ್ದಾರೆ. ಕುಶಾಲನಗರ ಪೊಲೀಸರು ತನಿಖೆ ನಡೆಸುತಿದ್ದು, ಕಾನೂನು ಕ್ರಮ ಕೈಗೊಳ್ಳಲಿದ್ದಾರೆ ಎಂದು ತಿಳಿದುಬಂದಿದೆ.

ವಕ್ಫ್ ಬೋರ್ಡ್ ವಿರೋಧಿಸಿ ಬಿಜೆಪಿ ಪ್ರತಿಭಟನೆ


ವಕ್ಫ್ ಬೋರ್ಡ್ ಕಾಯ್ದೆ ವಿರೋಧಿಸಿ ಬಿಜೆಪಿ ಕಾರ್ಯಕರ್ತರು ಕುಶಾಲನಗರದಲ್ಲಿ ಪ್ರತಿಭಟನೆ ನಡೆಸಿದರು.

ಕುಶಾಲನಗರ, ನ.7–ರಾಜ್ಯ ಸರ್ಕಾರ ಹಾಗೂ ವಕ್ಫ್ ಬೋರ್ಡ್ ಕಾಯ್ದೆ ವಿರೋಧಿಸಿ ಬಿಜೆಪಿ ಕಾರ್ಯಕರ್ತರು ಪಟ್ಟಣದಲ್ಲಿ ಗುರುವಾರ ಪ್ರತಿಭಟನೆ ನಡೆಸಿದರು.

ಕಾರ್ಯಪ್ಪ ವೃತ್ತದಲ್ಲಿ ಜಮಾಯಿಸಿದ ಕಾರ್ಯಕರ್ತರು, ರಾಜ್ಯ ಸರ್ಕಾರ, ವಕ್ಫ್ ಸಚಿವ ಜಮೀರ್ ಅಹಮ್ಮದ್ ಖಾನ್ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. ರೈತರು, ಬಡವರ ಹಾಗೂ ಮಠಗಳ ಭೂಮಿ ಕಬಳಿಸಲು ವಕ್ಫ್ ಬೋರ್ಡ್ ಹುನ್ನಾರ ನಡೆಸುತ್ತಿದೆ. ಕಾಂಗ್ರೆಸ್ ಮುಸ್ಲಿಂ ಓಲೈಕೆ ರಾಜಕಾರಣಕ್ಕೆ ಮುಂದಾಗಿದೆ. ವಕ್ಫ್ ಬೋರ್ಡ್ ಕಾಯ್ದೆ ರದ್ದುಪಡಿಸಬೇಕು ಎಂದು ಒತ್ತಾಯಿಸಿ, ಮಾನವ ಸರಪಳಿ ನಿರ್ಮಿಸಿ ಸರ್ಕಾರದ ವಿರುದ್ಧ ಘೋಷಣೆ ಕೂಗಿದರು.

ಮಾಜಿ ಶಾಸಕ ಎಂ.ಪಿ.ಅಪ್ಪಚ್ಚು ರಂಜನ್ ಮಾತನಾಡಿ, ಬಡವರು, ರೈತರು ಹಾಗೂ ಮಠಗಳ ಜಮೀನುಗಳ ದಾಖಲೆಯಲ್ಲಿ ವಕ್ಫ್ ಹೆಸರು ದಾಖಲಿಸುವ ಕೆಲಸ ಮಾಡುತ್ತಿಲಾಗುತ್ತಿದೆ. ಮೊದಲು ಬೆಂಗಳೂರಿನ ಐಷಾರಾಮಿ ಹೋಟೆಲ್‌ಗಳನ್ನು ಬಿಡಿಸಿ, ಸರ್ಕಾರಕ್ಕೆ ಕೊಡುವ ಕೆಲಸ ಮಾಡಲಿ ಎಂದು ಸವಾಲು ಹಾಕಿದರು.

ಮಡಿಕೇರಿಯಲ್ಲಿ 16 ಮಂದಿಗೆ ವಕ್ಫ್ ನೋಟಿಸ್ ನೀಡಲಾಗಿದೆ. ಸೋಮವಾರಪೇಟೆ 11 ಎಕರೆ ವಕ್ಫ್ ಹೆಸರಿಗೆ ಆರ್‌ಟಿಸಿಯಲ್ಲಿ ದಾಖಲಿಸುವ ಕೆಲಸವನ್ನು ಅಧಿಕಾರಿಗಳು ಮಾಡಿದ್ದಾರೆ. ಆದ್ದರಿಂದ ಸರ್ಕಾರ ಕೂಡಲೇ ವಕ್ಫ್ ಬೋರ್ಡ್ ಕಾಯ್ದೆ ಹಿಂಪಡೆಯಬೇಕು ಎಂದು ಒತ್ತಾಯಿಸಿದರು.

ಬಿಜೆಪಿ ಜಿಲ್ಲಾಧ್ಯಕ್ಷ ರವಿ ಕಾಳಪ್ಪ ಮಾತನಾಡಿ, ಸರ್ಕಾರ ರಾಜ್ಯದ ಅಶಾಂತಿ ವಾತಾವರಣ ಸೃಷ್ಟಿಸುವ ಕೆಲಸ ಮಾಡುತ್ತಿದೆ. ರಾಜ್ಯದಲ್ಲಿ ಸಂವಿಧಾನದ ಅಡಿಯಲ್ಲಿರುವ ಸರ್ಕಾರವೋ, ಅಥವಾ ತೋಘಲಕ್ ಸರ್ಕಾರವೋ. ಸಿಎಂ ಸಿದ್ದರಾಮಯ್ಯ ನೋಟಿಸ್ ಹಿಂಪಡೆಯುವುದಾಗಿ ಹೇಳಿದ್ದಾರೆ. ಆದರೆ, ಶಾಶ್ವತವಾಗಿ ವಾಪಸ್ ಪಡೆಯಬೇಕು. ವಕ್ಫ್ ಬೋರ್ಡ್‌ನಿಂದ ನೋಟಿಸ್ ನೀಡುವುದು, ಬೆದರಿಕೆ ಹಾಕುವುದನ್ನು ಬಿಜೆಪಿ ಸಹಿಸುವುದಿಲ್ಲ. ಇದರ ವಿರುದ್ಧ ಉಗ್ರ ಹೋರಾಟ ನಡೆಸುವುದಾಗಿ ಎಚ್ಚರಿಕೆ ನೀಡಿದರು.

ಪ್ರತಿಭಟನೆಯಲ್ಲಿ ಬಿಜೆಪಿ ನಗರಾಧ್ಯಕ್ಷ ಎಂ.ಎಂ.ಚರಣ್, ಕಾರ್ಯದರ್ಶಿ ಹೆಚ್.ಎಂ. ಮಧುಸೂದನ್, ಮಂಡಲಾಧ್ಯಕ್ಷ ಗೌತಮ್, ಜಿಲ್ಲಾ ಯುವ ಉಪಾಧ್ಯಕ್ಷ ನವನೀತ್, ತಾಲೂಕು ಉಪಾಧ್ಯಕ್ಷ ಎಂ.ಡಿ.ಕೃಷ್ಣಪ್ಪ, ಯುವ ಮೋರ್ಚಾ ಅಧ್ಯಕ್ಷ ರಮನಾಥನ್, ಪ್ರಧಾನ ಕಾರ್ಯದರ್ಶಿ ಸಚಿನ್, ಪುರಸಭೆ ಸದಸ್ಯ ಡಿ.ಕೆ.ತಿಮ್ಮಪ್ಪ, ಮುಖಂಡರಾದ ಜಿ.ಎಲ್.ನಾಗರಾಜು, ಎಂ.ವಿ.ನಾರಾಯಣ, ಎಂ.ಎನ್.ಕುಮಾರಪ್ಪ, ಎಂ.ಎಸ್.ಚಿಣ್ಣಪ್ಪ, ಶಿವಕುಮಾರ್, ಗಣಪತಿ, ಕೆ.ವರದ, ಕೆ.ಜಿ. ಮನು, ಮಹೇಶ್ ಪ್ರವೀಣ್, ವೈಶಾಖ್, ಮಣಿ, ಸುಮನ್ ಶಶಿಕುಮಾರ್, ನಿತ್ಯಾನಂದ, ಗೀತಾ ಧರ್ಮಪ್ಪ, ಗೀತಾಂಜಲಿ ಮತ್ತಿತರರು ಪಾಲ್ಗೊಂಡಿದ್ದರು.

ಅರೆಕಾಡು ಚಾಮುಂಡೇಶ್ವರಿ ದೇವಾಲಯ ವಾರ್ಷಿಕೋತ್ಸವ


ಅರೆಕಾಡು ಐದ್ರೋಡಮ್ಮ ಚಾಮುಂಡೇಶ್ವರಿ ದೇವಾಲಯದಲ್ಲಿ ಶಾಸಕ ಡಾ.ಮಂತರ್‌ಗೌಡ ಪೂಜೆ ಸಲ್ಲಿಸಿದರು.

ಸಿದ್ದಾಪುರ, ನ.7–ಮಡಿಕೇರಿ ತಾಲೂಕಿನ ಪ್ರಸಿದ್ಧ ಅರೆಕಾಡು ಐದ್ರೋಡಮ್ಮ ಶ್ರೀ ಚಾಮುಂಡೇಶ್ವರಿ ದೇವಾಲಯದಲ್ಲಿ 16ನೇ ವಾರ್ಷಿಕೋತ್ಸವ ನೆರವೇರಿತು.

ವಿವಿಧ ಜಿಲ್ಲೆಗಳ ಸಾವಿರಾರು ಭಕ್ತರು ಪೂಜಾ ಕಾರ್ಯದಲ್ಲಿ ಪಾಲ್ಗೊಂಡಿದ್ದರು. ಬೆಳಗ್ಗಿನಿಂದಲೇ ಅಪಾರ ಸಂಖ್ಯೆಯ ಭಕ್ತರು ದೇವಸ್ಥಾನಕ್ಕೆ ಆಗಮಿಸಿ, ಇಷ್ಟಾರ್ಥ ಆರೈಕೆ ತೀರಿಸುವ ಮೂಲಕ ಪುನೀತರಾದರು. ಇದೇ ವೇಳೆ ಶಾಸಕ ಡಾ.ಮಂತರ್ ಗೌಡ ದೇವಾಲಯಕ್ಕೆ ಭೇಟಿ ನೀಡಿ ಪೂಜಾ ಕಾರ್ಯದಲ್ಲಿ ಪಾಲ್ಗೊಂಡಿದ್ದರು. ಅನ್ನಸಂತರ್ಪಣೆ ನಡೆಯಿತು.

ದೇವಾಲಯ ಅರ್ಚಕ ತಿರುಮಲರಾಜ, ದೇವಾಲಯ ಅಧ್ಯಕ್ಷ ರವಿಕುಮಾರ್, ಸಮಿತಿ ಪ್ರಮುಖರಾದ ಜವರಯ್ಯ, ರಮೇಶ, ಗಣೇಶ, ಪ್ರಸಾದ್, ಜಯಣ್ಣ, ಚಂದ್ರ, ಗ್ರಾಮಸ್ಥರು ಹಾಜರಿದ್ದರು.

ನಿವಾಸಿಗಳಿಗೆ ಸೌಲಭ್ಯ ಒದಗಿಸಲು ಗ್ರಾಮಸಭೆ ಮಹತ್ವ


ಬೇಟೋಳಿ ಗ್ರಾಪಂನ ಗ್ರಾಮಸಭೆಯಲ್ಲಿ ನೋಡಲ್ ಅಧಿಕಾರಿ ಡಾ.ರವಿ ಮಾತನಾಡಿದರು.

ವಿರಾಜಪೇಟೆ, ನ.7–ನಿವಾಸಿಗಳಿಗೆ ಮೂಲಸೌಲಭ್ಯ ಒದಗಿಸಲು ಮತ್ತು ಸಮಸ್ಯೆಗಳಿಗೆ ಪರಿಹಾರ ದೊರಕಲು ಗ್ರಾಮ ಪಂಚಾಯಿತಿ ಗ್ರಾಮಸಭೆ ಮಹತ್ವವಾಗಿದೆ ಎಂದು ನೋಡಲ್ ಅಧಿಕಾರಿಯಾದ ಕ್ಷೇತ್ರ ಶಿಕ್ಷಣಾಧಿಕಾರಿ ಡಾ.ರವಿ ಹೇಳಿದರು.

ಸಮೀಪದ ಬೇಟೋಳಿ ಗ್ರಾಪಂ ವ್ಯಾಪ್ತಿಯ ರಾಮನಗರದ ಪದುಪಾಡಿ ಶ್ರೀ ಅಯ್ಯಪ್ಪ ಸಭಾ ಭವನದಲ್ಲಿ ಗ್ರಾಪಂ ಅಧ್ಯಕ್ಷ ಅಚ್ಚಪಂಡ ಎಂ.ಬೋಪಣ್ಣ ಅಧ್ಯಕ್ಷತೆಯಲ್ಲಿ ನಡೆದ ಗ್ರಾಮಸಭೆಯಲ್ಲಿ ಮಾತನಾಡಿದ ಅವರು, ಏನ್ನಾದರು ಸಾಧಿಸಲು ಮುಖ್ಯವಾಗಿ ಶಿಕ್ಷಣ ಅವಶ್ಯಕವಾಗಿದೆ. ಆದ್ದರಿಂದ ಗ್ರಾಮೀಣ ಭಾಗದ ಕಡು ಬಡ ಮಕ್ಕಳು ಶಿಕ್ಷಣದಿಂದ ವಂಚಿತರಾಗದಂತೆ ಶಾಲೆ ಬಿಟ್ಟಿರುವ ಮಕ್ಕಳನ್ನು ಪೋಷಕರು ಮರಳಿ ಶಾಲೆಗೆ ಸೇರಿಸಬೇಕು. ಯಾರೂ ಶಿಕ್ಷಣದಿಂದ ವಂಚಿತರಾಗಬಾರದು ಎಂಬುದು ಸರ್ಕಾರದ ನಿರ್ಧಾರ ಎಂದರು.

ಪಶು ಸಂಗೋಪನೆ ಇಲಾಖೆಯ ಡಾ.ರಾಕೇಶ್ ಮಾತನಾಡಿ, ಜಾನುವಾರುಗಳನ್ನು ರೋಗದಿಂದ ಮುಕ್ತಗೊಳಿಸಬೇಕು ಎಂದು ಸರ್ಕಾರದ ತಿಳಿಸಿದೆ. ಆದರೆ, ಇಲಾಖೆಯಲ್ಲಿ ಸಿಬ್ಬಂದಿ ಕೊರತೆ ಇದೆ. ಗ್ರಾಮೀಣ ಜನರಿಗೆ ಹಸು, ಹಂದಿ, ಆಡು, ಕುರಿ ಸಾಗಣಿಕೆಗೆ ಬ್ಯಾಂಕ್‌ಗಳು ಸಬ್ಸಿಡಿ ರೂಪದಲ್ಲಿ ಸಾಲ ನೀಡುತ್ತಿವೆ. ಜನರು ಇದರ ಸದುಪಯೋಗ ಪಡಿಸಿಕೊಳ್ಳುವಂತಾಗಬೇಕು ಎಂದು ಹೇಳಿದರು.

ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಮಣಿ ಮಾತನಾಡಿ, ಉದ್ಯೋಗ ಖಾತ್ರಿ ಯೋಜನೆಯಡಿ ಗ್ರಾಪಂ ವ್ಯಾಪ್ತಿಯ ಎಲ್ಲಾ ತೋಡು, ಕಾಲುವೆಗಳನ್ನು ಹೂಳೆತ್ತುವ ಕಾರ್ಯ ಮಾಡಲಾಗಿದೆ. ಎಲ್ಲಾ ಶಾಲೆಗಳಿಗೂ ಕಾಂಪೌಂಡ್ ನಿರ್ಮಿಸಲಾಗಿದೆ ಎಂದರು.

ಹೆಗ್ಗಳ ಗ್ರಾಮದ ಅಚ್ಚಪಂಡ ಹರೀಶ್ ಮಾತನಾಡಿ, 80 ವರ್ಷಗಳಿಂದ ಗ್ರಾಮಗಳಲ್ಲಿ ವಾಸಿಸುತ್ತಿರುವ ಜನರಿಗೆ ಇತ್ತೀಚೆಗೆ ಅರಣ್ಯಾಧಿಕಾರಿಗಳು ಸೂಕ್ಷ್ಮ ಪ್ರದೇಶವೆಂದು ಹೇಳಿ ನೋಟಿಸ್ ನೀಡುತ್ತಿದ್ದಾರೆ. ಮಾಕುಟ್ಟ ಸೇರಿದಂತೆ 18 ಸಾವಿರ ಎಕರೆ ಅರಣ್ಯ ಇದ್ದು, ಅದರಲ್ಲಿ ಗಿಡ ನೆಡುವುದನ್ನು ಬಿಟ್ಟು ಗ್ರಾಮಗಳ ಜನವಸತಿ ಜಾಗಗಳಿಗೆ ಬಂದು ತೊಂದರೆ ಮಾಡುವುದು ಸರಿಯಲ್ಲ. ಕಾಡಾನೆಗಳು ನಿತ್ಯ ಬೆಳೆ ನಾಶ ಮಾಡುತ್ತಿವೆ. ಅರಣ್ಯ ಇಲಾಖೆ ಏನು? ಮಾಡುತ್ತಿದೆ ಎಂದು ಪ್ರಶ್ನಿಸಿದರು.

ಇದಕ್ಕೆ ಉತ್ತರಿಸಿದ ಉಪ ವಲಯ ಅರಣ್ಯಾಧಿಕಾರಿಗಳಾದ ದೇವಯ್ಯ ಮತ್ತು ನಾರಾಯಣ ಮಾತನಾಡಿ, 1991ರಲ್ಲಿ ಕೇಂದ್ರ ಸರ್ಕಾರದ ಯೋಜನೆಯಡಿ ಈಗ ನೋಟಿಸ್ ನೀಡಲು ಆದೇಶಿಸಲಾಗಿದೆ ಎಂದರು.

ಸಭೆಯಲ್ಲಿ ಗ್ರಾಪಂ ಉಪಾಧ್ಯಕ್ಷೆ ಕೆ.ಹೆಚ್.ಅಲೀಮಾ, ಸದಸ್ಯರಾದ ವೈ.ಎಂ.ಶಾಂತಿ, ಎ.ಎ.ವಸಂತ ಕಟ್ಟಿ, ಪಿ.ಬಿ.ಚಂಗಪ್ಪ, ಎಂ.ಎಂ.ರಜಾಕ್, ಬಿ.ಜೆ.ಯಶೋಧಾ, ಎಂ.ಎಂ.ರಂಜಿತ್, ಸಿ.ಎಸ್.ಸುದೀಶ್, ಪಿ.ಕೆ.ಗೀತಾ, ಪಿ.ಎಂ.ಲಕ್ಷ್ಮಿ, ಕೆ.ಆರ್.ಲತಾ, ಕಂದಾಯ, ಅರಣ್ಯ, ತೋಟಗಾರಿಕೆ, ಸೆಸ್ಕ್, ಪೊಲೀಸ್, ಶಿಕ್ಷಣ, ಆರೋಗ್ಯ ಇಲಾಖೆ ಅಧಿಕಾರಿಗಳು ಹಾಗೂ ಸಿಬ್ಬಂದಿ ಉಪಸ್ಥಿತರಿದ್ದರು.

ಇ–ಶ್ರಮ್ ಕಾರ್ಮಿಕರು ಬಿಪಿಎಲ್‌ಗೆ ಅರ್ಜಿ ಸಲ್ಲಿಸಿ


ಚಾಮರಾಜನಗರ ತಾಲೂಕು ಕಚೇರಿಯ ಆಹಾರ ಶಾಖೆಯಲ್ಲಿ ನಡೆದ ಅಧಿಕಾರಿಗಳ ಜಂಟಿ ಸಭೆಯಲ್ಲಿ ಆಹಾ ಇಲಾಖೆ ನಿರೀಕ್ಷಕ ದಿನಕರ್ ಮಾತನಾಡಿದರು.

ಚಾಮರಾಜನಗರ, ನ.7–ತಾಲೂಕು ವ್ಯಾಪ್ತಿಯಲ್ಲಿ ಇ–ಶ್ರಮ್ ಕಾರ್ಡ್ ಹೊಂದಿರುವ 1017 ಕಾರ್ಮಿಕರು ಇದ್ದು, ಇವರೆಲ್ಲರಿಗೂ ಬಿಪಿಎಲ್ ಕಾರ್ಡ್ ನೀಡಲು ಸುಪ್ರೀಂಕೋರ್ಟ್ ನಿರ್ದೇಶನದಂತೆ ಕ್ರಮ ವಹಿಸಲಾಗಿದೆ ಎಂದು ತಾಲೂಕು ಆಹಾರ ನಿರೀಕ್ಷಕ ದಿನಕರ್ ತಿಳಿಸಿದರು.

ನಗರದ ತಾಲೂಕು ಕಚೇರಿಯ ಆಹಾರ ಶಾಖೆಯಲ್ಲಿ ಕಂದಾಯ, ಆಹಾರ, ಕಾರ್ಮಿಕ ಇಲಾಖೆ ಅಧಿಕಾರಿಗಳ ಸಭೆಯಲ್ಲಿ ಮಾತನಾಡಿದ ಅವರು, ಈಗಾಗಲೇ ತಾಲೂಕಿನ ವಿವಿಧ ಹೋಬಳಿ ವ್ಯಾಪ್ತಿಯಲ್ಲಿ 1017 ಇ–ಶ್ರಮ್ ಕಾರ್ಮಿಕರಿಂದ ಅರ್ಜಿ ಆಹ್ವಾನಿಸಲಾಗಿದೆ. ಇಂತಹ ಕಾರ್ಮಿಕರು ಗ್ರಾಮಒನ್ ಸೇವಾ ಕೇಂದ್ರ ಮೂಲಕ ಆಧಾರ್ ಕಾರ್ಡ್, ಆದಾಯ ಪ್ರಮಾಣ ಪತ್ರ ಲಗತ್ತಿಸಿದೆ ಅರ್ಜಿ ಸಲ್ಲಿಸಿದರೆ, ಅಂತಹವರಿಗೆ ತಕ್ಷಣ ಬಿಪಿಎಲ್ ಪಡಿತರ ಚೀಟಿ ಮಂಜೂರು ಮಾಡಿಕೊಡಲಾಗುವುದು ಎಂದರು.

ಈ ಅಭಿಯಾನ ನ.10ರವರೆಗೆ ನಡೆಯಲಿದ್ದು, ಮೂರು ದಿನ ಆಹಾರ, ಕಂದಾಯ ಹಾಗೂ ಕಾರ್ಮಿಕ ಇಲಾಖೆ ಅಧಿಕಾರಿಗಳು ಹಾಗೂ ಸಿಬ್ಬಂದಿ ಜಂಟಿಯಾಗಿ ಕಾರ್ಯನಿರ್ವಹಿಸಲಿದ್ದಾರೆ. ಆನ್‌ಲೈನ್ ಮೂಲಕ ಬಂದ ಅರ್ಜಿಗಳನ್ನು ಪರಿಶೀಲಿಸಿ, ಬಿಪಿಎಲ್ ಕಾರ್ಡ್‌ಗಳನ್ನು ನೀಡಲಾಗುವುದು. ಈಗಾಗಲೇ ಕಾರ್ಮಿಕರು ಬಿಪಿಎಲ್ ಕಾರ್ಡ್ ಹೊಂದಿದ್ದರೆ, ಅವರ ಪಡಿತರ ನಂಬರ್ ದಾಖಲು ಮಾಡಿಕೊಳ್ಳಲಾಗುವುದು ಎಂದು ತಿಳಿಸಿದರು.

ಇ–ಶ್ರಮ್ ಕಾರ್ಡ್ ಹೊಂದಿರುವ ಅರ್ಹ ಕಾರ್ಮಿಕರಿಗೆ ಬಿಪಿಎಲ್ ಕಾರ್ಡ್ ದೊರೆಯಬೇಕೆಂಬ ಸುಪ್ರೀಂಕೋರ್ಟ್ ಸೂಚನೆ ಮೇರೆಗೆ ರಾಜ್ಯಾದ್ಯಂತ ಮೂರು ಇಲಾಖೆಗಳು ಜಂಟಿಯಾಗಿ ಕಾರ್ಯನಿರ್ವಹಿಸುತ್ತಿವೆ. ಈಗಾಗಲೇ ಇ–ಶ್ರಮ್ ಕಾರ್ಡ್ ಫಲಾನುಭವಿಗಳ ಪಟ್ಟಿಯನ್ನು ತಾಲೂಕು ಹಾಗೂ ಹೋಬಳಿವಾರು ಬಿಡುಗಡೆ ಮಾಡಲಾಗಿದೆ. ಈ ಪಟ್ಟಿಯಲ್ಲಿರುವ ಬಿಪಿಎಲ್ ಕಾರ್ಡ್ ಇಲ್ಲದ ಕಾರ್ಮಿಕರು ಅರ್ಜಿ ಸಲ್ಲಿಸಬೇಕು ಎಂದು ಮಾಹಿತಿ ನೀಡಿದರು.

ಸಭೆಯಲ್ಲಿ ಕಾರ್ಮಿಕ ಇಲಾಖೆ ನಾಗೇಶ್, ಆರ್.ನಾಗರತ್ನ, ಚಿಕ್ಕಣ್ಣ ಇತರರು ಇದ್ದರು.

ಇಂದು ಸಾಂಸ್ಕೃತಿಕ, ಕ್ರೀಡೆ, ವಿವಿಧ ಸಮಿತಿಗಳ ಉದ್ಘಾಟನೆ

ಚಾಮರಾಜನಗರ, ನ.7–ಕಾಲೇಜು ಶಿಕ್ಷಣ ಇಲಾಖೆ ಹಾಗೂ ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜು ಸಂಯುಕ್ತಾಶ್ರಯದಲ್ಲಿ 2024–25ನೇ ಸಾಲಿನ ಸಾಂಸ್ಕೃತಿಕ, ಕ್ರೀಡೆ, ರಾಷ್ಟ್ರೀಯ ಸೇವಾ ಯೋಜನೆ ಹಾಗೂ ವಿವಿಧ ಸಮಿತಿಗಳ ಉದ್ಘಾಟನೆ ನ.8ರಂದು ಬೆಳಗ್ಗೆ 10.30ಕ್ಕೆ ನಗರದ ಜಿಲ್ಲಾಡಳಿತ ಭವನದ ಜೆ.ಹೆಚ್. ಪಟೇಲ್ ಸಭಾಂಗಣದಲ್ಲಿ ನಡೆಯಲಿದೆ.

ಶಾಸಕ ಸಿ.ಪುಟ್ಟರಂಗಶೆಟ್ಟಿ ಉದ್ಘಾಟಿಸಲಿದ್ದು, ಕುದೇರು ಸರ್ಕಾರಿ ಪದವಿ ಕಾಲೇಜಿನ ಪ್ರಾಂಶುಪಾಲ ಪ್ರೊಥಿಯೋಡರ್ ಲೂಥರ್ ಮುಖ್ಯ ಭಾಷಣ ಮಾಡಲಿದ್ದಾರೆ. ಚಾಮರಾಜನಗರ ಸರ್ಕಾರಿ ಮಹಿಳಾ ಪದವಿ ಕಾಲೇಜಿನ ಪ್ರಾಂಶುಪಾಲೆ ಎಂ.ಆರ್.ಸುಮತಿ ಅಧ್ಯಕ್ಷತೆ ವಹಿಸಲಿದ್ದು, ಕೊಳ್ಳೇಗಾಲ ಮಹದೇಶ್ವರ ಸರ್ಕಾರಿ ಪದವಿ ಕಾಲೇಜಿನ ದೈಹಿಕ ಶಿಕ್ಷಣ ನಿರ್ದೇಶಕ ಡಾ.ಜಯಶಂಕರ್, ರಾಷ್ಟ್ರೀಯ ಸೇವಾ ಯೋಜನೆ ಸಂಯೋಜಕ ಡಾ.ಜಿ. ಮಲ್ಲೇಶ್, ಐಕ್ಯೂಎಸಿ ಸಮಿತಿ ಸಂಚಾಲಕಿ ಎಸ್.ಆರ್.ದೀಪ, ಸಾಂಸ್ಕೃತಿಕ ಸಮಿತಿ ಸಂಚಾಲಕಿ ಡಾ.ಹೆಚ್.ಎಸ್. ರುಕ್ಮಿಣಿ, ಕ್ರೀಡಾ ಸಮಿತಿ ಸಂಚಾಲಕ ಡಾ.ಶಾಂತರಾಜು, ರಾಷ್ಟ್ರೀಯ ಸೇವಾ ಯೋಜನಾ ಘಟಕ ಸಂಚಾಲಕ ಡಾ.ಎಂ.ಸಿ ಪ್ರಭಾವತಿ, ಪತ್ರಾಂಕಿತ ವ್ಯವಸ್ಥಾಪಕಿ ಜಿ.ಎನ್.ಸಾಕಮ್ಮ ಭಾಗವಹಿಸಲಿದ್ದಾರೆ.

ಹಸಗೂಲಿ ಗ್ರಾಮದಲ್ಲಿ ಹಸುಗಳಿಗೆ ಲಸಿಕೆ....


ಬೇಗೂರು ಸಮೀಪದ ಹಸಗೂಲಿ ಗ್ರಾಮದಲ್ಲಿ ಪಶುಪಾಲನೆ ಇಲಾಖೆ ಹಾಗೂ ಕೆಎಂಫ್ ವತಿಯಿಂದ ಹಸುಗಳಿಗೆ 6ನೇ ಸುತ್ತಿನ ಕಾಲುಬಾಯಿ ಲಸಿಕೆ ಹಾಕಲಾಯಿತು. ಮುಖ್ಯ ಪಶು ವೈದ್ಯಾಧಿಕಾರಿ ಕೃಷ್ಣ, ಪಶು ಪರೀಕ್ಷಕ ಶ್ರೀರಾಮಚಂದ್ರ ಇದ್ದರು.

ನ.13ರಂದು ಲೋಕಾಯುಕ್ತ ಅಧಿಕಾರಿಗಳಿಂದ ದೂರು ಸ್ವೀಕಾರ

ಹನೂರು, ನ.7–ಲೋಕಾಯುಕ್ತ ಅಧಿಕಾರಿಗಳು ನ.13 ರಂದು ಪಟ್ಟಣದ ಪ್ರವಾಸಿಮಂದಿರದಲ್ಲಿ ಬೆಳಗ್ಗೆ 11 ರಿಂದ ಮಧ್ಯಾಹ್ನ 1 ಗಂಟೆವರೆಗೆ ಸಾರ್ವಜನಿಕರಿಂದ ದೂರು ಸ್ವೀಕರಿಸಿ, ವಿಚಾರಣೆ ನಡೆಸಲಿದ್ದಾರೆ.

ಸರ್ಕಾರಿ ಕಚೇರಿಗಳಲ್ಲಿ ಕೆಲಸಗಳ ಅನಗತ್ಯ ವಿಳಂಬ ಹಾಗೂ ಇನ್ನಿತರ ತೊಂದರೆ ನೀಡುತ್ತಿರುವ ಅಧಿಕಾರಿ, ನೌಕರರ ವಿರುದ್ಧ ಸಾರ್ವಜನಿಕರು ದೂರುಗಳನ್ನು ನಿಗದಿತ ನಮೂನೆ–1 ಮತ್ತು 2ರಲ್ಲಿ ನೀಡಬಹುದು ಎಂದು ಲೋಕಾಯುಕ್ತ ಪೊಲೀಸ್ ಉಪಾಧೀಕ್ಷಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ರಾಜ್ಯ ಸರ್ಕಾರ ವಿರುದ್ಧ ರೈತರ ಪ್ರತಿಭಟನೆ

- ಬೈಕ್, ಆಟೋಗಳಲ್ಲಿ ಮೆರವಣಿಗೆ
- ವಿವಿಧ ಬೇಡಿಕೆ ಈಡೇರಿಕೆಗೆ ಒತ್ತಾಯ

ಚಾಮರಾಜನಗರ, ನ.7–ವಿವಿಧ ಬೇಡಿಕೆ ಈಡೇರಿಸುವಂತೆ ಒತ್ತಾಯಿಸಿ ಜಿಲ್ಲಾ ಸಾಮೂಹಿಕ ನಾಯಕತ್ವದ ರೈತ ಸಂಘ ಮತ್ತು ಹಸಿರು ಸೇನೆ ಕಾರ್ಯಕರ್ತರು ನಗರದಲ್ಲಿ ಗುರುವಾರ ಪ್ರತಿಭಟನೆ ನಡೆಸಿದರು.

ಜಿಲ್ಲೆಯ ಐದು ತಾಲೂಕುಗಳಿಂದ ಬೈಕ್ ಮತ್ತು ಆಟೋಗಳಲ್ಲಿ ಮೆರವಣಿಗೆಯಲ್ಲಿ ಬಂದ ಪ್ರತಿಭಟನಾಕಾರರು, ನಗರದ ಜಿಲ್ಲಾಡಳಿತ ಭವನದ ಮುಂಭಾಗ ಸಮಾವೇಶಗೊಂಡು ಕೆಲಕಾಲ ಪ್ರತಿಭಟನೆ ನಡೆಸಿದರು. ಬಳಿಕ ರಾಜ್ಯ ಸರ್ಕಾರ ಹಾಗೂ ಜಿಲ್ಲಾಡಳಿತದ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ರೈತ ಸಂಘದ ಜಿಲ್ಲಾಧ್ಯಕ್ಷ ಹೊನ್ನೂರು ಪ್ರಕಾಶ್ ಮಾತನಾಡಿ, ಜಿಲ್ಲೆಯಲ್ಲಿ ಅತಿವೃಷ್ಟಿ ಹಾಗೂ ಅನಾವೃಷ್ಟಿಗಳಿಂದ ತತ್ತರಿಸುವ ರೈತರಿಗೆ ಸೂಕ್ತ ಪರಿಹಾರ ನೀಡಬೇಕು. ಬೆಳೆ ವಿಮೆ ಸರಿಯಾದ ವೇಳೆಗೆ ಸಿಗುತ್ತಿಲ್ಲ. ಇದ್ದರಿಂದ ರೈತರು ಕಂಗಲಾಗಿದ್ದಾರೆ. ಜಿಎಂ ಮುಕ್ತ ಭಾರತ ಎಂದು ಘೋಷಿಸಬೇಕು. ಐಸಿಆರ್ ಮತ್ತು ಬಾಯರ್ ಕಂಪನಿಗಳ ಕೃಷಿ ಒಪ್ಪಂದವನ್ನು ಕೇಂದ್ರ ಸರ್ಕಾರ ಮಧ್ಯಪ್ರವೇಶಿಸಿ ರದ್ದುಗೊಳಿಸಬೇಕು. ಜಿಲ್ಲೆಯಲ್ಲಿ ಕರಾ ನಿರಾಕರಣ ಚಳವಳಿ ಸಂದರ್ಭದಲ್ಲಿ ಕಟ್ಟಲಾಗದ ವಿದ್ಯುತ್ ಬಾಕಿಯನ್ನು ಮನ್ನಾ ಮಾಡಬೇಕು. ಸೆಸ್ಕ್ ನೌಕರರ ಬೇಜವಾಬ್ದಾರಿಯಿಂದ ಜನ–ಜಾನುವಾರುಗಳ ಪ್ರಾಣಾಪಾಯವಾಗುತ್ತಿದ್ದು, ಇದು ತಕ್ಷಣ ನಿಲ್ಲಬೇಕು ಎಂದು ಒತ್ತಾಯಿಸಿದರು.


ವಿವಿಧ ಬೇಡಿಕೆ ಈಡೇರಿಸುವಂತೆ ಒತ್ತಾಯಿಸಿ ರೈತ ಸಂಘ ಕಾರ್ಯಕರ್ತರು ಚಾಮರಾಜನಗರದಲ್ಲಿ ಪ್ರತಿಭಟನೆ ನಡೆಸಿದರು.

ಭತ್ತಕ್ಕೆ ಕೇಂದ್ರ ಸರ್ಕಾರದ ಎಂಎಸ್‌ಪಿ ಮೇಲೆ ಹೆಚ್ಚುವರಿ 500 ರೂ.ಗಳನ್ನು ರಾಜ್ಯ ಸರ್ಕಾರ ನೀಡಬೇಕು. ಕೂಡಲೇ ಖರೀದಿ ಕೇಂದ್ರ ತೆರೆಯಬೇಕು. ರೈತ ಮತ್ತು ಕಾರ್ಖಾನೆ ನಡುವೆ ವಿಪಕ್ಷೀಯ ಒಪ್ಪಂದವಾಗಬೇಕು. ಬೇಗೂರು ಸಂತೆಯಲ್ಲಿ ರೈತರಿಂದ ಸುಂಕ ವಸೂಲು ಮಾಡುತ್ತಿರುವ ಹಗಲು ದರೋಡೆ ನಿಲ್ಲಬೇಕು. ಹನೂರು ಭಾಗದ ಕೆಲ ಹಳ್ಳಿಗಳಿಗೆ ಕಿರುಸೇತುವೆ ಸಂಪರ್ಕ ಕಲ್ಪಿಸಬೇಕು. ಹನೂರು ಭಾಗದಲ್ಲಿ ಕುಡಿಯುವ ನೀರಿನ ತೊಂದರೆಯನ್ನು ತಕ್ಷಣ ಸರಿಪಡಿಸಬೇಕು ಎಂದು ಆಗ್ರಹಿಸಿದರು.

ಮಹದೇಶ್ವರಬೆಟ್ಟ ಕಾಡಂಚಿನ ಗ್ರಾಮಗಳಿಗೆ ಮೂಲಸೌಕರ್ಯ ಕಲ್ಪಿಸಬೇಕು ಹಾಗೂ ಇಂಡಿಗನತ್ತ ಗ್ರಾಮದ ರೈತರ ಮೇಲಿನ ಪ್ರಕರಣವನ್ನು ವಾಪಸ್ ಪಡೆಯಬೇಕು. ಚಂಗಡಿ ಗ್ರಾಮವನ್ನು ಶೀಘ್ರವಾಗಿ ಸ್ಥಳಾಂತರಿಸಬೇಕು. ಗುಂಡ್ಲುಪೇಟೆ ಮತ್ತು ಹನೂರು ಭಾಗದ ಕೆಲ ಗ್ರಾಮಗಳಲ್ಲಿ ಸರ್ಕಾರಿ ಮತ್ತು ಗೋಮಾಳದಲ್ಲಿ ಪಟ್ಟಬದ್ಧ ಹಿತಾಸಕ್ತಿಗಳು ಒತ್ತುವರಿ ಮಾಡಿಕೊಂಡಿರುವ ಜಮೀನುಗಳನ್ನು ಬಿಡಿಸಿ, ರಸ್ತೆ ಸಂಪರ್ಕ ಕಲ್ಪಿಸಬೇಕು ಎಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಸಂಘದ ಹೊನ್ನೂರು ಪ್ರಕಾಶ್, ಚಂಗಡಿ ಕರಿಯಪ್ಪ ಈಶ್ವರಪ್ರಭು, ಪಾಪಣ್ಣ, ನಟರಾಜು, ನಾಗಪ್ಪ, ಮಹೇಶ, ಸಿದ್ದರಾಜು, ಸಿದ್ದಲಿಂಗಸ್ವಾಮಿ, ಶಂಕರ್, ವೀರಭದ್ರಸ್ವಾಮಿ, ಶಾಂತಕುಮಾರ್, ಮಾದಪ್ಪ, ರಾಜು, ಸ್ವಾಮಿ ಇತರರಿದ್ದರು.

ಜನ್ಮದಾತೆ ಹೆಸರಿನಲ್ಲಿ ಗಿಡ ನೆಡುವುದು ಪುಣ್ಯದ ಕೆಲಸ

ಚಾಮರಾಜನಗರ, ನ.7–ಜೀವಜಗತ್ತಿನ ಕೇಂದ್ರಬಿಂದು ಹಾಗೂ ಜನ್ಮದಾತೆ ತಾಯಿ ಹೆಸರಿನಲ್ಲಿ ಗಿಡ ನೆಡುವುದು ಪುಣ್ಯದ ಕೆಲಸದ ಜೊತೆಗೆ ಉತ್ತಮ ಸಾಮಾಜಿಕ ಸೇವೆಯಾಗಿದೆ ಎಂದು ಚಾಮರಾಜನಗರ–ರಾಮಸಮುದ್ರ ನಗರಾಭಿವೃದ್ಧಿ ಪ್ರಾಧಿಕಾರ ಅಧ್ಯಕ್ಷ ಮಹಮ್ಮದ್ ಅಸ್ಗರ್ ಮುನ್ನ ತಿಳಿಸಿದರು.

ನಗರದ ಸರ್ಕಾರಿ ಬಾಲಕರ ಪದವಿಪೂರ್ವ ಕಾಲೇಜಿನಲ್ಲಿ ಗುರುವಾರ ನೆಹರು ಯುವ ಕೇಂದ್ರ, ಜೈ ಭುವನೇಶ್ವರಿ ಕನ್ನಡ ಯುವ ವೇದಿಕೆ ಸಹಯೋಗದಲ್ಲಿ ಹಮ್ಮಿಕೊಂಡಿದ್ದ ತಾಯಿ ಹೆಸರಿನಲ್ಲಿ ಗಿಡ ನೆಡುವ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ತಾಯಿ ಹೆಸರಿನಲ್ಲಿ ಗಿಡ ನೆಡುವುದು ಸಂತಸದ ಸಂಗತಿಯಾಗಿದೆ. ಪ್ರತಿಯೊಬ್ಬರು ಒಂದೊಂದು ಗಿಡ ನೆಡಬೇಕು. ಗಿಡ ಮರಗಳು ಬಿಸಿಲ ಬೇಗೆಯಲ್ಲಿ ಬೆಂದವರಿಗೆ ನೆರಳು, ಶುದ್ಧ ಗಾಳಿ ನೀಡಲಿವೆ. ಈ ನಿಟ್ಟಿನಲ್ಲಿ ಎಲ್ಲರೂ ಗಿಡಮರ ರಕ್ಷಿಸಿ ತಮ್ಮ ಮಕ್ಕಳಂತೆ ಪೋಷಿಸಬೇಕು. ನಾವು ಗಿಡಮರ ಬೆಳೆಸಿದರೆ, ಮುಂದಿನ ದಿನಗಳಲ್ಲಿ ಅವುಗಳು ನಮಗೆ ನೆರವಾಗಲಿವೆ ಎಂದರು.

ಸಮಾಜದಲ್ಲಿ ಹೆಣ್ಣು ಹಲವು ಜವಾಬ್ದಾರಿಗಳನ್ನು ನಿಭಾಯಿಸುವಂತೆ ಗಿಡಮರಗಳಿಂದ ಪೀಠೋಪಕರಣ, ಅಲಂಕಾರಿಕ ಕಲಾಕೃತಿ, ಇನ್ನಿತರೆ ವಾದರಿಗಳು ಬಹುಜನೋಪಯೋಗಿಯಾಗಿವೆ. ಜಿಲ್ಲೆ ಶೇ.52ರಷ್ಟು ಅರಣ್ಯ ಪ್ರದೇಶ ಹೊಂದಿದ್ದು, ಇದರಿಂದ ಉತ್ತಮ ಗಾಳಿ, ಮಳೆ, ಬೆಳೆ, ನೆರಳು ಲಭ್ಯವಾಗಲಿದೆ. ಪ್ರಮುಖವಾಗಿ ಗಿಡ ನೆಡುವ ಉದ್ದೇಶದಿಂದ ಪರಿಸರ ಸಂರಕ್ಷಣೆಯಾಗಲಿದೆ ಎಂದು ಹೇಳಿದರು.


ಚಾಮರಾಜನಗರದ ಸರ್ಕಾರಿ ಬಾಲಕರ ಪದವಿಪೂರ್ವ ಕಾಲೇಜಿನಲ್ಲಿ ತಾಯಿ ಹೆಸರಿನಲ್ಲಿ ಗಿಡ ನೆಡುವ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು.

ಪದವಿಪೂರ್ವ ಶಿಕ್ಷಣ ಇಲಾಖೆ ಉಪನಿರ್ದೇಶಕ ಸಿ.ಮಂಜುನಾಥ ಪ್ರಸನ್ನ ಮಾತನಾಡಿ, ತಾಯಂದಿರ ಹೆಸರಿನಲ್ಲಿ ಗಿಡ ನೆಡುವುದು ಆರೋಗ್ಯಕರ ಬೆಳವಣಿಗೆ. ಕೆ.ಎಸ್.ನಿಸಾರ್ ಅಹಮ್ಮದ್ ಅವರ 'ಜೋಗದ ಸಿರಿ ಬೆಳಕಿನಲ್ಲಿ' ಗೀತೆಯಲ್ಲಿ ಪ್ರಕೃತಿ ಮಾತೆ ನಿತ್ಯೋತ್ಸವ ಆಚರಿಸಿಕೊಳ್ಳುವ ಬಗ್ಗೆ ವಿವರಿಸಿದ್ದಾರೆ. ಪ್ರಕೃತಿ ನಮ್ಮೆಲ್ಲರಿಗೂ ಅವಶ್ಯ ಸಂಪನ್ಮೂಲವಾಗಿದೆ ಎಂದರು.

ಜೈ ಭುವನೇಶ್ವರಿ ಕನ್ನಡ ಯುವ ವೇದಿಕೆ ಅಧ್ಯಕ್ಷ ಜಿ. ಬಂಗಾರು, ಪ್ರಾಂಶುಪಾಲ ಸೋಮಣ್ಣ, ಉಪನ್ಯಾಸಕರಾದ ಟಿ.ಮಧು, ಸತ್ಯೇಂದ್ರನಾಥ, ಪ್ರೇಮ, ನೆಹರು ಯುವ ಕೇಂದ್ರದ ಸಹನ ಇತರರು ಕಾರ್ಯಕ್ರಮದಲ್ಲಿ ಇದ್ದರು. ಕಾರ್ಯಕ್ರಮಕ್ಕೂ ಮೊದಲು ಕಾಲೇಜಿನ ಆವರಣದಲ್ಲಿ ಗಣ್ಯರು ಗಿಡಗಳನ್ನು ನೆಟ್ಟು ನೀರೆರೆದರು.



ಟ್ರೇಲರ್‌ನಲ್ಲಿ ಶಾನುಭೋಗರ ಮಗಳು...

ಇತ್ತೀಚಿನ ದಿನಗಳಲ್ಲಿ ಕಾದಂಬರಿಯಾಧಾರಿತ ಚಿತ್ರಗಳ ನಿರ್ಮಾಣ ಕಡಿಮೆಯಾಗಿದೆ. ಬಹಳ ದಿನಗಳ ನಂತರ ಇಂಥದ್ದೊಂದು ಚಿತ್ರ ತೆರೆಗೆ ಬರುತ್ತಿದೆ, ರಾಗಿಣಿ ಪ್ರಜ್ವಲ್ ನಾಯಕಿಯಾಗಿ ನಟಿಸಿರುವ ಆ ಚಿತ್ರದ ಹೆಸರು ಶಾನುಭೋಗರ ಮಗಳು. ಶ್ರೀಮತಿ ಭಾಗ್ಯ ಕೃಷ್ಣಮೂರ್ತಿ ಅವರು ಬರೆದ ಇದೇ ಹೆಸರಿನ ಕಾದಂಬರಿಯನ್ನಾಧರಿಸಿ ನಿರ್ಮಾಣವಾಗಿರುವ ಈ ಚಿತ್ರಕ್ಕೆ ಕೂಡ್ಲು ರಾಮಕೃಷ್ಣ ಆಕ್ಷನ್ ಕಟ್ ಹೇಳಿದ್ದಾರೆ.

ಇತ್ತೀಚೆಗೆ ಈ ಚಿತ್ರದ ಟ್ರೇಲರ್ ಬಿಡುಗಡೆಯಾಯಿತು. ಈ ಚಿತ್ರದಲ್ಲಿ ನಟ ಪ್ರಜ್ವಲ್ ದೇವರಾಜ್ ಪತ್ನಿ ರಾಗಿಣಿ ಪ್ರಜ್ವಲ್, ಶಾನುಭೋಗರ ಮಗಳು ಶರಾವತಿಯಾಗಿ ಕಾಣಿಸಿಕೊಂಡಿದ್ದಾರೆ. ಮೈಸೂರು, ಶ್ರೀರಂಗಪಟ್ಟಣ, ಮೇಲುಕೋಟೆ, ಚನ್ನಪಟ್ಟಣ, ಚಿಕ್ಕಬಳ್ಳಾಪುರದ ಸುತ್ತಮುತ್ತ ಈ ಚಿತ್ರದ ಚಿತ್ರೀಕರಣ ನಡೆದಿದೆ.

ಕಾದಂಬರಿಗಾರ್ತಿ ಭಾಗ್ಯ ಕೃಷ್ಣಮೂರ್ತಿ ಮಾತನಾಡುತ್ತ, ನಾನು ಮೂಲತಃ ಪತ್ರಕರ್ತೆ 32 ಕಾದಂಬರಿಗಳನ್ನು ಬರೆದಿದ್ದೇನೆ. 2004ರಲ್ಲಿ ಈ ಕಾದಂಬರಿ ಬರೆದಿದ್ದೆ, ಆಗ ತರಂಗ ವಾರಪತ್ರಿಕೆಯಲ್ಲಿ ಧಾರಾವಾಹಿಯಾಗಿ ಪ್ರಕಟವಾಗಿತ್ತು. 18ನೇ ಶತಮಾನದಲ್ಲಿ ನಡೆಯುವ ಧೀರ ಮಹಿಳೆಯೊಬ್ಬಳ ಹೋರಾಟದ ಕಥೆಯಿದು ಎಂದರು. ಚಿತ್ರದ ಜವಾಬ್ದಾರಿ ಹೊತ್ತಿರುವ ಸ್ವಸ್ತಿಕ್ ಶಂಕರ್ ಮಾತನಾಡುತ್ತ, ನಿರ್ಮಾಪಕ ಸಿ.ಎಂ.ನಾರಾಯಣ್ ನನ್ನ ಸ್ನೇಹಿತರು. ಇದೊಂದು ಮಹಿಳಾಪ್ರಧಾನ ಕಥೆ. ಚಿತ್ರ ತುಂಬಾ ಚೆನ್ನಾಗಿ ಬಂದಿದೆ ಎಂದು ಹೇಳಿದರು,

ಶಾನುಭೋಗರ ಮಗಳು ಶರಾವತಿಯಾಗಿ ಕಾಣಿಸಿಕೊಂಡಿರುವ ರಾಗಿಣಿ ಪ್ರಜ್ವಲ್ ಮಾತನಾಡುತ್ತ, ಲಾ ಚಿತ್ರದ ನಂತರ ನಾನು ನಟಿಸಿರುವ ಸಿನಿಮಾ. ಮೂಲತಃ ನಾನೊಬ್ಬ ಕ್ಲಾಸಿಕಲ್ ಡ್ಯಾನ್ಸರ್. ಈ ಚಿತ್ರದಲ್ಲಿ ಡಬ್ಬಿಂಗ್ ಕೂಡ ಮಾಡಿದ್ದೇನೆ. ದುಃಖದ ಸನ್ನಿವೇಶಗಳಲ್ಲಿ ಗ್ಲಿಸರಿನ್ ಉಪಯೋಗಿಸದೆ ಅಭಿನಯಿಸಿದ್ದೇನೆ ಎಂದು ಹೇಳಿದರು. ನಿರ್ದೇಶಕ ಕೂಡ್ಲು ರಾಮಕೃಷ್ಣ ಮಾತನಾಡಿ, ಈ ಸಿನಿಮಾ ಪ್ರಾರಂಭವಾಗಿದ್ದೇ ಆಕಸ್ಮಿಕ. ಭಾಗ್ಯ ನನಗೆ 35 ವರ್ಷಗಳ ಸ್ನೇಹಿತೆ, ನನ್ನ 32 ಸಿನಿಮಾಗಳಲ್ಲಿ 14 ಕಾದಂಬರಿ ಆಧಾರಿತ ಚಿತ್ರಗಳೇ ಎನ್ನುವುದು ವಿಶೇಷ ಎಂದರು. ಸಿ.ಎಂ. ನಾರಾಯಣ್ ಅವರ ನಿರ್ಮಾಣದ ಈ ಚಿತ್ರಕ್ಕೆ ಜೈಆನಂದ್ ಛಾಯಾಗ್ರಹಣ, ರಮೇಶ್ ಕೃಷ್ಣನ್ ಸಂಗೀತ, ಬಿ.ಎಸ್. ಕೆಂಪರಾಜ್ ಸಂಕಲನ, ಬಿ.ಎ.ಮಧು ಅವರ ಸಂಭಾಷಣೆ, ವಸಂತ ಕುಲಕರ್ಣಿ ಅವರ ಕಲಾನಿರ್ದೇಶನ, ಕವಿರಾಜ್-ಅರಸು ಅಂತಾರೆ ಅವರ ಸಾಹಿತ್ಯವಿದೆ. ರಿಶಿಕಾ, ನಿರಂಜನ್‌ಶೆಟ್ಟಿ, ರಮೇಶ್‌ಭಟ್, ಸುಧಾ ಬೆಳವಾಡಿ, ಪದ್ಮಾವಾಸಂತಿ, ಶ್ರೀನಿವಾಸಮೂರ್ತಿ, ಜೋಸೈಮನ್ ಅಲ್ಲದೆ ಟಿಪ್ಪುಸುಲ್ತಾನ್ ಪಾತ್ರದಲ್ಲಿ ಕಿಶೋರ್ ಅಭಿನಯಿಸಿದ್ದಾರೆ.



ಈ ವಾರ ಸಸ್ಪೆನ್ಸ್ ಥ್ರಿಲ್ಲರ್ ಯು-235

ಹಿರಿಯ ನಟ ದೇವರಾಜ್ ಪ್ರಮುಖ ಪಾತ್ರದಲ್ಲಿ ಕಾಣಿಸಿಕೊಂಡಿರುವ, ಸೈನ್ಸ್ ಫಿಕ್ಷನ್ ಕಥಾಹಂದರ ಹೊಂದಿರುವ 'ಯು-235' ಚಿತ್ರ ಈ ವಾರ ತೆರೆಕಂಡಿದೆ. ಚನ್ನೇಗೌಡ ಸಿ.ಎನ್. ಅವರ ನಿರ್ದೇಶನವಿರುವ ಈ ಚಿತ್ರದಲ್ಲಿ ವಿವೇಕ್ ಹಾಗೂ ಹಿಮ ಪ್ರಮುಖ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ.

ಈ ಚಿತ್ರದ ಟ್ರೇಲರ್ ಇತ್ತೀಚೆಗೆ ಬಿಡುಗಡೆಯಾಯಿತು. ಟ್ರೇಲರ್‌ನಲ್ಲೇ ಸಾಕಷ್ಟು ಕುತೂಹಲ ಹುಟ್ಟುಹಾಕಿರುವ ಈ ಚಿತ್ರ ಇಂದಿನಿಂದ ರಾಜ್ಯಾದ್ಯಂತ ಬಿಡುಗಡೆಯಾಗಿದೆ. ಶ್ರೀಮತಿ ಗೀತಾ ಅವರ ನಿರ್ಮಾಣದ ಈ ಚಿತ್ರಕ್ಕೆ ಮಂಡ್ಯ ಮೂಲದ ನಿತ್ಯಾನಂದ ಸಹ ನಿರ್ಮಾಪಕರಾಗಿ ಕೈಜೋಡಿಸಿದ್ದಾರೆ.

ಚಿತ್ರದ ನಿರ್ದೇಶಕ ಚನ್ನೇಗೌಡ ಸಿ.ಎನ್. ಮಾತನಾಡುತ್ತ, ಸಿನಿಮಾ ನಿರ್ದೇಶನ ನನ್ನ ಹಲವು ವರ್ಷಗಳ ಕನಸು. ಕೆಲವು ಸಿನಿಮಾಗಳಿಗೆ ಅಸಿಸ್ಟೆಂಟ್ ಡೈರೆಕ್ಟರ್ ಆಗಿ ಕೆಲಸ ಮಾಡಿ, ಈ ಚಿತ್ರದ ಮೂಲಕ ಮೊದಲ ಬಾರಿಗೆ ನಿರ್ದೇಶನಕ್ಕಿಳಿದಿದ್ದೇನೆ. ಸಸ್ಪೆನ್ಸ್, ಥ್ರಿಲ್ಲರ್ ಜಾನರ್ ಕಥಾಹಂದರ ಹೊಂದಿರುವ ಈ ಚಿತ್ರದಲ್ಲಿ ಕೋರ್ಟ್ ರೂಮ್ ಸನ್ನಿವೇಶಗಳು ಪ್ರೇಕ್ಷಕರ ಗಮನ ಸೆಳೆಯಲಿದೆ. ಕೃಷ್ಣಪ್ಪ ಅವರು ಈ ಚಿತ್ರದ ಕಥೆಯನ್ನು ಬರೆದಿದ್ದು, ನಾನು ಚಿತ್ರಕಥೆ ರಚಿಸಿ ಆಕ್ಷನ್ ಕಟ್ ಹೇಳಿದ್ದೇನೆ. ಚಿತ್ರದ ನಾಯಕಿ ಭೂಮಿ ಯುರೇನಿಯಂ ಅನ್ವೇಷಣೆ ಮಾಡುತ್ತಾಳೆ. ಆನಂತರ ಚಿತ್ರಕಥೆ ಬೇರೆಯದೇ ತಿರುವನ್ನು ಪಡೆದುಕೊಳ್ಳುತ್ತದೆ. ಪ್ರೇಕ್ಷಕರು ಕೊಟ್ಟ ಹಣಕ್ಕೆ ಮೋಸ ಮಾಡದ ಚಿತ್ರ ಇದಾಗಿದೆ ಎಂದು ಹೇಳಿದರು.

ನಾನು ಎಂಜಿನಿಯರಿಂಗ್ ಪದವೀಧರೆ. ಅಸಿಸ್ಟೆಂಟ್ ಪ್ರೊಫೆಸರ್ ಆಗಿ ಕೆಲಸ ನಿರ್ವಹಿಸುತ್ತಿದ್ದೆ. ಚಿತ್ರ ನಿರ್ಮಾಣ ನನ್ನ ಆಸೆಯಾಗಿತ್ತು. ಅಲ್ಲದೆ ಈ ಚಿತ್ರದ ಕಥೆಯೂ ನನಗೆ ತುಂಬಾ ಇಷ್ಟವಾಯಿತು. ಹಾಗಾಗಿ ನಾನೀ ಚಿತ್ರವನ್ನು ನಿರ್ಮಿಸಿರುವುದಾಗಿ ನಿರ್ಮಾಪಕಿ ಗೀತಾ ಅವರು ತಿಳಿಸಿದರು. ನಾಯಕ ವಿವೇಕ್ ಮಾತನಾಡುತ್ತ, ಇದು ಐರಾವನ್ ಚಿತ್ರದ ನಂತರ ನಾನು ನಟಿಸಿರುವ ಚಿತ್ರ. ಇದರಲ್ಲಿ ಪೊಲೀಸ್ ಅಧಿಕಾರಿಯಾಗಿ ಕಾಣಿಸಿಕೊಂಡಿದ್ದೇನೆ ಎಂದರು. ನಟಿ ಹಿಮ ಕೂಡ ತಮ್ಮ ಪಾತ್ರದ ಬಗ್ಗೆ ಮಾಹಿತಿ ನೀಡಿದರು. ಛಾಯಾಗ್ರಾಹಕ ಮಂಜುನಾಥ್ ಹಾಗೂ ಕಥೆ ಬರೆದಿರುವ ಕೃಷ್ಣಪ್ಪ, ನಿರ್ಮಾಪಕ ಯು.ಎಸ್.ನಾಗೇಶ್ ಕುಮಾರ್, ನಿರ್ದೇಶಕ ಜೆಜೆ ಶ್ರೀನಿವಾಸ್ ಹಾಗೂ ಇತರರು ಈ ಸಂದರ್ಭದಲ್ಲಿ ಹಾಜರಿದ್ದು ಚಿತ್ರತಂಡಕ್ಕೆ ಶುಭ ಹಾರೈಸಿದರು. ದೇವರಾಜ್, ವಿವೇಕ್, ಪೂಜಾ ದುರ್ಗಣ್ಣ, ದಿನೇಶ್ ಮಂಗಳೂರು, ರಾಜೇಶ್ ನಟರಂಗ, ಹನುಮಂತೇಗೌಡ ಮುಂತಾದವರು ಚಿತ್ರದ ಪ್ರಮುಖ ತಾರಾಬಳಗದಲ್ಲಿದ್ದಾರೆ. ಮಂಜುನಾಥ್ ಅವರ ಛಾಯಾಗ್ರಹಣ ಹಾಗೂ ಜಗದೀಶ್ ಅವರ ಸಂಕಲನ ಈ ಚಿತ್ರಕ್ಕಿದೆ.


ಫೆ.16ರಂದು ಡಾಲಿ-ಧನ್ಯತಾ ಮದುವೆ

ಡಾಲಿ ಧನಂಜಯ್ ಮದುವೆ ಯಾವಾಗ ಎಂಬುದು ಅವರ ಹಲವಾರು ಅಭಿಮಾನಿಗಳ ಪ್ರಶ್ನೆಯಾಗಿತ್ತು, ಕೊನೆಗೂ ಅದಕ್ಕೆ ಉತ್ತರ ಸಿಕ್ಕಿದೆ, ಧನಂಜಯ್, ಕನ್ನಡ ಚಿತ್ರರಂಗದ ಮೋಸ್ಟ್ ಎಲಿಜಿಬಲ್ ಬ್ಯಾಚುಲರ್ ಎಂದನಿಸಿಕೊಂಡಿದ್ದರು. ಅವರ ಸ್ನೇಹಿತರೆಲ್ಲಾ ಹಸೆಮಣೆ ಏರುತ್ತಿದ್ದರೆ, ಧನಂಜಯ್‌ದು ಸುದ್ದಿಯೇ ಇರಲಿಲ್ಲ. ಈಗ ಧನಂಜಯ್ ಸಹ ಹಸೆಮಣೆ ಏರುವುದಕ್ಕೆ ಸಜ್ಜಾಗಿದ್ದಾರೆ.

ಧನಂಜಯ್ ತಮ್ಮ ಬಾಳಸಂಗಾತಿಯನ್ನು ಪರಿಚಯಿಸಿದ್ದಾರೆ. ಭಾವಿ ಪತ್ನಿ ಜೊತೆಗಿನ ವೀಡಿಯೋ ಮತ್ತು ಫೋಟೋಗಳನ್ನು ಹಂಚಿಕೊಳ್ಳುವ ಮೂಲಕ ತಮ್ಮ ಮದುವೆಯ ಸುದ್ದಿಯನ್ನು ಬಹಿರಂಗಪಡಿಸಿದ್ದಾರೆ.

ಧನಂಜಯ್ ಮದುವೆಯಾಗುತ್ತಿರುವ ಹುಡುಗಿಯ ಹೆಸರು ಧನ್ಯತಾ. ಗೈನಾಕಾಲಜಿಸ್ಟ್ ಆಗಿರುವ ಡಾ.ಧನ್ಯತಾರ ಜತೆ ಧನಂಜಯ್ ಮದುವೆಯಾಗುತ್ತಿದ್ದಾರೆ.

ಧನಂಜಯ್ ಮತ್ತು ಧನ್ಯತಾ ಇಬ್ಬರದ್ದೂ ಅನೇಕ ವರ್ಷಗಳ ಪರಿಚಯ. ಆ ಪರಿಚಯವೇ ಈಗ ಪ್ರೀತಿಯಾಗಿ, ಇದೀಗ ಹಸೆಮಣೆ ಏರುತ್ತಿದ್ದಾರೆ. ಚಿತ್ರದುರ್ಗ ಮೂಲದ ಧನ್ಯತಾ ಓದಿದ್ದು ಮೈಸೂರಿನಲ್ಲಿ. ಅರಸಿಕೆರೆ ಮೂಲದ ಧನಂಜಯ್ ಓದಿದ್ದು ಕೂಡ ಮೈಸೂರಿನಲ್ಲೇ.



ಅಂದಹಾಗೆ, ಇವರ ಮದುವೆ ಫೆಬ್ರವರಿ 16ರಂದು ಮೈಸೂರಿನ ಎಕ್ಸಿಬಿಷನ್ ಗ್ರೌಂಡ್‌ನಲ್ಲಿ ನಡೆಯಲಿದೆ. ಈ ಮದುವೆ ಸಮಾರಂಭದಲ್ಲಿ ಸಿನಿಮಾರಂಗ, ರಾಜಕೀಯ ಸೇರಿದಂತೆ ಬೇರೆ ಬೇರೆ ಕ್ಷೇತ್ರಗಳ ಗಣ್ಯರು ಹಾಜರಾಗಲಿದ್ದಾರೆ. ಬೆಳಗ್ಗೆ ಮಾಂಗಲ್ಯ ಧಾರಣೆ, ಅದೇ ದಿನ ಸಂಜೆ, ಅದೇ ಗ್ರೌಂಡ್‌ನಲ್ಲಿ ಆರತಕ್ಷತೆ ಸಮಾರಂಭ ನಡೆಯಲಿದೆ.

'ನಿಲ್ಲಬೇಡ' ಪ್ರೋತ್ಸಾಹದಾಯಕ ಹಾಡಿಗೆ ಚಂದನ್ ಶೆಟ್ಟಿ ಸಂಗೀತ




ಡಿವೋರ್ಸ್ ಆಗಿ ಬೇಸರದಿಂದ ಡಿಪ್ರೆಷನ್‌ಗೆ ಹೋಗಿದ್ದೆ. ಆ ಸಂದರ್ಭದಲ್ಲಿ ಮಠದ್ ಬಂದು ಈ ಸಾಂಗ್ ಕಂಪೋಜ್ ಮಾಡಿಕೊಡಲು ಹೇಳಿದರು. ಅವರು ಬರೆದ "ನಿಲ್ಲಬೇಡ ನೀನು, ಸೋತರೂ ನಿಲ್ಲಬೇಡ" ಎನ್ನುವ ಸ್ಫೂರ್ತಿದಾಯಕ ಲಿರಿಕ್ ನನ್ ಮನಸಿನ ನೋವನ್ನು ಮರೆಸಿತು ಎಂದು ರ್‍ಯಾಪರ್, ಸಂಗೀತ ನಿರ್ದೇಶಕ ಚಂದನ್‌ಶೆಟ್ಟಿ ಹೇಳಿದರು.

ಚಂದನ್ ಶೆಟ್ಟಿ ಸಂಗೀತ ಸಂಯೋಜಿಸಿ ಹಾಡಿರುವ, ಅಭಿಷೇಕ್ ಮಠದ್ ನಿರ್ದೇಶನದ, ಯುವಪ್ರತಿಭೆ ಸುನಿಧಿ ನೀಲೋಪಂಥ್, ಅನು ಪ್ರಭಾಕರ್, ಹರಿಣಿ ಅಭಿನಯದ ನಿಲ್ಲಬೇಡ ಎಂಬ ಹಾಡಿನ ಬಿಡುಗಡೆ ಸಮಾರಂಭದಲ್ಲಿ ಮಾತನಾಡಿದ ಅವರು, ಒಬ್ಬ ಸಂಗೀತ ನಿರ್ದೇಶಕನಿಗೆ ಖುಷಿಯಾಗೋದು, ಅವರು ಮಾಡಿದ ಹಾಡನ್ನು ಚೆನ್ನಾಗಿ ವಿಶ್ಯುಯಲೈಸ್ ಮಾಡಿದಾಗ. ನನಗೆ ಅಭಿಷೇಕ್ ಕಾಲ್ ಮಾಡಿದಾಗ ತುಂಬಾ ಬೇಸರದಲ್ಲಿದ್ದೆ, ಮೋಟಿವೇಷನ್ ಒಂದು ಸಾಂಗ್ ಮಾಡಿಕೊಡಬೇಕು ಅಂದರು. ನನ್ನ ಮನಸಿನಲ್ಲಿದ್ದ ನೋವನ್ನು ತೆಗೆಯಲಿಕ್ಕೆ ಈ ಹಾಡು ಪ್ರೇರಣೆಯಾಯಿತು, ಮನುಷ್ಯನಿಗೆ ಯಾವುದೇ ಕಷ್ಟ ಬಂದರೂ ಎದೆಗುಂದಬಾರದು, ಕುಗ್ಗಬಾರದು ಎಂದು ಹೇಳುವ ಈ ಹಾಡು ನಾನು ದುಃಖದಿಂದ ಹೊರಬರಲು ಸಹಾಯವಾಯಿತು ಎಂದು ಹೇಳಿದರು.

ಶೀತಲ್, ಶ್ರೀಹರ್ಷ ನೀಲಪಂಥ್ ಅವರ ಮಗಳಾದ ಸುನಿಧಿ, ಅನುಪ್ರಭಾಕರ್, ಹರಿಣಿ ಅಭಿನಯದ ಈ ಆಲ್ಬಮ್ ಹಾಡಿಗೆ ಅಭಿಷೇಕ್ ಮಠದ್ ನೃತ್ಯ ಸಂಯೋಜಿಸಿ, ನಿರ್ದೇಶನ ಮಾಡಿದ್ದಾರೆ. ಕಪ್ ಗೆಲ್ಲೋದು ಮುಖ್ಯ ಅಲ್ಲ, ಮನಸುಗಳನ್ನು ಗೆಲ್ಲೋದು ಮುಖ್ಯ ಎಂಬ ಅಡಿಬರಹ ಇರುವ ಈ ಮೋಟಿವೇಶನ್ ಹಾಡಿಗೆ ಸುನಿಧಿ ಅವರ ಅಜ್ಜಿ ಪ್ರತಿಭಾ ನೀಲೋಪಂಥ್ ಬಂಡವಾಳ ಹಾಕಿದ್ದಾರೆ.

ಮುಖ್ಯ ಅತಿಥಿಗಳಾಗಿದ್ದ ನಿರ್ಮಾಪಕರ ಸಂಘದ ಅಧ್ಯಕ್ಷ ಉಮೇಶ್ ಬಣಕಾರ್ ಮಾತನಾಡಿ, ಚಂದನ್ ಅವರ ಹಾಡಿಗೆ ಪ್ರಾಯಶಃ ಕಾಲು ಕೈ ಇಲ್ಲದವರು ಕೂಡ ಡ್ಯಾನ್ಸ್ ಮಾಡುತ್ತಾರೆ. ನಿಲ್ಲಬೇಡ ಎನ್ನುವ ಈ ಹಾಡು ಪರೋಕ್ಷವಾಗಿ ಮುಂದೆ ಬರುವಂತಹ ಯಾವುದೇ ಕಲಾವಿದರು ಯಾರಿಗೋಸ್ಕರವೂ ಕಾಯಬೇಡ, ನಿನ್ನ ಕೆಲಸ ನೀನು ಮಾಡಿಕೊಂಡು ಹೋಗು, ಜಯ ಕಟ್ಟಿಟ್ಟ ಬುತ್ತಿ ಎಂದು ಸಂದೇಶ ತಲುಪಿಸುತ್ತದೆ, ಈ ಹಾಡು ನೋಡಿದಾಗ, ಒಂದು ಸಿನಿಮಾನೇ ನೋಡಿದಂಗಾಯ್ತು ಎಂದು ಹೇಳಿದರು. ಮತ್ತೊಬ್ಬ ಅತಿಥಿ ನಟ ನವೀನ್ ಶಂಕರ್ ಮಾತನಾಡಿ, ಕೆಲವರಿಗೆ ಉತ್ತಮ ಕಲೆಯಿದ್ದರೂ ಅವಕಾಶ ಸಿಗಲ್ಲ. ಅವಕಾಶಕ್ಕಾಗಿ ಹಪಾಹಪಿಸುತ್ತಿರುವಾಗ ಇಂಥ ಅವಕಾಶ ದೊರೆತರೆ ಬೆಳೆಯಲು ಸಾಧ್ಯವಾಗುತ್ತದೆ. ಇಂತಹ ವಿಚಾರವನ್ನು ಹಾಡಿನ ಮೂಲಕ ತುಂಬಾ ಚೆನ್ನಾಗಿ ಹೇಳಿದ್ದಾರೆ ಎಂದರು. ಈ ವೇಳೆ ನಿರ್ದೇಶಕ ಅಭಿಷೇಕ್ ಮಠದ್, ಕಲಾವಿದೆ ಹರಿಣಿ, ಛಾಯಾಗ್ರಾಹಕ ಸಂಕೇತ್, ಸಾಹಿತಿ ವಿಜಯ್ ಈಶ್ವರ್ ಹಾಡಿನ ಕುರಿತಂತೆ ಮಾತನಾಡಿದರು.

ಸಿನಿಪದಬಂಧ-550



ಉಮ್ಮತ್ತೂರು ಇಂದುಶೇಖರ್
ಮೊ.9880820462



ಹೆಸರು ______

ವಿಳಾಸ ______

______

ದೂರವಾಣಿ ಸಂಖ್ಯೆ ______

ಎಡದಿಂದ ಬಲಕ್ಕೆ

1.ಶಶಿಕುಮಾರ್ - ದ್ವಾರಕೀಶ್ ಜೋಡಿಯಲ್ಲಿ ಮೋಡಿ ಮಾಡಿದ ಚಿತ್ರ!	8
6.ಗಂಧದ ಗುಡಿಯಲ್ಲಿ ಸಿಕ್ಕ ಅರಣ್ಯ ಸಂಪತ್ತು!	4
8.ಡಾ.ರಾಜ್‌ಕುಮಾರ್-ಸುಲಕ್ಷಣ ಅಭಿನಯದ ಚಿತ್ರ	5
9.ಕ್ಷೀರದೊಂದಿಗೆ ಮಧು ಒಂದಾಗಲು ಸಂಗೀತಂ ಶ್ರೀನಿವಾಸರಾವ್ ನಿರ್ದೇಶಕ	4
10.ಶಂಕರ್ ನಾಗ್ "ಫೈರ್ ಬಾಲ್"	4
11.ಪುಷ್ಪಕ ವಿಮಾನದ ನಟಿಗೆ ಮತ್ತೇರಿದೆ	3
12.ಕನ್ನೆ ತುಂಬಿಕೊಂಡಿರುವ ನಂಜು ಇಲ್ಲಿ ತಿರುಗಿದೆ	2
13.ಕಲ್ಪನಾ ನಿರ್ಮಿಸಿದ ಬಾಣಗಳ ಗೂಡು	5
14.ರಾಘವೇಂದ್ರ ರಾಜ್‌ಕುಮಾರ್-ರೂಪಶ್ರೀ ಅಭಿನಯದ ಚಿತ್ರ	5
15.ಕಿಚ್ಚ ಸುದೀಪ್ ಕವಿಯೋರ್ವನನ್ನು ನೆನಪಿಸಿದ್ದಾನೆ	2

ಮೇಲಿನಿಂದ ಕೆಳಕ್ಕೆ

1.ರಾಜಧಾನಿಯ ಪೊಲೀಸ್ ಗಸ್ತು ವಾಹನ ಚಿತ್ರವೂ ಹೌದು!	3
2.ಶ್ರೀಧರ್, ಅಂಜನಾ, ಮಾಲಾಶ್ರೀ ಅಭಿನಯದ ಚಿತ್ರ	11
3.ರಾಜ್‌ಕುಮಾರ್ ಅಭಿನಯದ ಜಾತಿಯ ಹೆಣ್ಣು	4
4.ಬಂಗಾರಿಯ ಜೊತೆಗಾರ	3
5.ಹಾಡಿನ ಆರಂಭದ ಸಾಲು!	3
7.ಅಂಬರೀಷ್-ಗೀತಾ ಅಭಿನಯಕ್ಕೆ ಸುಬ್ಬರಾವ್ ನಿರ್ದೇಶಕ	3
8." _ _ _ _ _ ಹನ್ನೆರಡು ವರುಷ ನನ್ನ ರೋಷ ನೂರು ವರುಷ... ",	5
11.ದೇವರಾಜ್ - ವಿನಯ ಪ್ರಸಾದ್ ಜೆಂಕಿಯಲ್ಲಿ ನಿರ್ಮಿಸಿದ ಗೂಡು	5
13.ಮಹದೇವಪ್ಪನಿಗೆ ಹೆಗಲೇರಿದ ಗ್ರಹ	2

ಸಿನಿ ಪದಬಂಧ 549ರ ಉತ್ತರ

ಮ	ರೆ	ಯ	ದ	ದೀ	ಪಾ	ವ	ಳಿ		ಆ	
ತಾ				ಪ		ರ್ಣ			ರ್ಭ	
ಪು		ದೀ		ದಿಂ		ಚ	ಟ	ಪ	ಟ	
		ಪಿ		ದ		ಕ್ರ		ಟಾ		
	ಆ	ಕಾ	ಶ	ದೀ	ಪ		ಬೆಂ	ಕಿ	ಪ	ಟ್ಣ
	ನೆ			ಪ						
	ಪ		ಶಿ	ವ	ಕಾ	ಶಿ		ಬೆ	ಳ	ಕು
	ಟಾ			ಹ				ಳ್ಳಿ		
	ಕಿ	ಡಿ		ಚ್ಚ		ಹೊ	ಸ	ಬೆ	ಳ	ಕು
				ಬೇ		ಗೆ		ಳ		
ಮ	ನೆ	ಬೆ	ಳ	ಕು				ಕು	ರಿ	

ವಿಜೇತರು: ಎಸ್.ಎನ್. ರಂಗಸ್ವಾಮಿ, ಟಿ.ಕೆ.ಲೇಔಟ್, ಮೈಸೂರು

ವಿಳಾಸ: 'ಸಿನಿಬಂಧ' ವಿಭಾಗ, 'ಮೈಸೂರು ಮಿತ್ರ' ದಿನಪತ್ರಿಕೆ, ಬನ್ನಿಮಂಟಪ, ಮೈಸೂರು-570 015

ಮೈಸೂರು ಮಿತ್ರ

ವಿಜೃಂಭಣೆಯ ಶ್ರೀಶನೇಶ್ವರಸ್ವಾಮಿ ಪೂಜಾ ಮಹೋತ್ಸವ

ತಿ.ನರಸೀಪುರ, ನ.7– ಪಟ್ಟಣದ ಶ್ರೀಶನೇಶ್ವರಸ್ವಾಮಿ ಸೇವಾ ಸಮಿತಿಯಿಂದ 24ನೇ ವಾರ್ಷಿಕೋತ್ಸವದ ಅಂಗವಾಗಿ ಶ್ರೀಶನೇಶ್ವರಸ್ವಾಮಿಯವರ ಪೂಜಾ ಮಹೋತ್ಸವ ವಿಜೃಂಭಣೆಯಿಂದ ನಡೆಯಿತು.

ಪಟ್ಟಣದ ಟಿಎಪಿಸಿಎಂಎಸ್ ಮುಖ್ಯದ್ವಾರದ ಸಮೀಪ ಲಿಂಕ್ ರಸ್ತೆಗೆ ಹೊಂದಿಕೊಂಡಿರುವ ಶ್ರೀಶನೇಶ್ವರ ಸ್ವಾಮಿಯವರ ಫೋಟೋಗೆ ಶನೇಶ್ವರಸ್ವಾಮಿ ಸೇವಾ ಸಮಿತಿ ಕಳೆದ 24 ವರ್ಷಗಳಿಂದ ನಿರಂತರವಾಗಿ ಪೂಜಾ ಕೈಂಕರ್ಯ ನಡೆಸಿಕೊಂಡು ಬರುತ್ತಿದೆ. ಅದರಂತೆ ಈ ಬಾರಿಯೂ ಪೂಜಾ ಮಹೋತ್ಸವ ಹಮ್ಮಿಕೊಂಡಿದ್ದು, ಶನೇಶ್ವರ ಸ್ವಾಮಿಯವರ ಫೋಟೋವನ್ನು ಹೂವು, ಹಣ್ಣು, ತರಕಾರಿ ಹಾಗೂ ತುಳಸಿ ಎಲೆಗಳಿಂದ ಸಿಂಗರಿಸಲಾಗಿತ್ತು. ಮಹೋತ್ಸವದ ಅಂತಿಮ ದಿನವಾದ ಇಂದು 6 ಸಾವಿರಕ್ಕೂ ಹೆಚ್ಚು ಮಂದಿಗೆ ಸಿಹಿ ಊಟದ ವ್ಯವಸ್ಥೆ ಮಾಡಲಾಗಿತ್ತು. ಪಟ್ಟಣದ ಚಿಲ್ಲರೆ ಅಂಗಡಿ ವರ್ತಕರು, ಚಿನ್ನ ಬೆಳ್ಳಿ ವ್ಯಾಪಾರಿಗಳು ಕಾರ್ಯಕ್ರಮದ ಉಸ್ತುವಾರಿ ವಹಿಸಿದ್ದರು. ಶನೇಶ್ವರಸ್ವಾಮಿ ಉತ್ಸವದ ಹಿನ್ನೆಲೆಯಲ್ಲಿ ಪಟ್ಟಣದ ಲಿಂಕ್ ರಸ್ತೆ ಮೈಸೂರು ದಸರಾ ಮಾದರಿಯಲ್ಲಿ ವಿದ್ಯುತ್ ದೀಪಗಳಿಂದ ಕಂಗೊಳಿಸುತ್ತಿತ್ತು.

ಸಮಿತಿ ಹಿರಿಯ ಮುಖಂಡ ಅಂಗಡಿ ನಾಗೇಶ್ ಮಾತನಾಡಿ, ಶನೇಶ್ವರಸ್ವಾಮಿ ಉತ್ಸವವನ್ನು ಈ ಬಾರಿ ವಿಜೃಂಭಣೆಯಿಂದ ಆಚರಿಸಲಾಗುತ್ತಿದೆ. ಕಳೆದ ಬಾರಿ ಹಮ್ಮಿಕೊಳ್ಳಲಾಗಿದ್ದ ಸಾರ್ವಜನಿಕ ವಿವಾಹ ಕಾರ್ಯಕ್ರಮ ಈ ಬಾರಿ ಕಾರಣಾಂತರಗಳಿಂದ ನಡೆಸಲು ಸಾಧ್ಯವಾಗಿಲ್ಲ.



ಶ್ರೀಶನೇಶ್ವರ ಸ್ವಾಮಿಯವರ ಪೂಜಾ ಮಹೋತ್ಸವ ವಿಜೃಂಭಣೆಯಿಂದ ನಡೆಯಿತು.

ಮುಂಬರುವ 25ನೇ ವಾರ್ಷಿಕೋತ್ಸವವನ್ನು ಇನ್ನೂ ಹೆಚ್ಚಿನ ವಿಜೃಂಭಣೆಯಿಂದ ಆಚರಿಸಲಾಗುತ್ತದೆ. ಸಾಮೂಹಿಕ ವಿವಾಹ ಕಾರ್ಯಕ್ರಮ ಸಹ ಇರಲಿದೆ. ಕಳೆದ 24 ವರ್ಷಗಳಿಂದ ಸ್ವಾಮಿ ಸೇವೆ ಮಾಡಿಕೊಂಡು ಬರಲಾಗುತ್ತಿದ್ದು, ಯಾವುದೇ ತೊಂದರೆ ಎದುರಾಗಿಲ್ಲ. ಮುಂದೆಯೂ ಸಾರ್ವಜನಿಕರು, ಅಧಿಕಾರಿಗಳಿಂದ ಇದೇ ರೀತಿಯ ಸಹಕಾರ ಬಯಸುತ್ತೇವೆ ಎಂದರು.

ಟಿಎಪಿಸಿಎಂಎಸ್ ಅಧ್ಯಕ್ಷ ಟಿ.ಪಿ.ಸುಬ್ರಹ್ಮಣ್ಯ ಮಾತನಾಡಿ, ಸೇವಾ ಸಮಿತಿಯವರು ಅನೇಕ ವರ್ಷಗಳಿಂದ ದೇವರ ಕಾರ್ಯ ನಡೆಸಿಕೊಂಡು ಬರುತ್ತಿದ್ದಾರೆ. ಮುಂದೆ ಇವರಿಗೆ ಇನ್ನೂ ಹೆಚ್ಚಿನ ಮಟ್ಟದಲ್ಲಿ ಕಾರ್ಯಕ್ರಮ ನಡೆಸಲು ಶನೇಶ್ವರ ಶಕ್ತಿ ನೀಡಲೆಂದು ಪ್ರಾರ್ಥಿಸಿ, ಟಿಎಪಿಸಿಎಂಎಸ್ ವತಿಯಿಂದ ಕಾರ್ಯಕ್ರಮಕ್ಕೆ ಸಹಕಾರ ನೀಡು ವುದಾಗಿ ಭರವಸೆ ನೀಡಿದರು. ಈ ವೇಳೆ ಟಿಎಪಿಸಿ ಎಂಎಸ್ ಉಪಾಧ್ಯಕ್ಷ ಮಲ್ಲಣ್ಣ, ಕಾರ್ಯದರ್ಶಿ ರಘುನಂದನ್, ಪುರಸಭಾ ಸದಸ್ಯರಾದ ಎಸ್.ಕೆ.ಕಿರಣ್, ಬಾದಾಮಿ ಮಂಜು, ಪಿಂಜಾರಾ ಫೋಲ್ ಟ್ರಸ್ಟ್ ಅಧ್ಯಕ್ಷ ಸುಭಾಷ್ ಚೌಧರಿ, ಕಸಬಾ ಸಹಕಾರ ಸಂಘದ ನಿರ್ದೇಶಕ ಟಿ.ಸಿ.ಘಣೇಶ್ ಕುಮಾರ್, ನಾಗರಾಜು, ತಿರುಮಕೂಡಲು ಲಕ್ಷ್ಮಣ, ನಾಗರಾಜು, ಗೋವಿಂದರಾಜು ಸೇರಿದಂತೆ ಮತ್ತಿತರಿದ್ದರು.

ಮುಂದಿನ 3 ತಿಂಗಳಲ್ಲಿ ಕಾಮಗಾರಿಗೆ ಚಾಲನೆ ನೀಡುವ ಭರವಸೆ

ಅನಿರ್ದಿಷ್ಟಾವಧಿ ಪ್ರತಿಭಟನೆ ಕೈಬಿಟ್ಟ ರೈತರು



ಪ್ರತಿಭಟನಾ ಸ್ಥಳಕ್ಕೆ ಶಾಸಕ ದರ್ಶನ್ ಭೇಟಿ ನೀಡಿ ರೈತರ ಮನವೊಲಿಸಿದರು.

ನಂಜನಗೂಡು, ನ.7– ಕಪಿಲಾ ನದಿಯಿಂದ ತಾಲೂಕಿನ ಹೆಡತಲೆ ಗ್ರಾಮದ ಹಳೆಗುಂಡ್ಲ ಚನ್ನಯ್ಯನಕೆರೆಗೆ ನೀರು ತುಂಬಿಸುವಂತೆ ಒತ್ತಾಯಿಸಿ ಸಾಮೂಹಿಕ ನಾಯಕತ್ವದ ರೈತ ಸಂಘ ಹಮ್ಮಿಕೊಂಡಿದ್ದ ಅನಿರ್ದಿಷ್ಟಾವಧಿ ಪ್ರತಿಭಟನಾ ಸ್ಥಳಕ್ಕೆ ಶಾಸಕ ದರ್ಶನ್ ಭೇಟಿ ನೀಡಿ 3 ತಿಂಗಳಲ್ಲಿ ಕಾಮಗಾರಿ ಆರಂಭಿಸುವ ಭರವಸೆ ನೀಡಿದ ಬಳಿಕ ರೈತರು ಪ್ರತಿಭಟನೆ ವಾಪಸ್ ಪಡೆದರು.

ಶಾಸಕ ದರ್ಶನ್ ಮಾತನಾಡಿ, ಕೌಲಂದೆ ಹೋಬಳಿಯನ್ನು ಹಸಿರೀಕರಣ ಮಾಡುವ ಉದ್ದೇಶದಿಂದ 90 ಕೋಟಿ ವೆಚ್ಚದಲ್ಲಿ ದೇವನೂರು ಏತ ನೀರಾವರಿ ಯೋಜನೆ ಅನುಷ್ಠಾನಗೊಳಿಸುವಂತೆ ಸರ್ಕಾರಕ್ಕೆ ಮನವಿ ಸಲ್ಲಿಸಿದ ಪರಿಣಾಮ ನನ್ನ ಮನವಿ ಪುರಸ್ಕರಿಸಿ ಸರ್ಕಾರ ದೇವನೂರು ಏತ ನೀರಾವರಿ ಯೋಜನೆಗೆ ಬಜೆಟ್‌ನಲ್ಲಿ ಅನುಮೋದನೆ ನೀಡಿ ಈಗಾಗಲೇ 90 ಕೋಟಿ ಅನುದಾನ ಬಿಡುಗಡೆಗೊಳಿಸಿದೆ. ಈ ಯೋಜನೆಯಿಂದ ತಾಲೂಕಿನ 15 ಕೆರೆಗಳಿಗೆ ನೀರು ತುಂಬಿಸಿ ರೈತರಿಗೆ ಅನುಕೂಲ ಕಲ್ಪಿಸಲಾಗುವುದು. ಈ ಪೈಕಿ ಹೆಡತಲೆ ಗ್ರಾಮದ ಚೆನ್ನಯ್ಯನ ಕೆರೆಯು ಸೇರ್ಪಡೆಯಾಗಿದೆ. ಈ ಯೋಜನೆಗೆ ಟೆಂಡರ್ ಪ್ರಕ್ರಿಯೆ ಪೂರ್ಣಗೊಳ್ಳುವ ಮೊದಲೇ ಗುತ್ತಿಗೆದಾರರ ನಡುವೆ ಪೈಪೋಟಿ ಏರ್ಪಟ್ಟು ನ್ಯಾಯಾಲಯದಿಂದ ತಡೆಯಾಜ್ಞೆ ತಂದಿದ್ದಾರೆ. ಇದರಿಂದ ಕಾಮಗಾರಿ ಆರಂಭವಾಗಲು ವಿಳಂಬವಾಗಿದೆ. ಮುಂದಿನ 3 ತಿಂಗಳೊಳಗೆ ಎಲ್ಲಾ ಅಡೆತಡೆ ನಿವಾರಿಸಿ ಗುದ್ದಲಿ ಪೂಜೆ ನೆರವೇರಿಸಿ ಕಾಮಗಾರಿ ಆರಂಭಿಸಲಾಗುವುದು. ಇದಕ್ಕೆ ನಿಮ್ಮೆಲ್ಲರ ಸಹಕಾರ ಅಗತ್ಯ. ಆದ್ದರಿಂದ ಪ್ರತಿಭಟನೆ ಕೈಬಿಡುವಂತೆ ಮನವಿ ಮಾಡಿದ ಹಿನ್ನೆಲೆಯಲ್ಲಿ ರೈತರು ಪ್ರತಿಭಟನೆ ವಾಪಸ್ ಪಡೆದರು.

ಈ ಸಂದರ್ಭ ಮಾಜಿ ಶಾಸಕ ಕಳಲೆ ಕೇಶವಮೂರ್ತಿ, ಮುಖಂಡರಾದ ದೊರೆಸ್ವಾಮಿ ನಾಯಕ, ರೈತ ಸಂಘದ ಜಿಲ್ಲಾಧ್ಯಕ್ಷ ಟಿ.ಆರ್. ವಿದ್ಯಾಸಾಗರ್, ಕಾರ್ಯದರ್ಶಿ ಇಮ್ಮಾವು ರಘು, ತಾಲೂಕು ಅಧ್ಯಕ್ಷ ಸತೀಶ್ ರಾವ್, ಮುಖಂಡರಾದ ಶ್ವೇತಾ, ದೊಡ್ಡಯ್ಯ, ಶಿವಣ್ಣ, ಸೇರಿದಂತೆ ಇತರರಿದ್ದರು.

ಮೈಸೂರಿನ ರಾಜಬೀದಿ, ಅರಮನೆ ಪ್ರಮುಖ ದ್ವಾರಕ್ಕೆ

ಅರ್ಜುನನ ಹೆಸರಿಡಲು ಮನವಿ



ಸಂಸದ ಯದುವೀರ್‌ಗೆ ಜನಧ್ವನಿ ಫೌಂಡೇಶನ್‌ನಿಂದ ಮನವಿ ಸಲ್ಲಿಸಲಾಯಿತು.

ಹುಣಸೂರು, ನ.7– ಮೈಸೂರಿನ ರಾಜಬೀದಿ ಅಥವಾ ಅರಮನೆ ಪ್ರಮುಖ ದ್ವಾರಕ್ಕೆ ದಸರಾ ಆನೆ ಅರ್ಜುನನ ಹೆಸರಿಡುವಂತೆ ಮೈಸೂರು ರಾಜವಂಶಸ್ಥರೂ ಆದ ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರಿಗೆ ಜನಧ್ವನಿ ಫೌಂಡೇಶನ್ ವತಿಯಿಂದ ಮನವಿ ಸಲ್ಲಿಸಲಾಯಿತು.

ಸಂಸದ ಯದುವೀರ್ ಅವರನ್ನು ಭೇಟಿ ಮಾಡಿದ ಫೌಂಡೇಶನ್ ಅಧ್ಯಕ್ಷ ಪ್ರವೀಣ್, ಸತತ 8 ಬಾರಿ ದಸರಾ ಮಹೋತ್ಸವದಲ್ಲಿ ಚಿನ್ನದ ಅಂಬಾರಿ ಹೊರುವ ಮೂಲಕ ಐತಿಹಾಸಿಕ ದಾಖಲೆ ನಿರ್ಮಿಸಿ, ಹಾಸನದಲ್ಲಿ ನಡೆದ ಕಾರ್ಯಾಚರಣೆ ವೇಳೆ ಕಾಡಾನೆ ದಾಳಿಗೆ ತುತ್ತಾಗಿ ಸಾವನ್ನಪ್ಪಿದ ಅರ್ಜುನನಿಗೆ ರಾಜ್ಯಾದ್ಯಂತ ಅಪಾರ ಅಭಿಮಾನಿಗಳಿದ್ದಾರೆ. ಅಲ್ಲದೇ ಈ ಬಾರಿಯ ದಸರಾ ವೇಳೆಯೂ ಅರ್ಜುನ ನೆನಪನ್ನು ಸಾಕಷ್ಟು ಮಂದಿ ಮೆಲಕು ಹಾಕಿದ್ದರು. ಹೀಗಾಗಿ ಅರ್ಜುನ ಆನೆಯ ಹೆಸರು ಚಿರಸ್ಥಾಯಿಯಾಗಿ ಉಳಿಸಲು ಮೈಸೂರಿನ ರಾಜಬೀದಿ ಅಥವಾ ಅರಮನೆ ಪ್ರಮುಖ ದ್ವಾರಕ್ಕೆ ಅರ್ಜುನನ ಹೆಸರಿಡಬೇಕು ಎಂದು ಮನವಿ ಮಾಡಿದರು. ಈ ವೇಳೆ ಯುವ ಮುಖಂಡ ಉಜ್ವಲ್ ಉಪಸ್ಥಿತರಿದ್ದರು.

ವಿಸ್ಡಂ ಶಾಲೆಯಲ್ಲಿ ಮಕ್ಕಳಿಗೆ ಶ್ರವಣ ತಪಾಸಣೆ



ವೈದ್ಯರ ತಂಡದಿಂದ ಮಕ್ಕಳ ತಪಾಸಣೆ ನಡೆಯಿತು.



ನಂಜನಗೂಡು, ನ.7– ತಾಲೂಕಿನ ದೇವಿರಮ್ಮನಹಳ್ಳಿಯ ವಿಸ್ಡಂ ಟೆಕ್ನೋ ಶಾಲೆಯಲ್ಲಿ ಗುರುವಾರ ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆಯ ನುರಿತ ವೈದ್ಯರ ತಂಡದಿಂದ ಮಕ್ಕಳ ಶ್ರವಣ ಮತ್ತು ಧ್ವನಿಪೆಟ್ಟಿಗೆ ತಪಾಸಣೆ ನಡೆಸಲಾಯಿತು.

ಶಾಲೆ ಮಕ್ಕಳಿಗೆ ಆಯಾ ತರಗತಿಯಲ್ಲೇ ವಾಕ್ ಮತ್ತು ಶ್ರವಣ ಸಂಸ್ಥೆಯಿಂದ ಬಂದಿದ್ದ ನುರಿತ 13 ಶ್ರವಣ ಹಾಗೂ ಭಾಷಾ ತಜ್ಞ ವೈದ್ಯರ ತಂಡ ಸಾಧನ ಮತ್ತು ಸಲಕರಣೆಗಳನ್ನು ಬಳಕೆ ಮಾಡಿ ಮಕ್ಕಳ ಶ್ರವಣ ಹಾಗೂ ಧ್ವನಿಪೆಟ್ಟಿಗೆ ತಪಾಸಣೆ ನಡೆಸಿ ಮಕ್ಕಳಿಗೆ ಸೂಕ್ತ ನೆರವು ಹಾಗೂ ಮಾರ್ಗದರ್ಶನ ನೀಡಲಾಯಿತು.

ವಿದ್ಯಾರ್ಥಿಗಳ ಮಾತಿನ ನಿರರ್ಗಳತೆ, ತೊದಲುವಿಕೆ ಸಮಸ್ಯೆಗಳು, ಓದುವ ಮತ್ತು ಬರೆಯುವ ಅಂಶಗಳನ್ನು ಒಳಗೊಂಡಂತೆ ಶೈಕ್ಷಣಿಕ ಸ್ವಾಸ್ಥ್ಯದ ಮೇಲೆ ಕೇಂದ್ರಿಕರಿಸಿ ತಪಾಸಣೆ ನಡೆಸಲಾಯಿತು. ಇದರಿಂದಾಗಿ ವಿದ್ಯಾರ್ಥಿಗಳಲ್ಲಿ ಭಾಷಣ, ಶ್ರವಣ ಮತ್ತು ಶೈಕ್ಷಣಿಕ ಸವಾಲುಗಳ ಎಚ್ಚರಿಕೆಯ ಚಿಹ್ನೆಗಳನ್ನು ಗುರುತಿಸಲು ಅಗತ್ಯ ಜ್ಞಾನ ಹೆಚ್ಚಿಸುವ ಉದ್ದೇಶದಿಂದ ಈ ಶಿಬಿರ ನೆರವಾಗಲಿದೆ ಎಂದು ವೈದ್ಯರು ಅಭಿಪ್ರಾಯಪಟ್ಟರು.

ಶಿಬಿರದಲ್ಲಿ ಶಾಲೆ ಶಿಕ್ಷಕರು ಪ್ರತಿ ಮಕ್ಕಳ ಭೌತಿಕ ಬೆಳವಣಿಗೆ ಬಗ್ಗೆ ವೈದ್ಯರೊಂದಿಗೆ ಸಮಾಲೋಚನೆ ನಡೆಸಿ ಅಗತ್ಯ ನೆರವು ನೀಡುವಲ್ಲಿ ನೆರವಾದರು. 2 ದಿನಗಳ ಕಾಲ ಆಯೋಜಿಸಿರುವ ಈ ಶಿಬಿರದಲ್ಲಿ ಪ್ರಾಥಮಿಕ ಶಾಲೆ ಮಕ್ಕಳನ್ನು ತಪಾಸಣೆಗೆ ಒಳಪಡಿಸಲಾಗುತ್ತದೆ. ಇದರಿಂದ ಮಕ್ಕಳಲ್ಲಿ ಏನಾದರೂ ಕಿವಿ, ಮಾತಿನ ಧ್ವನಿಪೆಟ್ಟಿಗೆ ದೋಷವಿದ್ದರೆ ಆರಂಭದಲ್ಲೇ ಪತ್ತೆ ಹಚ್ಚಿ ನೆರವು ನೀಡುವ ಉದ್ದೇಶದಿಂದ ಈ ಶಿಬಿರ ಆಯೋಜಿಸಲಾಗಿದೆ. ಮಕ್ಕಳಿಗೆ ಕಲಿಕೆ ಜತೆಗೆ ಆರೋಗ್ಯದ ಬಗ್ಗೆಯೂ ಶಾಲೆಯು ಕಾಳಜಿ ತೋರುತ್ತಿದ್ದು, ಕಾಲಕಾಲಕ್ಕೆ ಅಗತ್ಯ ವೈದ್ಯಕೀಯ ನೆರವು ನೀಡುವುದು ನಮ್ಮ ಆದ್ಯತೆಯಾಗಿದೆ ಎಂದು ಶಾಲೆ ಕಾರ್ಯದರ್ಶಿ ಎಚ್.ಎಸ್.ಮಂಜುನಾಥ್ ತಿಳಿಸಿದರು.

ಗಾಂಜಾ ಮಾರುತ್ತಿದ್ದ ತಾಯಿ, ಮಗನ ಬಂಧನ





ತಿ.ನರಸೀಪುರ, ನ.7– ಬ್ಯೂಟಿ ಪಾರ್ಲರ್ ನಡೆಸುವ ನೆಪದಲ್ಲಿ ಗಾಂಜಾ ಮಾರಾಟ ಮಾಡುತ್ತಿದ್ದ ತಾಯಿ, ಮಗನನ್ನು ಪಟ್ಟಣ ಪೊಲೀಸರು ಬಂಧಿಸಿದ್ದಾರೆ.

ಪಟ್ಟಣದ ಸರ್ಕಾರಿ ಸಾರ್ವಜನಿಕ ಆಸ್ಪತ್ರೆ ರಸ್ತೆಯಲ್ಲಿ ವಸುಂಧರಾ ಬ್ಯೂಟಿ ಪಾರ್ಲರ್ ನಡೆಸುತ್ತಿರುವ ಪಟ್ಟಣದ ಇಂದಿರಾ ಕಾಲೋನಿ ನಿವಾಸಿ ವಸುಂಧರ(47) ಹಾಗೂ ಆಕೆಯ ಪುತ್ರ ಪ್ರಶಾಂತ್(27) ಬಂಧಿತರು. ಖಚಿತ ಮಾಹಿತಿ ಮೇರೆಗೆ ವಸುಂಧರಾ ಮನೆ ಮೇಲೆ ದಾಳಿ ನಡೆಸಿದ ಪಟ್ಟಣ ಪೊಲೀಸರು ತಾಯಿ ಮಗನನ್ನು ಬಂಧಿಸಿದ್ದಾರೆ. ಅವರಿಂದ 195 ಗ್ರಾಂ ಗಾಂಜಾ ಸೊಪ್ಪು, 3 ಮೊಬೈಲ್ ಹಾಗೂ 6450 ರೂ. ವಶಪಡಿಸಿಕೊಂಡಿದ್ದಾರೆ.

ಬ್ಯೂಟಿ ಪಾರ್ಲರ್‌ಗೆ ಬರುತ್ತಿದ್ದವರೊಂದಿಗೆ ಸಂಪರ್ಕ ಸಾಧಿಸುತ್ತಿದ್ದ ಆರೋಪಿ ವಸುಂಧರಾ ಅವರಿಗೆ ಗಾಂಜಾ ಕೊಳ್ಳುವಂತೆ ಪ್ರೇರೇಪಿಸುತ್ತಿದ್ದು, ಈ ವ್ಯವಹಾರಕ್ಕೆ ತಮ್ಮ ಮಗನನ್ನು ತೊಡಗಿಸಿಕೊಂಡಿದ್ದರೆಂದು ತಿಳಿದು ಬಂದಿದೆ. ಅಲ್ಲದೇ ಪಟ್ಟಣದ ಕೆಲ ಅಂಗಡಿಗಳಲ್ಲಿ ಒಮ್ನಿ ಎಂಬ ಹೆಸರಿನ ಸಲ್ಯೂಷನ್ ಹಾಗೂ ಎರೆಜ್ ಎಕ್ಸ್ (ಸ್ಕೂಟರ್ ಪಂಚರ್ ಹಾಕಲು ಬಳಸುವ ಗಮ್) ಎಂಬ ಮತ್ತು ಬರಿಸುವ ಮಾದಕ ವಸ್ತು ಮಾರಾಟ ಮಾಡುತ್ತಿರುವ ಬಗ್ಗೆ ಆರೋಪ ಕೇಳಿ ಬಂದಿದ್ದು, ಇದರಿಂದ ಯುವಕರು, ಶಾಲಾ ಮಕ್ಕಳು ದಾರಿ ತಪ್ಪುತ್ತಿದ್ದಾರೆ ಎಂದು ಸಾರ್ವಜನಿಕರು ಆತಂಕ ವ್ಯಕ್ತಪಡಿಸಿದ್ದಾರೆ.

ಮೈಸೂರು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ವಿಷ್ಣುವರ್ಧನ್ ಹಾಗೂ ಎಎಸ್‌ಪಿ ಎನ್.ನಾಗೇಶ್ ಅವರ ಮಾರ್ಗದರ್ಶದಲ್ಲಿ ದಾಳಿ ನಡೆಸಿದ ವೃತ್ತ ನಿರೀಕ್ಷಕ ಧನಂಜಯ, ಎಸ್ಐ ಜಗದೀಶ್ ಧೂಳ್‌ಶೆಟ್ಟಿ, ಎಎಸ್ಐ ಸತೀಶ್, ಅಬ್ದುಲ್ ಲತೀಫ್, ಭಾಸ್ಕರ್, ಶಿವಸ್ವಾಮಿ, ಪ್ರಭಾಕರ್, ಸಿಬ್ಬಂದಿ ವರ್ಗದವರು ಕಾರ್ಯಾಚರಣೆಯಲ್ಲಿ ಭಾಗವಹಿಸಿದ್ದರು.

ಸಹಕಾರ ಸಂಘದ ಅಭಿವೃದ್ಧಿಗೆ ಶ್ರಮಿಸಿ



ಶಾಸಕ ಡಿ.ರವಿಶಂಕರ್ ಅವರನ್ನು ಸನ್ಮಾನಿಸಲಾಯಿತು.

ಸಾಲಿಗ್ರಾಮ, ನ.7– ಸಹಕಾರ ಸಂಘದ ಅಭಿವೃದ್ಧಿಗೆ ಅಧ್ಯಕ್ಷ, ಉಪಾಧ್ಯಕ್ಷರು ಹಾಗೂ ನಿರ್ದೇಶಕರು ಶ್ರಮಿಸಬೇಕು ಎಂದು ಶಾಸಕ ಡಿ.ರವಿಶಂಕರ್ ತಿಳಿಸಿದರು.

ಸಾಲಿಗ್ರಾಮ ಕೃಷಿ ಪತ್ತಿನ ಸಹಕಾರ ಸಂಘಕ್ಕೆ ಭೇಟಿ ನೀಡಿ ಮಾತನಾಡಿದ ಅವರು, ರೈತರ ಮತ್ತು ಮಹಿಳೆಯರ ಅಭಿವೃದ್ಧಿಗೆ ಸಹಕಾರ ಸಂಘಗಳು ಸಹಕಾರಿಯಾಗಿವೆ. ಹಾಗಾಗಿ ರೈತರು ಮತ್ತು ಮಹಿಳಾ ಸಹಾಯ ಸಂಘಗಳು ಸಹಕಾರ ಬ್ಯಾಂಕುಗಳಲ್ಲಿ ಹೆಚ್ಚು ವ್ಯವಹಾರ ನಡೆಸಿದರೇ ಸಕಾಲದಲ್ಲಿ ನಿಮಗೆ ಸಾಲ ಸೌಲಭ್ಯಗಳು ಸಿಗುತ್ತವೆ. ದುಬಾರಿ ಬಡ್ಡಿ ಇರುವುದರಿಂದ ಖಾಸಗಿ ಫೈನಾನ್ಸ್‌ಗಳಲ್ಲಿ ಸಾಲ ಮಾಡಬೇಡಿ. ಬಡ್ಡಿ ಕಟ್ಟಲಾಗದೆ ಸಂಕಷ್ಟಕ್ಕೆ ಸಿಲುಕಿರುವ ಸಾಕಷ್ಟು ರೈತ ಕುಟುಂಬಗಳನ್ನು ಈಗಾಗಲೇ ಕಂಡಿದ್ದೇವೆ. ಹಾಗಾಗಿ ನಿಮ್ಮೂರಿನ ಕೃಷಿ ಪತ್ತಿನ ಸಹಕಾರ ಸಂಘಗಳ ಅಭಿವೃದ್ಧಿಪಡಿಸಿ ನೀವು ಕೂಡ ಅಭಿವೃದ್ಧಿ ಹೊಂದಿ ಎಂದು ರೈತರಿಗೆ ಕಿವಿಮಾತು ಹೇಳಿದರು.

ಸಂಘದ ವ್ಯಾಪ್ತಿಯ ರೈತರಿಗೆ ಸಾಲ ಸೌಲಭ್ಯ ಒದಗಿಸಿಕೊಡಲು ಆಡಳಿತ ಮಂಡಳಿ ಮತ್ತು ಅಧಿಕಾರಿಗಳು ಸಹಕಾರ ನೀಡಿ. ಈಗಾಗಲೇ ಸಾಲಕ್ಕಾಗಿ ಬಂದಿರುವ ಅರ್ಜಿಗಳಿಗೆ ಸಾಲ ಒದಗಿಸುವ ಕೆಲಸ ಮಾಡಿ. ಈ ಸಂಬಂಧ ಜಿಲ್ಲಾ ಮತ್ತು ತಾಲೂಕು ಡಿಸಿಸಿ ಬ್ಯಾಂಕ್ ವ್ಯವಸ್ಥಾಪಕರೊಂದಿಗೆ ಮಾತನಾಡಿ. ಸಾಲಿಗ್ರಾಮ ಕೃಷಿ ಪತ್ತಿನ ಸಹಕಾರ ಸಂಘಕ್ಕೆ ಹೆಚ್ಚಿನ ಸಾಲ ನೀಡುವಂತೆ ಸೂಚಿಸುತ್ತೇನೆ ಎಂದರು.

ಈ ವೇಳೆ ಪಿಎಸಿಎಸ್ ಪ್ರಭಾರ ಅಧ್ಯಕ್ಷ ಮಂಜುನಾಥ್, ತಾಲೂಕು ಎಸ್‌ಸಿ ಘಟಕದ ಕಾಂಗ್ರೆಸ್ ಅಧ್ಯಕ್ಷ ಕಂಠಿ ಕುಮಾರ್, ತಾಪಂ ಮಾಜಿ ಸದಸ್ಯ ಚಂದು, ಅರುಣ್ ರಾಜ್, ಬಲರಾಮೇಗೌಡ, ಸಂತೋಷ್, ಮೂರ್ತಿ, ದೇವರಾಜ್, ಸೈಯದ್ ಶೌಕತ್, ನಾರಾಯಣ, ಪೂರ್ಣಚಂದ್ರ, ಕಾರ್ಯದರ್ಶಿ ಸುರೇಶ್ ಸೇರಿದಂತೆ ಇತರರಿದ್ದರು.

ಖೋಖೋ ಪಂದ್ಯಾವಳಿಗೆ ಚಾಲನೆ



ಖೋಖೋ ಪಂದ್ಯಾವಳಿಗೆ ಚಾಲನೆ ನೀಡಲಾಯಿತು.

ಹುಣಸೂರು, ನ.7– ಶಾಲಾ ಶಿಕ್ಷಣ ಇಲಾಖೆ ಹಾಗೂ ಟ್ಯಾಲೆಂಟ್ ಶಿಕ್ಷಣ ಸಂಸ್ಥೆ ಹುಣಸೂರು ಸಹಯೋಗದಲ್ಲಿ ನಡೆದ ಮೈಸೂರು ವಿಭಾಗ ಮಟ್ಟದ 14 ಹಾಗೂ 17 ವರ್ಷದೊಳಗಿನ ಖೋಖೋ ಪಂದ್ಯಾವಳಿಯನ್ನು ಮೈಸೂರು ಜಿಲ್ಲಾ ಉಪ ನಿರ್ದೇಶಕ ಜವರೇಗೌಡ ಉದ್ಘಾಟಿಸಿದರು.

ಪಂದ್ಯಾವಳಿಯಲ್ಲಿ 8 ಜಿಲ್ಲೆಗಳ 32 ತಂಡಗಳು ಭಾಗವಹಿಸಿದ್ದವು. ಈ ವೇಳೆ ಟ್ಯಾಲೆಂಟ್ ಶಿಕ್ಷಣ ಸಂಸ್ಥೆ ನಿರ್ದೇಶಕ ಡಾ.ಶ್ರೀನಾಥ್, ಬಿಇಓ ಮಹದೇವ, ಜಿಲ್ಲಾ ದೈಹಿಕ ಶಿಕ್ಷಣ ಪರೀಕ್ಷಕ ಸುರೇಶ್, ಹುಣಸೂರು ತಾಲೂಕು ದೈಹಿಕ ಶಿಕ್ಷಣ ಪರಿವೀಕ್ಷಕ ಲೋಕೇಶ್, ಸಂಸ್ಥೆಯ ಪ್ರಾಂಶುಪಾಲ ಮಂಜುನಾಥ್ ಸೇರಿದಂತೆ ಇನ್ನಿತರರಿದ್ದರು.

ನಾಲ್ವರು ಬಿಜೆಪಿ ನಗರಸಭಾ ಸದಸ್ಯರಿಗೆ ನೋಟಿಸ್ ಜಾರಿ

ನಂಜನಗೂಡು, ನ.7– ನಗರಸಭೆಯ ನಾಲ್ವರು ಬಿಜೆಪಿ ಸದಸ್ಯರ ಸದಸ್ಯತ್ವವನ್ನು ಅನರ್ಹಗೊಳಿಸುವ ಸಂಬಂಧ ನ.20 ರಂದು ವಿಚಾರಣೆಗಾಗಿ ಜಿಲ್ಲಾಧಿಕಾರಿಗಳು ನೋಟಿಸ್ ಜಾರಿಗೊಳಿಸಿದ್ದಾರೆ.

ಇಲ್ಲಿನ ನಗರಸಭೆ ಅಧ್ಯಕ್ಷ–ಉಪಾಧ್ಯಕ್ಷರ ಚುನಾವಣೆಯಲ್ಲಿ ಬಿಜೆಪಿ 15, ಜೆಡಿಎಸ್ 3, ಕಾಂಗ್ರೆಸ್ 9, ಪಕ್ಷೇತರರು 3 ಸ್ಥಾನಗಳಲ್ಲಿ ಗೆದ್ದಿದ್ದರು. ಬಿಜೆಪಿ, ಜೆಡಿಎಸ್ ಸದಸ್ಯರ ಬೆಂಬಲದೊಂದಿಗೆ ಮೊದಲ ಅವಧಿಯಲ್ಲಿ ಅಧಿಕಾರ ಹಿಡಿಯುವಲ್ಲಿ ಯಶಸ್ವಿಯಾಗಿತ್ತು. 2ನೇ ಅವಧಿಯಲ್ಲಿಯೂ ಸಹ ಜೆಡಿಎಸ್ ಮತ್ತು ಬಿಜೆಪಿ ಪಕ್ಷಗಳ ನಡುವೆ ರಾಷ್ಟ್ರ ಮಟ್ಟದಲ್ಲಿ ಹೊಂದಾಣಿಕೆಯಾಗಿರುವುದರಿಂದ ಬಿಜೆಪಿಯೇ ಅಧಿಕಾರ ಹಿಡಿಯಲಿದೆ ಎಂಬ ವಿಶ್ವಾಸವಿತ್ತು. ಆದರೆ ಶಾಸಕ ದರ್ಶನ್ ರಾಜಕೀಯ ತಂತ್ರಗಾರಿಕೆಯಿಂದ ಕಾಂಗ್ರೆಸ್ ಪಕ್ಷ ಅಧಿಕಾರ ಹಿಡಿಯುವಲ್ಲಿ ಯಶಸ್ವಿಯಾಗಿತ್ತು.

ಬಿಜೆಪಿಯ 1ನೇ ವಾರ್ಡ್ ಸದಸ್ಯ ಗಿರೀಶ್, 12ನೇ ವಾರ್ಡ್ ಸದಸ್ಯೆ ಗಾಯತ್ರಿ, 22ನೇ ವಾರ್ಡ್ ಸದಸ್ಯೆ ಮೀನಾಕ್ಷಿ, 27ನೇ ವಾರ್ಡ್ ಸದಸ್ಯೆ ವಿಜಯಲಕ್ಷ್ಮಿ ಅವರು ಪಕ್ಷದಿಂದ ವಿಪ್ ಜಾರಿಯಾಗಿದ್ದರೂ, ಚುನಾವಣೆಗೆ ಗೈರು ಹಾಜರಾಗುವ ಮೂಲಕ ಕಾಂಗ್ರೆಸ್ ಅಧಿಕಾರ ಹಿಡಿಯಲು ಸಹಕರಿಸಿದ್ದಾರೆ. ಆದ್ದರಿಂದ ಪಕ್ಷಾಂತರ ನಿಷೇಧ ಕಾಯ್ದೆ ಅಡಿ ಅವರ ಸದಸ್ಯತ್ವ ಅನರ್ಹತೆಗೊಳಿಸುವಂತೆ ಬಿಜೆಪಿ ನಗರಾಧ್ಯಕ್ಷ ಸಿದ್ದರಾಜು ಮತ್ತು ಅಧ್ಯಕ್ಷ ಸ್ಥಾನ ಆಕಾಂಕ್ಷಿ ಪಿ.ದೇವ ಜಿಲ್ಲಾಧಿಕಾರಿಗಳು ಮತ್ತು ಚುನಾವಣಾಧಿಕಾರಿಯಾಗಿದ್ದ ಉಪ ವಿಭಾಗಾಧಿಕಾರಿಗಳಿಗೆ ದೂರು ಸಲ್ಲಿಸಿದ್ದರು. ಈ ಸಂಬಂಧ ಜಿಲ್ಲಾಧಿಕಾರಿಗಳು ಜಿಲ್ಲಾಧಿಕಾರಿಗಳ ನ್ಯಾಯಾಲಯದಲ್ಲಿ ನ.20 ರಂದು ವಿಚಾರಣೆಗೆ ಹಾಜರಾಗಿ ಸ್ಪಷ್ಟೀಕರಣ ನೀಡುವಂತೆ ನಾಲ್ವರು ಸದಸ್ಯರಿಗೂ ನೋಟಿಸ್ ಜಾರಿ ಮಾಡಿದ್ದಾರೆ.

ಸೇವಾ ಟ್ರಸ್ಟ್‌ಗಳು ಯುವಕರಿಗೆ ಸ್ಫೂರ್ತಿ ತುಂಬಬೇಕು

ತಿ.ನರಸೀಪುರ, ನ.7– ಸೇವಾ ಟ್ರಸ್ಟ್‌ಗಳು ಸಮಾಜಕ್ಕೆ ಕೊಡುಗೆ ನೀಡುವ ಮೂಲಕ ಸಮಾಜದ ಕಡು ಬಡವರನ್ನು ಗುರುತಿಸಿ ಅವರಿಗೆ ಸಹಾಯ ಮಾಡಬೇಕು. ಅಲ್ಲದೇ ಯುವಕರಿಗೆ ಸ್ಫೂರ್ತಿ ತುಂಬಬೇಕು ಎಂದು ಶಿವಕುಮಾರಸ್ವಾಮಿ ಸೇವಾ ಟ್ರಸ್ಟ್ ಗೌರವಾಧ್ಯಕ್ಷ ಹೆಳವರ ಹುಂಡಿ ಸಿದ್ದಪ್ಪ ತಿಳಿಸಿದರು.

ಪಟ್ಟಣದ ಹೆಳವರಹುಂಡಿಯಲ್ಲಿ ಸಿದ್ಧಗಂಗಾ ಶ್ರೀಶಿವಕುಮಾರ ಸ್ವಾಮಿಗಳ ಸೇವಾ ಟ್ರಸ್ಟ್ ವತಿಯಿಂದ ನಡೆದ ಕಾರ್ಯಕ್ರಮದಲ್ಲಿ ಸನ್ಮಾನ ಸ್ವೀಕರಿಸಿ ಮಾತನಾಡಿದ ಅವರು, ಸಂಘ ಸಂಸ್ಥೆಗಳು ಸಮಾಜ ಸೇವೆಯೊಂದಿಗೆ ಮಾದರಿಯಾಗಿ ಕಾರ್ಯ ನಿರ್ವಹಿಸುವ ಹಾಗೂ ಸಮಸ್ಯೆಗಳಿಗೆ ಸ್ಪಂದಿಸುವ ಕೆಲಸ ಮಾಡಿದ್ದಲ್ಲಿ ಪ್ರಗತಿ ಕಾಣಲು ಸಾಧ್ಯ ಎಂದರು.

ಟ್ರಸ್ಟ್ ಹಾಗೂ ಸಂಘ–ಸಂಸ್ಥೆಗಳು ಸ್ಥಳೀಯ ನಾಗರಿಕರ ಸಮಸ್ಯೆಗಳನ್ನು ಅರಿತು ಕಾರ್ಯಕ್ರಮ ರೂಪಿಸಿದಾಗ ಮಾತ್ರ ಟ್ರಸ್ಟ್‌ಗಳಿಗೆ ಸೇವಾ ಸಾರ್ಥಕತೆ ಬರುತ್ತದೆ. ಟ್ರಸ್ಟ್‌ಗಳಲ್ಲಿ ಕಾರ್ಯ ನಿರ್ವಹಿಸುವರು ಸಮಾಜಸೇವೆ ಉದ್ದೇಶ ಹೊಂದಿ ಕೆಲಸ ಮಾಡಬೇಕು ಎಂದರು.

ತಾಲೂಕು ವೀರಶೈವ ಮಹಾಸಭಾ ತಿ.ನರಸೀಪುರ ತಾಲೂಕು ಘಟಕದ ಪ್ರಧಾನ ಕಾರ್ಯದರ್ಶಿ ಕುರುಬೂರು ಕೆ.ವಿ.ಶಿವಶಂಕರ್, ಕಾರ್ಯದರ್ಶಿ ಬೆನಕನಹಳ್ಳಿ ಕಾರ್ ಮಲ್ಲಪ್ಪ, ಬಸವ ಬಳಗದ ಅಧ್ಯಕ್ಷ ಪರಮೇಶ್ ಪಟೇಲ್ ಹಾಗೂ ನಿರ್ದೇಶಕರಾದ ಕೆಬ್ಬೆಹುಂಡಿ ಮಹೇಶ್ ಮತ್ತು ಟ್ರಸ್ಟಿನ ಅಧ್ಯಕ್ಷ ಬಜ್ಜಿ ಲಿಂಗಪ್ಪ, ಕಸಾಪ ಅಧ್ಯಕ್ಷ ಕನ್ನಡ ಪುಟ್ಟಸ್ವಾಮಿ ಅವರನ್ನು ಸನ್ಮಾನಿಸಲಾಯಿತು.

ಈ ವೇಳೆ ಹೆಳವರಹುಂಡಿ ಸಿದ್ದಪ್ಪ ಅವರನ್ನು ಟ್ರಸ್ಟಿನ ಸದಸ್ಯರು ಗೌರವಿಸಿದರು. ತಾಪಂ ಮಾಜಿ ಸದಸ್ಯ ಕೆ.ಜಿ. ವೀರಣ್ಣ, ಕು.ಶಿ.ಶೃಂಗೀಶ್, ಮುಡುಕನಪುರ ನಾಗಭೂಷಣ್, ಬಿಲಿಗೆರೆಹುಂಡಿ ನಟರಾಜು, ತಾಯೂರು ಮಲ್ಲಣ್ಣ, ತಾಲೂಕು ಜಡಿಎಸ್ ಅಧ್ಯಕ್ಷ ಚಿನ್ನಸ್ವಾಮಿ, ಹೆಳವರಹುಂಡಿ ಮೂರ್ತಿ, ಟ್ರಸ್ಟಿ ಕಾರ್ಯದರ್ಶಿ ಮಲ್ಲೇಶ್, ವಾಟಾಳು ಗುರುಪಾದಣ್ಣ, ಸಂಚಾಲಕರಾದ ಮಾದಪ್ಪ, ಹೆಳವರಹುಂಡಿ ಬಸಪ್ಪ, ನಿರ್ದೇಶಕರಾದ ಕೆಬ್ಬೆಹುಂಡಿ ಶಿವಕುಮಾರ್, ಟ್ರಸ್ಟ ಪದಾಧಿಕಾರಿಗಳು, ಸಮಾಜದ ಮುಖಂಡರು ಭಾಗವಹಿಸಿದ್ದರು.



ಸಿದ್ಧಗಂಗಾ ಶ್ರೀಶಿವಕುಮಾರ ಸ್ವಾಮಿ ಸೇವಾ ಟ್ರಸ್ಟ್‌ನಿಂದ ಗಣ್ಯರನ್ನು ಸನ್ಮಾನಿಸಲಾಯಿತು.

ಮೂಲ ಸೌಕರ್ಯ ಕಲ್ಪಿಸಿಲ್ಲವೆಂದು ಪೋಷಕರಿಂದ ದೂರು

ಏಕಲವ್ಯ ವಸತಿ ಶಾಲೆಗೆ ತಹಸೀಲ್ದಾರ್ ಭೇಟಿ, ಪರಿಶೀಲನೆ



ವಸತಿ ಶಾಲೆಗೆ ತಹಶೀಲ್ದಾರ್ ಶ್ರೀನಿವಾಸ್, ಆರೋಗ್ಯಾಧಿಕಾರಿ ಡಾ.ರವಿಕುಮಾರ್ ಭೇಟಿ ನೀಡಿ ಪರಿಶೀಲಿಸಿದರು.

ಹೆಚ್.ಡಿ.ಕೋಟೆ, ನ.7– ಕಳೆದ 6 ತಿಂಗಳಿಂದ ಮಕ್ಕಳಿಗೆ ಮೂಲ ಸೌಕರ್ಯ ಕಲ್ಪಿಸಿಲ್ಲ ಎಂದು ಪೋಷಕರು ನೀಡಿದ ದೂರಿನ ಮೇರೆಗೆ ತಾಲೂಕಿನ ಸೊಳ್ಳೇಪುರ ಏಕಲವ್ಯ ಮಾದರಿ ವಸತಿ ಶಾಲೆಗೆ ತಹಸೀಲ್ದಾರ್ ಶ್ರೀನಿವಾಸ್ ಹಾಗೂ ತಾಲೂಕು ಆರೋಗ್ಯಾಧಿಕಾರಿ ಡಾ.ರವಿಕುಮಾರ್ ಭೇಟಿ ನೀಡಿ ಪರಿಶೀಲಿಸಿದರು.

ಸೊಳ್ಳೇಪುರ ಏಕಲವ್ಯ ಮಾದರಿ ವಸತಿ ಶಾಲೆಯಲ್ಲಿ ಚಾಮರಾಜನಗರ, ಮೈಸೂರು ಸೇರಿದಂತೆ ವಿವಿಧೆಡೆಯಿಂದ ಆಗಮಿಸಿರುವ 384 ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದು, ಕಳೆದ 6 ತಿಂಗಳಿಂದ ಮಕ್ಕಳಿಗೆ ದಿನಬಳಕೆಯ ಸೋಪು, ಟೂಥ್ ಬ್ರಷ್, ಪೇಸ್ಟ್, ಸ್ಯಾನಿಟರಿ ಪ್ಯಾಡ್ಸ್, ಹಾಸಿಗೆ, ದಿಂಬು, ಬೆಡ್‌ಶೀಟ್ ಸೇರಿದಂತೆ ಮತ್ತಿತರ ಮೂಲ ಸೌಕರ್ಯಗಳನ್ನು ಒದಗಿಸಿಲ್ಲ. ಈ ವಿಷಯವನ್ನು ಹಲವು ಬಾರಿ ಸಂಬಂಧಪಟ್ಟ ಅಧಿಕಾರಿಗಳ ಗಮನಕ್ಕೆ ತಂದರೂ ಯಾವುದೇ ಪ್ರಯೋಜನವಾಗಿಲ್ಲ ಎಂದು ಪೋಷಕರು ದೂರು ನೀಡಿದ ಹಿನ್ನಲೆಯಲ್ಲಿ ತಹಸೀಲ್ದಾರ್ ಶ್ರೀನಿವಾಸ್ ಹಾಗೂ ಆರೋಗ್ಯಾಧಿಕಾರಿ ಡಾ.ರವಿಕುಮಾರ್ ಭೇಟಿ ನೀಡಿ ಪರಿಶೀಲಿಸಿ ವಸತಿ ಶಾಲೆ ಪ್ರಾಂಶುಪಾಲ ರಾಕೇಶ್ ಚಂದ್ರವರ್ಮಾ ಅವರಿಂದ ಮಾಹಿತಿ ಪಡೆದರು. ಬಳಿಕ ಜಿಲ್ಲಾ ಗಿರಿಜನ ಅಭಿವೃದ್ಧಿ ಇಲಾಖೆ ಅಧಿಕಾರಿ ಮಲ್ಲೇಶ್ ಅವರಿಗೆ ದೂರವಾಣಿ ಕರೆ ಮಾಡಿ ವಾರದೊಳಗೆ ಸಮಸ್ಯೆ ಪರಿಹರಿಸುವಂತೆ ಸೂಚಿಸಿದರು.

> ಕಳೆದ 6 ತಿಂಗಳಿಂದ ಏಕಲವ್ಯ ಮಾದರಿ ವಸತಿ ಶಾಲೆಯ 384 ಮಕ್ಕಳಿಗೆ ಮೂಲ ಸೌಲಭ್ಯ ಸಿಗುತ್ತಿಲ್ಲ ಎಂದು ಪರಿಶಿಷ್ಟ ಕಲ್ಯಾಣ ವರ್ಗಗಳ ಇಲಾಖೆ ಅಧಿಕಾರಿ ಮಹೇಶ್ ಹಾಗೂ ಜಿಲ್ಲಾ ಗಿರಿಜನ ಅಭಿವೃದ್ಧಿ ಅಧಿಕಾರಿ ಮಲ್ಲೇಶ್ ಅವರಿಗೆ ಹಲವು ಬಾರಿ ದೂರು ನೀಡಿದರೂ ಕಾಳಜಿ ವಹಿಸಿಲ್ಲ. ಈ ಸಂಬಂಧ ತಹಸೀಲ್ದಾರ್ ಆಶ್ರಮ ಶಾಲೆಗೆ ಭೇಟಿ ನೀಡುತ್ತಿದ್ದಾರೆ ಎಂದು ಅಧಿಕಾರಿಗಳಿಗೆ ತಿಳಿಸಿದ್ದರೂ, ಹೆಚ್.ಡಿ.ಕೋಟೆ ಕೇಂದ್ರ ಸ್ಥಾನದಲ್ಲಿದ್ದು ಆಶ್ರಮ ಶಾಲೆಗೆ ಭೇಟಿ ನೀಡದಿರುವುದು ವಿಪರ್ಯಾಸ. -ಜಿ.ಸ್ವಾಮಿ, ಪೋಷಕರ ಸಮಿತಿ ಅಧ್ಯಕ್ಷ.

ವಿದ್ಯಾರ್ಥಿಗಳನ್ನು ಭೇಟಿ ಮಾಡಿದ ತಹಸೀಲ್ದಾರ್ ಶ್ರೀನಿವಾಸ್ ಮಾತನಾಡಿ, ಪಾಠ ಪ್ರವಚನ ಸರಿಯಾಗಿ ನಡೆಯುತ್ತಿದೆಯಾ, ವಸತಿ ಶಾಲೆಯಲ್ಲಿ ಮೂಲ ಸೌಲಭ್ಯ ಕೊರತೆಯಾಗಿರುವ ಬಗ್ಗೆ ತಿಳಿದು ಬಂದಿದ್ದು, ಇದೀಗ ನಿಮ್ಮ ಬಳಿ ನಾವೇ ಬಂದಿದ್ದೇವೆ. ನಿಮ್ಮ ಸಮಸ್ಯೆಗಳು ಏನಿದ್ದರೂ ನಮ್ಮ ಬಳಿ ಹೇಳಿಕೊಳ್ಳಿ ಎಂದಾಗ ವಿದ್ಯಾರ್ಥಿನಿ ಚೇತನ ಮಾತನಾಡಿ, ಪಾಠ ಪ್ರವಚನ ಉತ್ತಮವಾಗಿ ನಡೆಯುತ್ತಿದೆ. ಆದರೆ ದಿನಬಳಕೆಯ ವಸ್ತುಗಳನ್ನು ನೀಡುತ್ತಿಲ್ಲ. ಆದ್ದರಿಂದ ನಮ್ಮ ಮನೆಯಿಂದಲೇ ತಟ್ಟೆ, ಲೋಟ, ಹೊದಿಕೆ, ಚಾಪೆ, ದಿಂಬು, ಸೋಪು ತರುತ್ತಿದ್ದೇವೆ ಎಂದು ಅಳಲು ತೋಡಿಕೊಂಡರು.

ತಹಸೀಲ್ದಾರ್ ಶ್ರೀನಿವಾಸ್ ಮಾತನಾಡಿ, ವಿದ್ಯಾರ್ಥಿಗಳಿಗೆ ಮೂಲ ಸೌಕರ್ಯ ದೊರಕುತ್ತಿಲ್ಲ ಎಂಬ ದೂರಿನ ಮೇರೆಗೆ ಶಾಲೆಗೆ ಭೇಟಿ ನೀಡಿ, ವಿದ್ಯಾರ್ಥಿಗಳಿಂದ ಹೇಳಿಕೆ ಪಡೆದಿದ್ದೇವೆ. ಸಂಬಂಧಪಟ್ಟ ಜಿಲ್ಲಾ ಗಿರಿಜನ ಅಭಿವೃದ್ಧಿ ಇಲಾಖೆ ಅಧಿಕಾರಿ ಮಲ್ಲೇಶ್ ಅವರಿಗೆ ದೂರವಾಣಿ ಕರೆ ಮಾಡಿ ತಕ್ಷಣ ಆಶ್ರಮ ಶಾಲೆಗೆ ಭೇಟಿ ನೀಡಿ ಮೂಲ ಸೌಕರ್ಯ ಕಲ್ಪಿಸುವಂತೆ ತಿಳಿಸಿದ್ದೇನೆ ಎಂದರು.

ಏಕಲವ್ಯ ಮಾದರಿ ವಸತಿ ಶಾಲೆ ಪೋಷಕರ ಸಮಿತಿ ಅಧ್ಯಕ್ಷ ಜಿ.ಸ್ವಾಮಿ ಮಾತನಾಡಿ, ಏಕಲವ್ಯ ಮಾದರಿ ವಸತಿ ಶಾಲೆಯಲ್ಲಿ ಗ್ರಾಮೀಣ ಮಕ್ಕಳು ಉತ್ತಮ ಶಿಕ್ಷಣ ಪಡೆಯಬೇಕೆಂಬ ಸದುದ್ದೇಶದಿಂದ ಸುಸಜ್ಜಿತ ಕಟ್ಟಡ, ಗುಣಮಟ್ಟದ ಶಿಕ್ಷಕರು, ವಿಶಾಲ ಮೈದಾನ, ಅತ್ಯುತ್ತಮ ಕಲಿಕಾ ವ್ಯವಸ್ಥೆ ಕಲ್ಪಿಸಲಾಗಿದೆ. ಆದರೂ ಶಾಲೆಯಲ್ಲಿ ಮಕ್ಕಳಿಗೆ ಕನಿಷ್ಠ ಸವಲತ್ತುಗಳನ್ನು ನೀಡದೆ ವಂಚನೆ ಮಾಡಲಾಗಿದೆ. ಈ ಸಂಬಂಧ ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಚರ್ಚಿಸಿದ್ದೇನೆ ಎಂದರು.

ತಾಲೂಕು ಆರೋಗ್ಯಾಧಿಕಾರಿ ಡಾ.ರವಿಕುಮಾರ್ ವಸತಿ ಶಾಲೆ ಅಡುಗೆ ಮನೆಗೆ ತೆರಳಿ ಉಪಹಾರ ಪರಿಶೀಲಿಸಿದರು. ಈ ವೇಳೆ ಪೋಷಕರು ಮಕ್ಕಳಿಗೆ 6 ತಿಂಗಳಿಂದ ಮೂಲ ಸೌಕರ್ಯ ಸಿಗುತ್ತಿಲ್ಲ ಎಂದು ಹಲವು ಬಾರಿ ಜಿಲ್ಲಾ ಗಿರಿಜನ ಅಭಿವೃದ್ಧಿ ಅಧಿಕಾರಿ ಮಲ್ಲೇಶ್‌ಗೆ ತಿಳಿಸಿದ್ದರೂ ಇದುವರೆಗೂ ಆಶ್ರಮ ಶಾಲೆಗೆ ಭೇಟಿ ನೀಡಿಲ್ಲ ಎಂದು ಆರೋಪಿಸಿದರು.

ಈ ಸಂದರ್ಭ ಪೋಷಕರಾದ ಸೋಮೇಶ್, ಸಿದ್ದರಾಜು, ಲ್ಯಾಂಡ್ ಸೊಸೈಟಿ ಮಾಜಿ ಅಧ್ಯಕ್ಷ ಪುಟ್ಟಬಸವಯ್ಯ, ವಾರ್ಡನ್ ಆರತಿ, ಸಿಬ್ಬಂದಿಗಳಾದ ಲೋಕೇಶ್, ರವೀಶ್, ಅಜಯ್ ಇನ್ನಿತರರಿದ್ದರು.

ಕನ್ನಡ ಉಳಿಸಲು ಸಮುದಾಯದ ಸಹಕಾರವೂ ಅಗತ್ಯ

ಮೈಸೂರಲ್ಲಿ ನಿರ್ದೇಶಕ ನಾಗತಿಹಳ್ಳಿ ಚಂದ್ರಶೇಖರ್ ಅಭಿಪ್ರಾಯ

ಮೈಸೂರು, ನ.7(ಜಿಎ)–ಕನ್ನಡ ಉಳಿಸುವುದು ಕೇವಲ ಸರ್ಕಾರದ ಕೆಲಸವಲ್ಲ. ಇದಕ್ಕೆ ಸಮುದಾಯವೂ ಕೈ ಜೋಡಿಸಬೇಕು ಎಂದು ಲೇಖಕ, ಚಲನಚಿತ್ರ ನಿರ್ದೇಶಕ ನಾಗತಿಹಳ್ಳಿ ಚಂದ್ರಶೇಖರ್ ಅಭಿಪ್ರಾಯಪಟ್ಟರು.

ಮೈಸೂರು ವಿಶ್ವವಿದ್ಯಾನಿಲಯದ ಕ್ರಾಫರ್ಡ್ ಹಾಲ್‌ನಲ್ಲಿ ಗುರುವಾರ ಹಮ್ಮಿಕೊಂಡಿದ್ದ 69ನೇ ಕನ್ನಡ ರಾಜ್ಯೋತ್ಸವ ಸಮಾರಂಭದಲ್ಲಿ "ನಮ್ಮ ಕನ್ನಡವನ್ನು ವಿಶ್ವದರ್ಜೆಗೇರಿಸುವ ಸಾಧ್ಯತೆಗಳು" ಎಂಬ ವಿಷಯದ ಕುರಿತು ಉಪನ್ಯಾಸ ನೀಡಿ, ಮಾತನಾಡಿದರು.

ಕನ್ನಡದ ಮಗುವಿಗೆ ಜಾಗತಿಕವಾಗಿ ನಡೆಯುತ್ತಿರುವ ಎಲ್ಲಾ ವಿದ್ಯಮಾನಗಳು ಕನ್ನಡದಲ್ಲೇ ಪರಿಚಯವಾಗಬೇಕು. ಎಲ್ಲಿ ಸಾಧ್ಯವೋ ಅಂತಹ ಕಡೆಗಳಲ್ಲಿ ಗರಿಷ್ಠ ಮಟ್ಟದಲ್ಲಿ ಕನ್ನಡವನ್ನೇ ಬಳಸಬೇಕು. ಕನ್ನಡದಲ್ಲೇ ವ್ಯವಹಾರ ಮಾಡಬೇಕು. ಚಿನ್ನ ಹಳೆಯದಾದರೇನು? ಅದನ್ನು ಕರಗಿಸಿ ಈಗಿನ ಕಾಲಕ್ಕೆ ತಕ್ಕಂತೆ ಒಡವೆ ಮಾಡಿಸಿಕೊಳ್ಳಿ ಎಂದು ಕುವೆಂಪು ಅವರು ಹೇಳಿದ್ದಾರೆ. ಅದರಂತೆ ಕನ್ನಡ ಭಾಷೆಯ ವಿಷಯದಲ್ಲೂ ಅನುಸರಣೆ ಮಾಡುವ ಅಗತ್ಯವಿದೆ ಎಂದರು.

ಭಾಷೆಯ ಅಭಿವೃದ್ಧಿ ಮತ್ತು ಬೆಳವಣಿಗೆಗಾಗಿ ಸರ್ಕಾರ ಮಟ್ಟದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಕನ್ನಡ ಪುಸ್ತಕ ಪ್ರಾಧಿಕಾರ ಹಾಗೂ ಕನ್ನಡ ಸಾಹಿತ್ಯ ಪರಿಷತ್ತು ಇದೆ. ಆದರೆ, ಹೊಸ ಕಾಲದ ಅಗತ್ಯಕ್ಕೆ ಹೊಂದಿಕೊಳ್ಳುವಂತಹ ಕನ್ನಡದ ಫಾಂಟ್ ಇರುವ ಒಂದು ಅಧಿಕೃತ ತಂತ್ರಾಂಶವನ್ನು ರೂಪಿಸಲು ಇಲ್ಲಿಯವರೆಗೂ ಸಾಧ್ಯವಾಗಿಲ್ಲ. ಇದು ಭಾಷಾ ಬೆಳವಣಿಗೆಗೆ ದೊಡ್ಡ ಹಿನ್ನಡೆಯಾಗಿದೆ ಎಂದು ಅಭಿಪ್ರಾಯಿಸಿದರು.

ಗ್ರಾಮ ಪಂಚಾಯಿತಿಯಿಂದ ವಿಧಾನಸೌಧದ ವರೆಗೂ, ಪ್ರಾಥಮಿಕ ಶಿಕ್ಷಣದಿಂದ ಉನ್ನತ ಶಿಕ್ಷಣದವರೆಗೆ ಅನುಕೂಲವಾಗುವ ಸಶಕ್ತ ಸದೃಢ ತಂತ್ರಾಂಶವೊಂದು ಕನ್ನಡ ಭಾಷೆಗೆ ಅಗತ್ಯವಿದೆ. ಕನ್ನಡದಲ್ಲಿ ಒಂದು ಫಾಂಟ್‌ನಲ್ಲಿ ಬರೆದದ್ದು ಮತ್ತೊಂದು ಫಾಂಟ್‌ಗೆ ಪರಿವರ್ತನೆ ಮಾಡಿದಾಗ ಸಾಕಷ್ಟು ವ್ಯತ್ಯಾಸಗಳಾಗುತ್ತಿವೆ. ಇದರಿಂದ ಲೇಖಕರು, ಬರಹಗಾರರು ಬರೆಯುವ ಬರಹಗಳು ಮುದ್ರಣಕ್ಕೆ ಹೋಗುವಾಗ ಅರ್ಥಗಳು ಬೇರೆಯಾಗಿ ಅನರ್ಥವಾಗುವ ಸಂಭವ ಇರುತ್ತವೆ. ಆದ್ದರಿಂದ ಸರ್ಕಾರ ಐಟಿ ಕ್ಷೇತ್ರದವರನ್ನು ಒಟ್ಟುಗೂಡಿಸಿ, ಎಲ್ಲರೂ ಅಳವಡಿಸಿಕೊಳ್ಳಬಹುದಾದ ಹೊಸ ಸಾಫ್ಟ್‌ವೇರ್ ಸಿದ್ಧಪಡಿಸಬೇಕು ಎಂದರು.

ಇಂದು ಭಾರತದಲ್ಲಿ 45 ದಶಲಕ್ಷ ಜನರು ಫೇಸ್ ಬುಕ್ ಬಳಸುತ್ತಾರೆ. 5 ದಶಲಕ್ಷ ಜನರು ಇನ್ಸ್ಟಾಗ್ರಾಂ ಖಾತೆದಾರರು ಇದ್ದಾರೆ. 27 ಮಿಲಿಯನ್ ಜನರು 'ಎಕ್ಸ್' ಖಾತೆ ಹೊಂದಿದ್ದಾರೆ. ಇನ್ನೂ ವಿಶ್ವದಲ್ಲಿ 476 ಮಿಲಿಯನ್ ಜನರು ಯೂಟ್ಯೂಬ್ ವೀಕ್ಷಣೆ ಮಾಡುತ್ತಾರೆ. 535 ಮಿಲಿಯನ್ ಜನರು ವಾಟ್ಸ್‌ಆಪ್ ಬಳಕೆ ಮಾಡುತ್ತಾರೆ. ಈ ಅಂಕಿ ಅಂಶದಲ್ಲಿ ಕರ್ನಾಟಕದ ಜನರೂ ಇದ್ದಾರೆ. ಜಾಲತಾಣಗಳಲ್ಲಿ ಕನ್ನಡ ಬೆಳವಣಿಗೆಯನ್ನು ಗಮನಿಸಿದರೆ ಭಯ ಮತ್ತು ದಿಗಿಲು ಉಂಟಾಗುತ್ತದೆ. ಹಾಗಾಗಿ ಸಾಮಾಜಿಕ ಜಾಲತಾಣಗಳು ನಡುವೆ ಹೊಕ್ಕಿರುವ ಈ ಹೊತ್ತಿನಲ್ಲಿ ಭಾಷಾ ಸಾಂಸ್ಕೃತಿಕ ಕಾರಣಕ್ಕಾಗಿ ಸಾಮುದಾಯಿಕ ಯೋಜನೆ ಅಗತ್ಯವಾಗಿದೆ ಎಂದು ತಿಳಿಸಿದರು.

ನಾನು ಓದಿದ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಮುಂದಿನ ವರ್ಷದಿಂದ ದತ್ತಿ ಬಹುಮಾನ ಇಡುತ್ತಿದ್ದೇನೆ. ಕನ್ನಡದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಇದು ಸಲ್ಲಬೇಕು ಎಂದು ಘೋಷಿಸಿದರು. ಕಾರ್ಯಕ್ರಮದಲ್ಲಿ ಮೈಸೂರು ವಿವಿ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್, ಕುಲಸಚಿವೆ ವಿ.ಆರ್.ಶೈಲಜಾ ಉಪಸ್ಥಿತರಿದ್ದರು.




ಮೈಸೂರು ವಿಶ್ವವಿದ್ಯಾನಿಲಯದ ಕ್ರಾಫರ್ಡ್ ಹಾಲ್‌ನಲ್ಲಿ ಗುರುವಾರ ಹಮ್ಮಿಕೊಂಡಿದ್ದ 69ನೇ ಕನ್ನಡ ರಾಜ್ಯೋತ್ಸವ ಸಮಾರಂಭದಲ್ಲಿ ಭುವನೇಶ್ವರಿ ಭಾವಚಿತ್ರಕ್ಕೆ ಚಿತ್ರ ನಿರ್ದೇಶಕ ನಾಗತಿಹಳ್ಳಿ ಚಂದ್ರಶೇಖರ್, ವಿವಿ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್, ಕುಲಸಚಿವೆ ವಿ.ಆರ್.ಶೈಲಜಾ ಪುಷ್ಪಾರ್ಚನೆ ಮಾಡಿದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	**(ದೂ: 2521923)**
ಮಾರ್ಟಿನ್ (ಕ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	**(ದೂ: 2422871)**
ಬಘೀರ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	**(ದೂ: 2497199)**
ಭೂಲ್ ಭುಲಯ್ಯ 3 (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	**(ಮೊ:9900820093)**
ಸಂಗೀತಾ ಸಂತೋಷ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಬಘೀರ (ಕ)	4 ಪ್ರದರ್ಶನಗಳು
ರಾಜಕಮಲ್	
ಅಮರನ್ (ಕ)	4 ಪ್ರದರ್ಶನಗಳು
ಸಂಗಂ	
ನವಗ್ರಹ (ಕ)	4 ಪ್ರದರ್ಶನಗಳು
ಲಿಡೋ	
ಎಲಾ ಕುನ್ನಿ (ಕ)	2 ಪ್ರದರ್ಶನಗಳು
ಸಿಂಗಂ ಅಗೇನ್ (ಹಿಂ)	2 ಪ್ರದರ್ಶನಗಳು
ತಿಬ್ಬಾದೇವಿ	
ಸಿಂಗಂ ಅಗೇನ್ (ಹಿಂ)	4 ಪ್ರದರ್ಶನಗಳು
ಪ್ರಭಾ	
ಸಂಗೀತಾ ಸಂತೋಷ (ಕ)	2 ಪ್ರದರ್ಶನಗಳು
ಆದಿ ಪರ್ವ(ಕ)	2 ಪ್ರದರ್ಶನಗಳು

ವಿಶೇಷ ಸ್ಥಾನಮಾನ ವಿವಾದ: ಜಮ್ಮು–ಕಾಶ್ಮೀರ ವಿಧಾನಸಭೆಯಲ್ಲಿ ತೀವ್ರ ಗದ್ದಲ, ಹೊಡೆದಾಟ



ಶ್ರೀನಗರ, ನ.7– ಜಮ್ಮು ಮತ್ತು ಕಾಶ್ಮೀರ ವಿಧಾನಸಭೆಯಯಲ್ಲಿ ಇಂದು ನಾಟಕೀಯ ವಿದ್ಯಮಾನ ನಡೆದಿದ್ದು, ಆಡಳಿತ ಮತ್ತು ವಿಪಕ್ಷ ನಾಯಕರ ಗದ್ದಲ ಭಾರಿ ಸದ್ದು ಮಾಡಿದೆ.

ಜಮ್ಮು–ಕಾಶ್ಮೀರಕ್ಕೆ ವಿಶೇಷ ಸ್ಥಾನಮಾನ ಮರುಸ್ಥಾಪಿಸುವುದರ ವಿರುದ್ಧ ಪ್ರತಿಭಟನೆಯ ವೇಳೆ ಬಾವಿಗೆ ನುಗ್ಗಿದ ಪ್ರತಿಪಕ್ಷ ಸದಸ್ಯರನ್ನು ಹೊರಹಾಕಲು ಸ್ಪೀಕರ್ ಸೂಚಿಸಿದ ನಂತರ ಬಿಜೆಪಿ ಶಾಸಕರು ಮತ್ತು ಮಾರ್ಷಲ್‌ಗಳ ನಡುವೆ ವಾಗ್ವಾದ ನಡೆಯಿತು.

ಸ್ಪೀಕರ್ ಅಬ್ದುಲ್ ರಹೀಮ್ ರಾಥರ್ ಅವರ ನಿರ್ದೇಶನದ ಮೇರೆಗೆ ಮೂವರು ಬಿಜೆಪಿ ಶಾಸಕರನ್ನು ಪ್ರತ್ಯೇಕಗೊಳಿಸಿದರು.

ನಡೆದ ಘಟನೆಯೇನು?: ಇಂದು ಬೆಳಗ್ಗೆ ವಿಧಾನಸಭೆ ಕಲಾಪ ಆರಂಭವಾಗುತ್ತಿದ್ದಂತೆ ಬಿಜೆಪಿ ಸದಸ್ಯರು ನಿನ್ನೆ ಅಂಗೀಕರಿಸಿದ ನಿರ್ಣಯದ ವಿರುದ್ಧ ಪ್ರತಿಭಟಿಸಿದ್ದರಿಂದ ಗದ್ದಲ ಉಂಟಾಯಿತು. ಬಿಜೆಪಿ ಶಾಸಕ ಮತ್ತು ವಿರೋಧ ಪಕ್ಷದ ನಾಯಕ ಸುನಿಲ್ ಶರ್ಮಾ ಅವರು ನಿರ್ಣಯದ ಮೇಲೆ ಮಾತನಾಡುತ್ತಿದ್ದಾಗ, ಅವಾಮಿ ಇತ್ತೆಹಾದ್ ಪಕ್ಷದ ನಾಯಕ ಮತ್ತು ಶಾಸಕ ಲಂಗೇಟ್ ಶೇಖ್ ಖುರ್ಷೀದ್ ಅವರು ಆರ್ಟಿಕಲ್ 370 ಮತ್ತು 35ಎ ಅನ್ನು ಮರುಸ್ಥಾಪಿಸುವಂತೆ ಬ್ಯಾನರ್ ಪ್ರದರ್ಶಿಸಿ ಸದನದ ಬಾವಿಗಿಳಿದರು.

ಇದರಿಂದ ಕೆರಳಿದ ಬಿಜೆಪಿ ಸದಸ್ಯರು ಕೂಡ ಸದನದ ಬಾವಿಗೆ ಹಾರಿ ಬ್ಯಾನರ್ ಕಿತ್ತು ಹಾಕಿದರು. ಗದ್ದಲ ನಡುವೆಯೇ ಸ್ಪೀಕರ್ ಕಲಾಪವನ್ನು 15 ನಿಮಿಷಗಳ ಕಾಲ ಮುಂದೂಡಿದರು. ಆದರೆ, ಸದನ ಮುಂದೂಡಿದ ಬಳಿಕವೂ ಬಿಜೆಪಿ ಸದಸ್ಯರು ಪ್ರತಿಭಟನೆ ಮುಂದುವರಿಸಿದರು.

ಮತ್ತೆ ಕಲಾಪ ಆರಂಭವಾದಾಗ, ಸ್ಪೀಕರ್ ಅವರು ತಮ್ಮ ಸ್ಥಾನಗಳಲ್ಲಿ ಕುಳಿತುಕೊಳ್ಳಲು ವಿರೋಧ ಪಕ್ಷದ ಸದಸ್ಯರನ್ನು ವಿನಂತಿಸಿದರೂ ಸಹ ಬಿಜೆಪಿ ಸದಸ್ಯರು ಪ್ರತಿಭಟನೆಯನ್ನು ಮುಂದುವರೆಸಿದರು. ಆಗ ಸ್ಪೀಕರ್, 'ನೀವು ನಿಯಮಗಳನ್ನು ಮೀರುತ್ತಿದ್ದೀರಿ, ಕೆಲ ಸದಸ್ಯರ ಚಟುವಟಿಕೆಗಳನ್ನು ಸೂಕ್ಷ್ಮವಾಗಿ ಗಮನಿಸುತ್ತಿದ್ದೇನೆ, ನಿಮ್ಮ ವರ್ತನೆ ಬೇಸರ ತರಿಸುತ್ತಿದೆ, ನಿರ್ದಾಕ್ಷಿಣ್ಯವಾಗಿ ಕ್ರಮ ಕೈಗೊಳ್ಳಬೇಕಾಗುತ್ತದೆ ಎಂದು ನಾಳೆಗೆ ಕಲಾಪ ಮುಂದೂಡಿದರು.

ಆಗ ಬಿಜೆಪಿ ಸದಸ್ಯ ಸುನಿಲ್ ಶರ್ಮ ನ್ಯಾಷನಲ್ ಕಾನ್ಫರೆನ್ಸ್ ನಾಯಕರ ವಿಶೇಷ ಸ್ಥಾನಮಾನದ ನಾಟಕವು ಕೊನೆಗೊಳ್ಳಬೇಕೆಂದು ನಾನು ಬಯಸುತ್ತೇನೆ ಎಂದು ಹೇಳಿದ್ದು, ಇದು ಆಡಳಿತ ಪಕ್ಷ ಸದಸ್ಯರನ್ನು ಕೆರಳಿಸಿತು.

ನಿನ್ನೆ ಜಮ್ಮು–ಕಾಶ್ಮೀರ ವಿಧಾನಸಭೆಯಲ್ಲಿ ಧ್ವನಿ ಮತದ ಮೂಲಕ ಆರ್ಟಿಕಲ್ 370 ಮರುಸ್ಥಾಪನೆಯ ನಿರ್ಣಯವನ್ನು ವಿಧಾನಸಭೆ ಅಂಗೀಕರಿಸಿದ ನಂತರ ಬಿಜೆಪಿ ಶಾಸಕರು ಪ್ರತಿಭಟನೆ ನಡೆಸಿದರು. ಬಿಜೆಪಿ ಸದಸ್ಯರು 'ಬಲಿದಾನ್ ಹುವೇ ಜಹಾನ್ ಮುಖರ್ಜಿ ವೋ ಕಾಶ್ಮೀರ ಹಮಾರಾ ಹೈ' ಎಂದು ಘೋಷಣೆಗಳನ್ನು ಕೂಗಿದರು, ಆಗ ನ್ಯಾಷನಲ್ ಕಾನ್ಫರೆನ್ಸ್ ಶಾಸಕರು 'ಜಿಸ್ ಕಾಶ್ಮೀರ್ ಕೋ ಖೂನ್ ಸೇ ಸೀಂಚಾ, ವೋ ಕಾಶ್ಮೀರ್ ಹಮಾರಾ ಹೈ' ಎಂದು ಹೇಳಿದರು.

ಇಂದು ಗೀತಗಾಯನ ಕಾರ್ಯಕ್ರಮ

ಮೈಸೂರು, ನ.7(ಜಿಎ)–ಮೈಸೂರಿನ ಮೋಹನ ಮಾಧುರ್ಯ ಕಲಾ ರಸಿಕರ ಸ್ನೇಹ ಬಳಗದ ವತಿಯಿಂದ ನ.8ರಂದು ಸಂಜೆ 4ಗಂಟೆಗೆ ನಾದಬ್ರಹ್ಮ ಸಂಗೀತ ಸಭಾದಲ್ಲಿ ದಿವಂಗತ ಶಂಕರ್‌ನಾಗ್, ಅನಂತ್‌ನಾಗ್ ನಟಿಸಿರುವ ಚಿತ್ರಗಳ ಗೀತ ಗಾಯನ ಕಾರ್ಯಕ್ರಮ ಆಯೋಜಿಸಲಾಗಿದೆ. ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಬಳಗದ ಸಂಸ್ಥಾಪಕಿ ಮೋಹನ್ ಕುಮಾರಿ ಈ ವಿಷಯ ತಿಳಿಸಿ, ಇದು ಕರೋಕೆ ಕಾರ್ಯಕ್ರಮವಾಗಿದ್ದು, 10 ಮಂದಿ ಗಾಯಕರು ಪಾಲ್ಗೊಳ್ಳಲಿದ್ದಾರೆ. 30 ರಿಂದ 35 ಹಾಡುಗಳನ್ನು ಪ್ರಸ್ತುತಪಡಿಸಲಿದ್ದಾರೆ ಎಂದರು. ಸುದ್ದಿಗೋಷ್ಠಿಯಲ್ಲಿ ನಾರಾಯಣಸ್ವಾಮಿ, ವಿಜಯಶ್ರೀ ಉಪಸ್ಥಿತರಿದ್ದರು.

ನೇಗಿಲಯೋಗಿ ಮಹಿಳಾ ಕ್ಷೇಮಾಭಿವೃದ್ಧಿ ಸಂಘದಿಂದ ರಾಜ್ಯೋತ್ಸವ



ಮೈಸೂರಿನ ಮರುಳೇಶ್ವರ ಭವನದಲ್ಲಿ ನೇಗಿಲಯೋಗಿ ಮಹಿಳಾ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ನಡೆದ ಕನ್ನಡ ರಾಜ್ಯೋತ್ಸವ

ಮೈಸೂರು, ನ.7(ಜಿಎ)–ಮೈಸೂರಿನ ಮರುಳೇಶ್ವರ ಭವನದಲ್ಲಿ ನೇಗಿಲಯೋಗಿ ಮಹಿಳಾ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ಗುರುವಾರ ಕನ್ನಡ ರಾಜ್ಯೋತ್ಸವವನ್ನು ಆಚರಿಸಲಾಯಿತು.

ಈ ವೇಳೆ ಸಂಘದ ಅಧ್ಯಕ್ಷೆ ಶೋಭ ರಮೇಶ್ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ನಮ್ಮ ಮಾತೃಭಾಷೆಯಾದ ಕನ್ನಡವೇ ಕನ್ನಡಿಗರಾದ ನಮ್ಮೆಲ್ಲರಿಗೂ ಶ್ರೇಷ್ಠವಾದ ಭಾಷೆಯಾಗಿದೆ. ಸುಮಾರು 2000 ಕ್ಕೂ ಹೆಚ್ಚು ವರ್ಷಗಳ ಇತಿಹಾಸವನ್ನು ಹೊಂದಿರುವ ಅತ್ಯಂತ ಪ್ರಾಚೀನ ಭಾಷೆಗಳಲ್ಲಿ ಒಂದಾಗಿರುವ ಕನ್ನಡ ಭಾಷೆಯು ಪರಕೀಯ ಭಾಷೆಯ ವ್ಯಾಮೋಹದಿಂದ ಸೊರಗುತ್ತಿದೆ. ಕನ್ನಡ ಬಳಸುವುದೇ ಅವಮಾನ ಎಂಬ ಹಂತಕ್ಕೆ ಇಂದಿನ ಯುವ ಸಮೂಹ ಮತ್ತು ಪೋಷಕರು ಬಂದಿದ್ದಾರೆ. ಇದು ಅತ್ಯಂತ ಅಪಾಯಕಾರಿ ಎಂದು ಆತಂಕ ವ್ಯಕ್ತಪಡಿಸಿದರು.

ಕನ್ನಡವನ್ನು ಹೆಚ್ಚು ಹೆಚ್ಚು ಬಳಸುವ ಮೂಲಕ ಅದರ ಬೆಳವಣಿಗೆಗೆ ನಾವೆಲ್ಲ ದುಡಿಯಬೇಕಾಗಿದೆ. ಬೇರೆ ಭಾಷೆಯನ್ನು ಗೌರವಿಸೋಣ. ನಮ್ಮ ಭಾಷೆಯನ್ನು ಪ್ರೀತಿಸಿ, ಬಳಸಿ ಬೆಳೆಸೋಣ. ಎಂದಿಗೂ ನಮ್ಮ ತಾಯಿ ನಮ್ಮವಳು ಎಂದರು.

ಕಾರ್ಯಕ್ರಮದಲ್ಲಿ ವಿವಿಧ ಆಟೋಟಗಳಾದ ಚಮಚ ನಿಂಬೆಹಣ್ಣಿನ ಓಟ, ಬಳೆಗಳನ್ನು ಬೆರಳಿನಲ್ಲಿ ಹಿಡಿದು ಗುರಿ ಮುಟ್ಟುವುದು, ಪಗಡೆ, ಅಳಿಗುಳಿ ಮನೆ, ಮುಂತಾದ ಮನರಂಜನಾ ಸ್ಪರ್ಧೆಗಳನ್ನು ಏರ್ಪಡಿಸಿ, ಬಹುಮಾನಗಳನ್ನು ವಿತರಿಸಲಾಯಿತು. ಈ ವೇಳೆ 100ಕ್ಕೂ ಹೆಚ್ಚು ಸದಸ್ಯರು, ಭಾಗವಹಿಸಿ, ಕನ್ನಡ ನಾಡಿನ ಸಂಕೇತವಾದ ಹಳದಿ ಮತ್ತು ಕೆಂಪು ಬಣ್ಣದ ಉಡುಗೆ ಧರಿಸಿ ಸಂಭ್ರಮದಿಂದ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದು ವಿಶೇಷವಾಗಿತ್ತು.

ಕಾರ್ಯಕ್ರಮದಲ್ಲಿ ಖಜಾಂಚಿ ಅನಿತ ಹೇಮಂತ್, ನಿರ್ದೇಶಕರುಗಳಾದ ಲತಾ ಸುನಿಲ್, ಅನಿತ ಮನೋಹರ್, ಲಲಿತಾ ರಂಗನಾಥ್, ಮಂಜುಳಾ ಭದ್ರೇಗೌಡ, ಸವಿತಾ, ಟಿ ಎನ್ ಗೌರಿ, ಸುವರ್ಣ ರಾಜು ಸೇರಿದಂತೆ ಸದಸ್ಯರು, ಭಾಗವಹಿಸಿದ್ದರು.

ಜೆಟ್ ಏರ್‌ವೇಸ್ ಆಸ್ತಿ ಹರಾಜಿಗೆ ಸುಪ್ರೀಂಕೋರ್ಟ್ ಆದೇಶ



ನವದೆಹಲಿ, ನ.7– ಸುಪ್ರೀಂಕೋರ್ಟ್ ಗುರುವಾರ ತನ್ನ ವಿಶೇಷ ಸಾಂವಿಧಾನಿಕ ಅಧಿಕಾರವನ್ನು ಬಳಸಿ ವಿಮಾನಯಾನ ಸಂಸ್ಥೆ ಜೆಟ್ ಏರ್‌ವೇಸ್‌ನ ಆಸ್ತಿಯನ್ನು ಹರಾಜು ಹಾಕಲು ಆದೇಶ ನೀಡಿದೆ.

ಜೆಟ್ ಏರ್‌ವೇಸ್‌ನ ನಿರ್ಣಯ ಯೋಜನೆಯನ್ನು ಎತ್ತಿಹಿಡಿಯುವ ರಾಷ್ಟ್ರೀಯ ಕಂಪೆನಿ ಕಾನೂನು ಮೇಲ್ಮನವಿ ನ್ಯಾಯಮಂಡಳಿ ತೀರ್ಪನ್ನು ಮತ್ತು ವಿಮಾನಯಾನ ಸಂಸ್ಥೆಯ ಮಾಲೀಕತ್ವವನ್ನು ಜಲನ್ ಕಲ್ರಾಕ್ ಕನ್ಸೋರ್ಟಿಯಂಗೆ ವರ್ಗಾಯಿಸಲು ನೀಡಿದ್ದ ಅನುಮೋದನೆಯನ್ನು, ಮುಖ್ಯ ನ್ಯಾಯಮೂರ್ತಿ ಡಿ.ವೈ ಚಂದ್ರಚೂಡ್ ಮತ್ತು ನ್ಯಾಯಮೂರ್ತಿಗಳಾದ ಜೆ.ಬಿ ಪರ್ದಿವಾಲಾ ಮತ್ತು ಮನೋಜ್ ಮಿಶ್ರಾ ಅವರನ್ನೊಳಗೊಂಡ ನ್ಯಾಯಪೀಠವು ತಳ್ಳಿಹಾಕಿದೆ.

ಜೆಕೆಸಿ ಪರವಾಗಿ ಜೆಟ್ ಏರ್‌ವೇಸ್‌ನ ನಿರ್ಣಯ ಯೋಜನೆಯನ್ನು ಎತ್ತಿಹಿಡಿಯುವ ಎನ್‌ಸಿಎಲ್‌ಎಟಿ ನಿರ್ಧಾರದ ವಿರುದ್ಧ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಮತ್ತು ಇತರ ಸಾಲಗಾರರ ಮನವಿ ಸಲ್ಲಿಕೆಗೆ ನ್ಯಾಯಮೂರ್ತಿ ಪರ್ದಿವಾಲಾ ಅವರು ಅವಕಾಶ ನೀಡಿದರು.

ಸಾಲಗಾರರು, ಉದ್ಯೋಗಿಗಳು ಮತ್ತು ಇತರ ಮಧ್ಯಸ್ಥಗಾರರ ಹಿತಾಸಕ್ತಿಯನ್ನು ಗಮನಿಸಿ ವಿಮಾನಯಾನ ಸಂಸ್ಥೆಯನ್ನು ಹರಾಜು ಹಾಕಲು ನಿರ್ಧರಿಸಲಾಗಿದೆ. ಎನ್‌ಸಿಎಲ್ ಎಟಿ ನಿರ್ಧಾರವನ್ನು ಇದೇ ಸಂದರ್ಭದಲ್ಲಿ ನ್ಯಾಯಪೀಠ ತರಾಟೆಗೆ ತೆಗೆದುಕೊಂಡಿತು.

ಸರ್ವೋಚ್ಚ ನ್ಯಾಯಾಲಯವು ಸಂವಿಧಾನದ 142 ನೇ ವಿಧಿಯ ಅಡಿಯಲ್ಲಿ ತನ್ನ ಅಧಿಕಾರವನ್ನು ಬಳಸಿಕೊಂಡು ಆದೇಶ ನೀಡಿದೆ. ಯಾವುದೇ ವಿಷಯದಲ್ಲಿ ಸಂಪೂರ್ಣ ನ್ಯಾಯವನ್ನು ಖಚಿತಪಡಿಸಿಕೊಳ್ಳಲು ಆದೇಶಗಳನ್ನು ಮತ್ತು ತೀರ್ಪುಗಳನ್ನು ಮಾಡುವ ಅಧಿಕಾರವನ್ನು ಸುಪ್ರೀಂ ಕೋರ್ಟ್ ಹೊಂದಿದೆ.

ಮಾರ್ಚ್ 12ರಂದು ಎನ್‌ಸಿಎಲ್‌ಎಟಿ ವಿಮಾನಯಾನ ಸಂಸ್ಥೆಯ ನಿರ್ಣಯ ಯೋಜನೆಯನ್ನು ಎತ್ತಿಹಿಡಿದು ಅದರ ಮಾಲೀಕತ್ವವನ್ನು ಜೆಕೆಸಿಗೆ ವರ್ಗಾಯಿಸಲು ಅನುಮೋದಿಸಿತು.

ಎಸ್‌ಬಿಐ, ಪಂಜಾಬ್ ನ್ಯಾಷನಲ್ ಬ್ಯಾಂಕ್ ಮತ್ತು ಜೆಸಿ ಫ್ಲವರ್ಸ್ ಅಸೆಟ್ ರೀಕನ್‌ಸ್ಟ್ರಕ್ಷನ್ ಪ್ರೈವೇಟ್ ಲಿಮಿಟೆಡ್ ಎನ್‌ಸಿಎಲ್‌ಎಟಿ ತೀರ್ಪನ್ನು ಪ್ರಶ್ನಿಸಿವೆ.

ವಕ್ಫ್ ವಿವಾದ ಬಿಜೆಪಿ ಸೃಷ್ಟಿ, ನಮ್ಮ ಸರ್ಕಾರ ರೈತರನ್ನು ರಕ್ಷಿಸಲು ಬದ್ಧ

ಡಿಸಿಎಂ ಡಿ.ಕೆ.ಶಿವಕುಮಾರ್ ಭರವಸೆ



ಬೆಂಗಳೂರು, ನ.7(ಕೆಂಸಿ)–ವಕ್ಫ್ ವಿವಾದ ಬಿಜೆಪಿ ಸೃಷ್ಟಿಯಾಗಿದ್ದು, ನಮ್ಮ ಸರ್ಕಾರ ರೈತರನ್ನು ರಕ್ಷಿಸಲು ಬದ್ಧವಾಗಿದ್ದು, ಯಾರನ್ನೂ ಒಕ್ಕಲೆಬ್ಬಿಸುವುದಿಲ್ಲ ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಭರವಸೆ ನೀಡಿದ್ದಾರೆ.


ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ವಕ್ಫ್ ತಿದ್ದುಪಡಿ ಮಸೂದೆ ಸಂಬಂಧ ಜಂಟಿ ಸಂಸದೀಯ ಸಮಿತಿ (ಜೆಪಿಸಿ) ಅಧ್ಯಕ್ಷ ಜಗದಾಂಬಿಕ ಪಾಲ್ ಕರ್ನಾಟಕಕ್ಕೆ ಭೇಟಿ ನೀಡಿರುವ ಕುರಿತು ಪ್ರತಿಕ್ರಿಯಿಸಿದ ಅವರು, ಚುನಾವಣೆ ಹಿನ್ನೆಲೆಯಲ್ಲಿ ಬಿಜೆಪಿ ವಿವಾದ ಸೃಷ್ಟಿಸಿದೆ, ಸಾರ್ವಜನಿಕರ ಆಸ್ತಿಗಳಲ್ಲಿ ವಕ್ಫ್ ಹೆಸರು ರಾಜ್ಯಕ್ಕೆ ಸಂಬಂಧಿಸಿದ ವಿಚಾರ, ಧಾರವಾಡ ಸೇರಿದಂತೆ ರಾಜ್ಯದ ಇತರೆ ಜಿಲ್ಲೆಗಳಲ್ಲಿ ಬಸವರಾಜ ಬೊಮ್ಮಾಯಿ ನೇತೃತ್ವದ ಸರ್ಕಾರವೇ ವಕ್ಫ್ ಹೆಸರಿನಲ್ಲಿ ನೋಟಿಸ್ ನೀಡಿದೆ, ಈಗ ನಮ್ಮ ಮೇಲೆ ಆರೋಪ ಮಾಡುತ್ತಿದ್ದಾರೆ, ಬಿಜೆಪಿಗೆ ಜನ ಶಾಂತಿಯುತವಾಗಿ ಬದುಕುವುದು ಬೇಕಿಲ್ಲ ಎಂದರು.

ಮಹಾರಾಷ್ಟ್ರ ಹಾಗೂ ರಾಜ್ಯದ ಉಪ ಚುನಾವಣೆ ಸಮಯದಲ್ಲಿ ಅನಗತ್ಯ ಗೊಂದಲ ಸೃಷ್ಟಿ ಮಾಡುತ್ತಿದ್ದಾರೆ, ಜನ ಬುದ್ಧಿವಂತರು ಅವರಿಗೆ ತಕ್ಕಪಾಠ ಕಲಿಸಲಿದ್ದಾರೆ, ನಾವು ದಾಖಲೆಗಳಲ್ಲಿ ಆಗಿರುವ ತಪ್ಪುಗಳನ್ನು ಸರಿಪಡಿಸಿ ರೈತರನ್ನು ರಕ್ಷಣೆ ಮಾಡುತ್ತೇವೆ, ಈ ವಿಚಾರವಾಗಿ ಮುಖ್ಯಮಂತ್ರಿಗಳು ಹಾಗೂ ಕಂದಾಯ ಸಚಿವರು ಸ್ಪಷ್ಟನೆ ನೀಡಿದ್ದಾರೆ.

ರಾಜ್ಯದ ವಿಚಾರಕ್ಕೆ ಭೇಟಿ ನೀಡುವ ಅಧಿಕಾರ ಜೆಪಿಸಿಗಿಲ್ಲ, ಭೇಟಿ ನೀಡುವುದಾದರೆ ಸರ್ಕಾರ ಹಾಗೂ ಅಧಿಕಾರಿಗಳಿಗೆ ಮಾಹಿತಿ ನೀಡಬೇಕು, ಸಮಿತಿಯ ಪೂರ್ಣ ತಂಡ ಭೇಟಿ ನೀಡಬೇಕು, ಕೇವಲ ಸಮಿತಿ ಅಧ್ಯಕ್ಷರು ಬಂದಿದ್ದಾರೆಂದರೆ ಅವರು ಪಕ್ಷದ ಕೆಲಸಕ್ಕಾಗಿ ಬಂದಿದ್ದಾರೆ.

ಸಂಸದರಾದ ಬಸವರಾಜ ಬೊಮ್ಮಾಯಿ ಹಾಗೂ ಕೇಂದ್ರ ಸಚಿವ ವಿ.ಸೋಮಣ್ಣ ಜೊತೆ ಬಂದಿದ್ದಾರೆ, ಇವರಿಬ್ಬರು ಜೆಪಿಸಿ ಸದಸ್ಯರಲ್ಲ ಭೇಟಿ ನೀಡಿರುವುದು ಕೇವಲ ಬಿಜೆಪಿ ಸದಸ್ಯರು, ರಾಜಕೀಯ ಉದ್ದೇಶದಿಂದ ಭೇಟಿ ನೀಡುತ್ತಿದ್ದಾರೆ, ಸಮಿತಿಗೆ ಅಧಿಕೃತ ಮಾನ್ಯತೆ ಇಲ್ಲ, ಅವರು ಏನಾದರೂ ರಾಜಕೀಯ ಮಾಡಲಿ, ಸತ್ಯಾಂಶವೇ ಬೇರೆ ಎಂದರು.

ಚನ್ನಪಟ್ಟಣ ಉಪ ಚುನಾವಣೆ: ಪ್ರತಿಕ್ರಿಯೆ ನೀಡಲು ಜಿಟಿಡಿ ನಕಾರ



ಮೈಸೂರು, ನ.7–ರಾಜ್ಯದಲ್ಲಿ ಗಮನ ಸೆಳೆಯುತ್ತಿರುವ ಚನ್ನಪಟ್ಟಣ ವಿಧಾನಸಭಾ ಕ್ಷೇತ್ರದ ಉಪ ಚುನಾವಣೆ ಕುರಿತು ಶಾಸಕ ಜಿ.ಟಿ.ದೇವೇಗೌಡ ಪ್ರತಿಕ್ರಿಯೆ ನೀಡಲು ನಿರಾಕರಿಸಿದ್ದಾರೆ. ಮುಡಾ ಸಾಮಾನ್ಯ ಸಭೆಯಲ್ಲಿ ಪಾಲ್ಗೊಳ್ಳಲು ಆಗಮಿಸಿದ ಜಿಟಿಡಿ ಬೆಳಗ್ಗೆ ಪತ್ರಕರ್ತರೊಂದಿಗೆ ನಿವೇಶನ ಹಂಚಿಕೆ ಕುರಿತು ಮಾತನಾಡಿದರು. ಉಪ ಚುನಾವಣೆ ಪ್ರಸ್ತಾಪ ಮಾಡುತ್ತಿದ್ದಂತೆ ಪ್ರತಿಕ್ರಿಯೆ ನೀಡಲು ನಿರಾಕರಿಸಿ, ಮುಡಾ ಕಚೇರಿಗೆ ಹೋದರು. ಸಭೆ ನಡೆದ ಬಳಿಕವೂ ಸಭೆಯಲ್ಲಿ ಆದ ಬೆಳವಣಿಗೆ ಬಗ್ಗೆ ಮಾಹಿತಿ ನೀಡಿದರು. ಆದರೆ, ಮತ್ತೆ ಉಪ ಚುನಾವಣೆ ಕುರಿತು ಕೇಳಿದ ಪ್ರಶ್ನೆ, ಪ್ರತಿಕ್ರಿಯಿಸದೆ ವಾಪಸ್ಸಾದರು.

ದಾಖಲೆಗಳು ನಾಡಿನ ಅಭಿವೃದ್ಧಿಗೆ ಪೂರಕ, ಸಂರಕ್ಷಣೆ ಅಗತ್ಯ

ದಾಖಲೆಗಳ ಛಾಯಾಚಿತ್ರ ಪ್ರದರ್ಶನದಲ್ಲಿ ಪತ್ರಾಗಾರ ಇಲಾಖೆ ನಿರ್ದೇಶಕ ಗವಿಸಿದ್ದಯ್ಯ ಅಭಿಪ್ರಾಯ

ಮೈಸೂರು, ನ.7(ಜಿಎ)– ದಾಖಲೆಗಳು ಇತಿಹಾಸದ ಮೂಲಾಧಾರಗಳಾಗಿವೆ. ದಾಖಲೆಗಳು ನಾಡಿನ ಅಭಿವೃದ್ಧಿಗೆ ಪೂರಕವಾಗಿದ್ದು, ದಾಖಲೆಗಳ ಸಂರಕ್ಷಣೆ ನಮ್ಮೆಲ್ಲರ ಹೊಣೆಯಾಗಿದೆ ಎಂದು ಪತ್ರಾಗಾರ ಇಲಾಖೆಯ ನಿರ್ದೇಶಕರಾದ ಡಾ. ಗವಿಸಿದ್ದಯ್ಯ ತಿಳಿಸಿದರು.

ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆ, ಎಂ.ಎಂ.ಕೆ ಮತ್ತು ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಮಹಿಳಾ ಮಹಾವಿದ್ಯಾಲಯ ಕನ್ನಡ ವಿಭಾಗ ಮತ್ತು ಐಕ್ಯೂಎಸಿ ಘಟಕ ಇವರ ಸಹಯೋಗದೊಂದಿಗೆ ಆಯೋಜಿಸಲಾಗಿದ್ದ, ಸುವರ್ಣ ಕರ್ನಾಟಕ 50: ಸಂಭ್ರಮಾಚರಣೆ ಐತಿಹಾಸಿಕ ದಾಖಲೆಗಳ ಛಾಯಾಚಿತ್ರಗಳ ಪ್ರದರ್ಶನವನ್ನು ಉದ್ಘಾಟಿಸಿ ಅವರು ಮಾತನಾಡಿದರು.



ಮೈಸೂರಿನ ರಾಜ್ಯ ಪತ್ರಾಗಾರ ಇಲಾಖೆ, ಎಂ.ಎಂ.ಕೆ ಮತ್ತು ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಮಹಿಳಾ ಮಹಾವಿದ್ಯಾಲಯ ವತಿಯಿಂದ ಆಯೋಜಿಸಿದ್ದ ಸುವರ್ಣ ಕರ್ನಾಟಕ 50: ಸಂಭ್ರಮಾಚರಣೆ ಐತಿಹಾಸಿಕ ದಾಖಲೆಗಳ ಛಾಯಾಚಿತ್ರಗಳ ಪ್ರದರ್ಶನವನ್ನು ಪತ್ರಾಗಾರ ಇಲಾಖೆಯ ನಿರ್ದೇಶಕ ಡಾ. ಗವಿಸಿದ್ದಯ್ಯ ಉದ್ಘಾಟಿಸಿದರು.

1973 ರಲ್ಲಿ ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆ ಸ್ಥಾಪನೆಯಾಗಿದ್ದು, 200 ವರ್ಷಗಳಿಗೂ ಹಳೆಯ ಐತಿಹಾಸಿಕ ನಾಡಿನ ದಾಖಲೆಗಳನ್ನು ಸಂರಕ್ಷಿಸಿ, ದಾಖಲೆಗಳ ಸೇವಾಕಾರ್ಯವನ್ನು ಒದಗಿಸುತ್ತಿದೆ. ಸಾರ್ವಜನಿಕರಿಗೆ, ಸಂಶೋಧಕರಿಗೆ, ಸರ್ಕಾರಿ ಇಲಾಖೆಗಳಿಗೆ ಉಪಯೋಗಕ್ಕಾಗಿ ಪ್ರಕಟಿತ, ಅಪ್ರಕಟಿತ, ಕಡತಗಳು, ಖಾಸಗಿ ದಾಖಲೆಗಳು ಮತ್ತು ಧ್ವನಿ ಇತಿಹಾಸ ದಾಖಲೆಗಳನ್ನು, ಸಂಗ್ರಹಿಸಿ ಮಾಹಿತಿ ಒದಗಿಸುವ ಕೆಲಸ ಮಾಡುತ್ತಿದೆ ಎಂದರು.

ಈ ದಾಖಲೆಗಳು ಕರ್ನಾಟಕದ ಇತಿಹಾಸ, ಮೈಸೂರು ಸಂಸ್ಥಾನದ ಇತಿಹಾಸ, ಕರ್ನಾಟಕ ಏಕೀಕರಣ ಚಳುವಳಿ, ಸ್ವಾತಂತ್ರ್ಯ ಹೋರಾಟದ ಮಾಹಿತಿ, ಮೈಸೂರು, ಕರ್ನಾಟಕ ಆಡಳಿತಾತ್ಮಕ ಮಾಹಿತಿಗಳು, ಸೆನ್ಸಸ್ ವರದಿಗಳು, ಪ್ರಜಾಪ್ರತಿನಿಧಿ ಸಭೆಯ ನಡವಳಿಗಳು, ಮೈಸೂರು ಅರಮನೆ ಆಡಳಿತಕ್ಕೆ ಸಂಬಂಧಿಸಿದಂತೆ ಕಡತಗಳು, ಮೈಸೂರು ಸರ್ಕಾರದ ನಡಾವಳಿಗಳು, ನೇಮಕಾತಿಗಳು, ಅರಣ್ಯ ಇಲಾಖೆಯ ಅಧಿಸೂಚನೆಗಳು, ಭೂಸ್ವಾಧೀನ, ಜಮೀನು ಮುಂತಾದ ಕಂದಾಯ ವಿಷಯಗಳು, ಸ್ಥಳೀಯ ಆದೇಶಗಳು, ಅಂದಿನ ಮದ್ರಾಸ್ ಪ್ರಾಂತ್ಯದ ನಡಾವಳಿಗಳು ಹಾಗೂ ನಾಡು ನುಡಿ ಶ್ರಮಿಸಿದ ಗಣ್ಯ ವ್ಯಕ್ತಿಗಳ ನೆನಪಿನ ಅನುಭವದ ಧ್ವನಿ ಸಂಗ್ರಹ ದಾಖಲೆಗಳಂತಹ ಸುಮಾರು 1780 ರಿಂದ 2019ರವರೆಗೆ ವಿವಿಧ ದಾಖಲೆಗಳನ್ನು ಸಂರಕ್ಷಿಸಲಾಗಿದೆ. ಪ್ರಸ್ತುತ ಇಲಾಖೆಯು ಸುಮಾರು 130 ಕೋಟಿ ದಾಖಲೆಗಳನ್ನು ಡಿಜಟಲೀಕರಣ ಮಾಡಿ ಇಲಾಖೆಯ ವೆಬ್‌ಸೈಟ್ www.kannadasiri.kar.nic.in ವೀಕ್ಷಣೆಗೆ ಲಭ್ಯವಿದೆ ಎಂದು ವಿವರಿಸಿದರು.

ಮೈಸೂರು ವಿವಿ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ನಿವೃತ್ತ ಪ್ರಾಧ್ಯಾಪಕಿ ಡಾ. ಪ್ರೀತಿ ಶುಭಚಂದ್ರ ಮಾತನಾಡಿ, ಅಲ್ಲಮ ಪ್ರಭುಗಳ ವಚನದ ಸಾರಾಂಶವಾದ "ಹಿಂದಿನ ಹೆಜ್ಜೆ ಅರಿಯಲಾಗದೆ, ಮುಂದಿನ ಹೆಜ್ಜೆ ಇಡಲಾಗದು" ಎಂಬಂತೆ, ಭೂತಕಾಲದ ಆಗು–ಹೋಗುಗಳನ್ನು ತಿಳಿದುಕೊಳ್ಳದೇ, ವರ್ತಮಾನದ ಸಮಸ್ಯೆಗಳನ್ನು ನಿವಾರಣೆ ಮಾಡಲು ಸಾಧ್ಯವಾಗುವುದಿಲ್ಲ ಆದ್ದರಿಂದ ಪ್ರತಿಯೊಬ್ಬರಿಗೂ ಚರಿತ್ರೆಯ ಅರಿವು ಬಹಳ ಮುಖ್ಯ ಎಂದು ಸಲಹೆ ನೀಡಿದ ಅವರು, ಜ್ಞಾನದ ಶಾಖೆಯನ್ನು ವಿಸ್ತರಿಸಿಕೊಳ್ಳಲು ಇತಿಹಾಸದ ಪ್ರಜ್ಞೆ ಪ್ರತಿಯೊಬ್ಬರಿಗೂ ಮುಖ್ಯ, ರಾಜ್ಯ ಪಾತ್ರಾಗಾರ ಇಲಾಖೆಯಲ್ಲಿ ನಾನಾ ಬಗೆಯ ಎಲ್ಲಾ ಮಾಹಿತಿಗಳು ಲಭ್ಯವಿದ್ದು, ಇವುಗಳು ಮುಂದಿನ ಪೀಳಿಗೆಯ ಚರಿತ್ರೆಯ ಆಕರಗಳಾಗುತ್ತವೆ ಎಂದರು.

ಕಾರ್ಯಕ್ರಮದಲ್ಲಿ ಪ್ರಾಂಶುಪಾಲರಾದ ಪ್ರೊ.ಎನ್.ಭಾರತಿ, ಪತ್ರಾಗಾರ ಇಲಾಖೆಯ ಹಿರಿಯ ಸಹಾಯಕ ನಿರ್ದೇಶಕ ಹೆಚ್.ಎಲ್.ಮಂಜುನಾಥ್, ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಬಾಲಕಿಯರ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲರಾದ ನಯನ ಕುಮಾರಿ, ಕನ್ನಡ ವಿಭಾಗದ ಮುಖ್ಯಸ್ಥ ಡಾ. ವಿನೋದ ಉಪಸ್ಥಿತರಿದ್ದರು.